ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ

ಸಂಪುಟ 1 ಸಂಚಿಕೆ 21

ಅಕ್ಟೋಬರ್ 21, 2007

ಕನ್ನಡ ವಾರಪತ್ರಿಕೆ

ರೂ. 5/-



ಕರ್ನಾಟಕಕ್ಕೆ ದೆಹಲಿ ಆಡಳಿತ

ಪೇಜ್ 8



ಧರ್ಮಯುದ್ಧವಲ್ಲ ಇದು ಅಂತರ್ಯುದ್ಧ

ಪೇಜ್ 3



ಜನತಾದಳದ ಸೆಕ್ಯುಲರ್ ಸಂದಿಗ್ಧಗಳು

ಲಜ್ಜೆಗೆಟ್ಟ ಬಿಜೆಪಿ

ಪೇಜ್ 12

ಹಳಿ ತಪ್ಪುತ್ತಿರುವ ಯುಪಿಎ



ಮಕ್ಕಳ ಚಿತ್ರ : ಕಲ್ಪನೆ-ಕನಸಿಗೂ ಬರವೇ ?

ಭಾರತಕ್ಕೆ ಅಮೇರಿಕಾದ ವಿಶ್ವಾಸಘಾತುಕತನ

ಇದ್ದದ್ದು ಇದ್ಹಾಂಗ

ಕುತಂತ್ರವೇ ಕಾರಣ

'ಬಿಜೆಪಿ ಶಾಸಕರ ಜೊತೆ ವಲಸೆ ಬರಲು ತಯಾರಾಗಿದ್ದ ಬಿ.ಎಸ್.ಯಡಿಯೂರಪ್ಪ ಅವರಿಗೆ ಮುಖ್ಯಮಂತ್ರಿ ಗಾದಿ ದೊರಕದಿರಲು ಬಿಜೆಪಿ ವರಿಷ್ಠರು ಹಾಗೂ ಸಂಸದ ಅನಂತಕುಮಾರ್ ಮಾಡಿದ ಕುತಂತ್ರವೇ ಕಾರಣ. ಈ ಬಗ್ಗೆ ಒಂದೇ ವೇದಿಕೆಯಲ್ಲಿ ಚರ್ಚೆ ನಡೆಸಲು ಸಿದ್ಧ.

- ಹೆಚ್.ಡಿ.ಕುಮಾರಸ್ವಾಮಿ,
ಮಾಜಿ ಮುಖ್ಯಮಂತ್ರಿ

★

ಬಯಸುವುದಿಲ್ಲ, ಬಂದರೆ ಸಿದ್ಧ

ಸದ್ಯಕ್ಕೆ ನಾವು ಮಧ್ಯಂತರ ಚುನಾವಣೆ ಬಯಸುವುದಿಲ್ಲ. ಚುನಾವಣೆಗೆ ಸೋನಿಯಾ ಗಾಂಧಿ ಅವರು ಸಿದ್ಧರಾಗಿದ್ದರೆ ನಾವು ಅದಕ್ಕೆ ರೆಡಿ.

- ಜ್ಯೋತಿ ಬಸು , ಸಿಪಿಐ(ಎಂ) ಹಿರಿಯ ಧುರೀಣ

★

ಕೆಲ ದಿನಗಳ ಹಿಂದೆ ನಡೆದ ರಾಷ್ಟ್ರೀಯ ಕಾರ್ಯಕಾರಿಣಿ ಸಭೆಯಲ್ಲಿ ಬಿಜೆಪಿಯು ಆರ್ಥಿಕ ಗೊತ್ತುವಳಿಯನ್ನೂ ಅಂಗೀಕರಿಸಲಿಲ್ಲ. ಹಿಂದುತ್ವವನ್ನೇ ಇನ್ನಷ್ಟು ಗಟ್ಟಿಯಾಗಿ ಅಪ್ಪಿಕೊಳ್ಳಲು ಬಿಜೆಪಿ ಹೊರಟಿದೆ. ಕಳೆದ ಸಾರ್ವತ್ರಿಕ ಚುನಾವಣೆಯಲ್ಲಿ ಇದೇ ಧೋರಣೆ ಅದರ ಬಲ ಕುಗ್ಗಿಸಿರುವುದು ಅದಕ್ಕಿನ್ನೂ ಮನವರಿಕೆ ಆದಂತಿಲ್ಲ.

- ಕುಲದೀಪ ನಯ್ಯರ್, ತಮ್ಮ 'ಅಂತರಂಗ' ಅಂಕಣದಲ್ಲಿ

ಇಎಂಎಸ್ ಭವನ ನಿಧಿ

ಎರಡನೇ ಹಂತದ ಸಂಗ್ರಹ



ಹಿಂದಿನ ಮೊತ್ತ	ರೂ. 5,90,500
ಸಿಪಿಐ(ಎಂ) ಧಾರವಾಡ ಜಿಲ್ಲಾ ಸಮಿತಿ ಮೂಲಕ	
ವೆಂಕಟೇಶ್ ಕುಲಕರ್ಣಿ ಬೆಳಗಾಂ/ ಬೆಂಗಳೂರು	2000
ವಿಮಾ ಸಂಗಾತಿಗಳು ಬೆಳಗಾಂ	3600
ವಿಮಾ ಸಂಗಾತಿಗಳು ಹಾವೇರಿ	1700
ವಿಮಾ ಸಂಗಾತಿಗಳು ಕುಮಟಾ	3100
ಸಿಪಿಐ(ಎಂ) ಬೆಂಗಳೂರು ಜಿಲ್ಲಾ ಸಮಿತಿ ಮೂಲಕ	71,012
ವಿಮಾ ಸಂಗಾತಿಗಳು ಬೆಂಗಳೂರು ವಿವರ ಮುಂದೆ ನೀಡಲಾಗುವುದು.	
ದಿನಕರ ಶೆಟ್ಟಿ ಪ್ರಿಂಟೆಕ್ ಸೆಲ್ಯೂಷನ್ಸ್, ಜಯನಗರ, ಬೆಂಗಳೂರು	3000
ಒಟ್ಟು	6,74,912.00

ಒಳ ಮಾತು ಹೊರ ಬಂತು

ಬಿಜೆಪಿ, ಅಧಿಕಾರಕ್ಕಾಗಿ ಅವಕಾಶವಾದಿ ಜಾತ್ಯತೀತತೆ ಪ್ರದರ್ಶಿಸುವ ಮೂಲಕ ಸಿದ್ಧಾಂತದ್ರೋಹ ಬಗೆದಿದೆ. ಈ ಎಲ್ಲಾ ಬೆಳವಣಿಗೆಯಲ್ಲಿ ಬಿಜೆಪಿ ಸಹ ಪಾಲುದಾರವಾಗಿದೆ. ಇತ್ತೀಚೆಗೆ ನಡೆದ ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಅಕ್ರಮ ಎಸಗುವುದರಲ್ಲಿ ತಾವು ಯಾವುದೇ ಪಕ್ಷಕ್ಕಿಂತ ಕಡಿಮೆ ಇಲ್ಲ ಎಂಬುದನ್ನು ಬಿಜೆಪಿ ತೋರಿಸಿದೆ. ಹುಕ್ಕೇರಿಯಲ್ಲಿ ಚುನಾವಣೆಗಾಗಿ ಮದ್ಯ ಹಂಚುತ್ತಿರುವುದು. ಹುಬ್ಬಳ್ಳಿಯಲ್ಲಿ ಪ್ರಕಾಶ ಅವರ ಮೇಲೆ ನಡೆದಿರುವ ಹಲ್ಲೆ, ಬಳ್ಳಾರಿಯಲ್ಲಿ ಲಾರಿಗಟ್ಟಲೇ ಮದ್ಯ ಸಿಕ್ಕಿರುವುದು ಬಿಜೆಪಿಯ ಅಕ್ರಮಗಳಿಗೆ ಸಾಕ್ಷಿಯಾಗಿದೆ.

- ಮುತಾಲಿಕ

★

ಕೋಮುವಾದಿಗಳು ಬಸವಾದಿಗಳು ಆದಾರು ಹೇಗೆ?

ಜಾತಿವಾದಿ, ಕೋಮುವಾದಿಗಳನ್ನು ಬೆಂಬಲಿಸಿ ಬೀದಿಗಿಳಿಯುವ ಬೆರಳೆಣಿಕೆಯಷ್ಟು ಮುಖಂಡರು ಬಸವಾದಿಗಳಾಗಲು ಸಾಧ್ಯವಿಲ್ಲ. ವೀರಶೈವ ತತ್ವದ ತಾತ್ವಿಕಧಾರೆಯ ಗಂಧಗಾಳಿ ಗೊತ್ತಿರದ ವೀರಶೈವ ಮಹಾಸಭಾ ಎಂಬ ಬಸವವಿರೋಧೀ ಸಂಸ್ಥೆಗೆ ತನ್ನನ್ನು ಅಖಂಡ ಲಿಂಗವಂತ ಸಮುದಾಯದೊಂದಿಗೆ ಗುರುತಿಸಿಕೊಳ್ಳುವ ನೈತಿಕ ಹಕ್ಕಿಲ್ಲ. ಪ್ರಜ್ಞಾವಂತ ವೀರಶೈವರು ಎಂದಿಗೂ ಜಾತ್ಯಾಂಧರೊಂದಿಗೆ ಕೈಜೋಡಿಸಲಾರರೆಂಬ ಎಚ್ಚರ ಇರುವುದೊಳಿತು.

ಪ್ರಜಾವಾಣಿ 'ವಾಚಕರವಾಣಿ'ಯಲ್ಲಿ,

ಡಾ: ಮೀನಾಕ್ಷಿ ಬಾಳಿ, ಶಾಂತರಸ ಹೆಂಬೇರಾಳು, ಪ್ರೊ.ಆರ್.ಕೆ.ಹುಡುಗಿ, ಡಾ:ಪ್ರಭು ಖಾನಾಪುರ, ನೀಲಾ.ಕೆ. ಡಾ. ಕಾಶೀನಾಥ ಅಂಬಲಗಿ, ಗುಲ್ಬರ್ಗ

★

ರಾಜ್ಯದ ಸದ್ಯದ ರಾಜಕೀಯ ಬೆಳವಣಿಗೆಗೆ ಜೆಡಿ(ಎಸ್) ಬಿಜೆಪಿ ಅವಕಾಶವಾದಿ ರಾಜಕಾರಣದ ಪರಾಕಾಷ್ಠೆಗೆ ನಿದರ್ಶನ. ಮೈತ್ರಿ ಮುರಿದು ಬೀಳದಿದ್ದರೆ ರಾಜ್ಯ ದೊಡ್ಡ ಆಪತ್ತು ಎದುರಿಸಬೇಕಾಗಿತ್ತು. ರಾಜ್ಯದ ಹಿತದೃಷ್ಟಿಯಿಂದ ಜೆಡಿ(ಎಸ್) ಬಿಜೆಪಿ ಮೈತ್ರಿ ಮುರಿದು ಬಿದ್ದಿರುವುದು ಸ್ವಾಗತಾರ್ಹ.

ವೈದಿಕ ಪರಂಪರೆಯ ಸಂಘ ಪರಿವಾರಕ್ಕೂ ಬಸವ ತತ್ವಕ್ಕೂ ಎಲ್ಲಿಂದ ಎಲ್ಲಿಯ ಸಂಬಂಧ. ಯಡಿಯೂರಪ್ಪ ನಿಜವಾಗಿಯೂ ಬಸವ ತತ್ವದಲ್ಲಿ ನಂಬಿಕೆ ಇಟ್ಟಿದ್ದರೆ ಬಿಜೆಪಿಯಲ್ಲಿ ಇರುತ್ತಿರಲಿಲ್ಲ. ಅಧಿಕಾರ ಸಿಗದೆ ಹತಾಶರಾಗಿರುವ ಯಡಿಯೂರಪ್ಪ ಅವರು ಅನಗತ್ಯವಾಗಿ ಜಾತಿ ಧರ್ಮವನ್ನು ಎಳೆದು ತರುತ್ತಿದ್ದಾರೆ. ಬಸವಣ್ಣನ ಹೆಸರು; ಮಠ-ಮಾನ್ಯಗಳನ್ನು ಬಳಸಿಕೊಳ್ಳುತ್ತಿದ್ದಾರೆ.

- ಜಿ.ಎನ್.ನಾಗರಾಜ್

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ)ದ ರಾಜ್ಯ ಕಾರ್ಯದರ್ಶಿ

★

ಹಾಳು ಮಾಡಿದ್ದು ಯಾರು?

ಬಿಜೆಪಿ ರಾಷ್ಟ್ರೀಯ ಮುಖಂಡರೊಂದಿಗೆ ಕೇಂದ್ರದಲ್ಲಿ ಪ್ರಭಾವಿಯಾಗಿರುವ ರಾಜ್ಯದ ನಾಯಕರೊಬ್ಬರು ಸೇರಿಕೊಂಡು ಅಧಿಕಾರ ಹಸ್ತಾಂತರ ಮಾತುಕತೆಯನ್ನು ಹಾಳು ಮಾಡಿದರು.

- ಆರ್.ಎಸ್.ಎಸ್. ಮುಖಂಡರು.

★

ಕುಮಾರಸ್ವಾಮಿಯವರ ಆಪ್ತ ಚೆಲುವರಾಯಸ್ವಾಮಿ ಮನವಿ ಮಾಡುತ್ತಿದ್ದಂತೆ ಸ್ಪಂದಿಸಿದ ಯಡಿಯೂರಪ್ಪನವರು, ತಮ್ಮ ಧರ್ಮಯುದ್ಧ ಯಾತ್ರೆಯನ್ನು ಅರ್ಧಕ್ಕೆ ಮೊಟಕುಗೊಳಿಸಿ, ದಿಢೀರ್ ಬೆಂಗಳೂರಿಗೆ ಧಾವಿಸಿ ಮಾತುಕತೆಯಲ್ಲಿ ತೊಡಗಿದ್ದು, ಅವರ ಅಧಿಕಾರದ ಆಸೆಗೆ ಹಾಗೂ ತಾಳ್ಮೆ ಇಲ್ಲದ ವರ್ತನೆಗೆ ಹಿಡಿದ ಕನ್ನಡಿ.

- ಆರ್.ಪಿ.ಜಗದೀಶ್

ಪ್ರಜಾವಾಣಿ 'ರಾಜಕೀಯ ವಿಶ್ಲೇಷಣೆ'ಯಲ್ಲಿ



ನನ್ನ ಮಾತು

ಬಿಜೆಪಿಗೆ ಅಧಿಕಾರ ಹಸ್ತಾಂತರಿಸಬೇಕು, ಇಲ್ಲವಾದರೆ ಅದು ವಚನ ಭ್ರಷ್ಟವಾಗುತ್ತದೆ ಎಂದೆಲ್ಲಾ ಮಾತನಾಡಿರುವುದೇ ಅರ್ಥಹೀನ. ಈಗಾಗಲೇ 20 ತಿಂಗಳು ಬಿಜೆಪಿ ಸರ್ಕಾರದಲ್ಲಿದ್ದು ಅಧಿಕಾರ ಅನುಭವಿಸಿದೆ, ಈ ಸಂಘ ಪರಿವಾರದ ಅಜೆಂಡಾ ಜಾರಿಗೊಳಿಸಲು ಯತ್ನಿಸಿದೆ. ತಕರಾರು ಏನಿದ್ದರೂ ಮುಂದಿನ ಇಪ್ಪತ್ತು ತಿಂಗಳು ಮುಂದುವರಿಯಬೇಕೇ ಎಂಬುದಾಗಿದೆ. ಮುಖ್ಯಮಂತ್ರಿ ಸ್ಥಾನ ಬಿಡದಿದ್ದರೆ ಮೈತ್ರಿ ಕೊನೆಗೊಂಡಿತೇ ಹೊರತು ಅಧಿಕಾರವೇ ಸಿಕ್ಕಿಲ್ಲ ಎಂದೇನಲ್ಲ.

ಅಕ್ಟೋಬರ್ 3 ರ ಮೊದಲೇ ಬಿಜೆಪಿ ಸಚಿವರು ರಾಜೀನಾಮೆ ನೀಡಿದ್ದು ಅಧಿಕಾರದ ದಾಹದ ಆತುರದಿಂದಲೇ

- ಗಿರೀಶ್, ಹಾಸನ

★

ಅಭಿವೃದ್ಧಿಯ ಹೆಸರಿನಲ್ಲಿ ಭೂಮಿ ನುಂಗುತ್ತಿರುವುದು ನೋಡಿದರೆ ಆತಂಕವಾಗುತ್ತದೆ. ಕೈಗಾರಿಕಾ ಸಚಿವರು, ಕೈಗಾರಿಕಾ ಅಭಿವೃದ್ಧಿ ಮಂಡಳಿಯಂತಹವು ನಡೆಸುತ್ತಿರುವ ದಂಧೆ ನಿಜಕ್ಕೂ ಆಘಾತಕಾರಿ.

- ಮಲ್ಲೇಶ್ ಎಂ. ಬೆಂಗಳೂರು

ಕೆ.ಡಿ.ಎಫ್. ಸರ್ಕಾರ ರಚನೆಯಲ್ಲಿ ಬಳ್ಳಾರಿ ಗಣಿ ಹಣದ ಪಾತ್ರವಿತ್ತು. ಸರ್ಕಾರದ ಪತನದಲ್ಲಿಯೂ ಇದರದ್ದೇ ಘಾಟು. 'ಬಂಡವಾಳ ಹೂಡಿಕೆ' ಉತ್ತಮ ವಿಶ್ಲೇಷಣೆಯುಳ್ಳ ಲೇಖನ.

- ಮಂಜುನಾಥ, ಹೊಸಪೇಟೆ

ಭಗತ್‌ಸಿಂಗ್ ಜನ್ಮ ಶತಮಾನೋತ್ಸವದ ಸಂದರ್ಭದಲ್ಲಿ ಇನ್ನೂ ಹಲವಾರು ಲೇಖನಗಳು ಬರಲಿ.

- ಮಮತ, ಚಿಂತಾಮಣಿ

ಕರ್ನಾಟಕ ರಾಜ್ಯೋತ್ಸವ: ಸಂಚಿಕೆಗಳಲ್ಲಿ ವಿಶೇಷ ಲೇಖನಗಳು

ಭಾಷಾವಾರು ಪ್ರಾಂತ ರಚನೆಯಾಗಿ ಕರ್ನಾಟಕಕ್ಕೆ 50 ರ ಸುವರ್ಣ ಸಂಭ್ರಮ ಆಚರಿಸಿಕೊಂಡಿದೆ. 51 ವರ್ಷಕ್ಕೆ ಪಾದಾರ್ಪಣೆ ಮಾಡಲಾಗುತ್ತಿದೆ.

ಈ ಸಂದರ್ಭದಲ್ಲಿ ವಿಶೇಷ ಲೇಖನಗಳು ಜನಶಕ್ತಿಯ ಲೇಖನಗಳಲ್ಲಿ ಪ್ರಕಟವಾಗಲಿದೆ. ಹೆಚ್ಚಿನ ಪ್ರತಿ ಬೇಕಾದವರು ಮುಂದಾಗಿ ತಿಳಿಸಿ.

ನಿಮ್ಮ ದೂರನ್ನು ಇಲ್ಲಿ ಕೊಡಿ, ವಿಚಾರಣೆಯನ್ನು ಇಲ್ಲೇ ಮಾಡಿ

'ಜನಶಕ್ತಿ' ಪತ್ರಿಕೆಯ ಚಂದಾದಾರರನ್ನು ತಲುಪದೇ ಇರುವುದು, ತಡವಾಗಿ ತಲುಪುವುದು ಇಂತಹ ವಿಷಯಗಳಲ್ಲಿ ಏನಾದರೂ ದೂರಗಳಿದ್ದಲ್ಲಿ ನೀವು ದೂರು ದಾಖಲಿಸಬಹುದು.

ಅದಕ್ಕಾಗಿ ನೀವು ಸಂಪರ್ಕಿಸಬೇಕಾದದ್ದು

ಕಾಂ: ವೀರಣ್ಣ ಕಲ್ಲಿನಿ

ಮೊಬೈಲ್: 9480430594

ವಿಳಾಸ ಬದಲಾವಣೆ, ಬಾಕಿ ವಿವರಕ್ಕಾಗಿ...

ಅದೇ ರೀತಿ ಪ್ರತಿ ಹೆಚ್ಚಳ ಏಜೆನ್ಸಿ ಬಾಕಿ, ಚಂದಾವಿವರ, ವಿಳಾಸ ಬದಲಾವಣೆ ಇತ್ಯಾದಿಗಳಿಗಾಗಿಯೂ ಇದೇ ದೂರವಾಣಿ ಸಂಖ್ಯೆಯನ್ನು ಸಂಪರ್ಕಿಸುವುದು.

- ಸಂ

ಜಾಹೀರಾತು

ಜನಶಕ್ತಿಗೆ ಈಗಾಗಲೇ ಒಂದಿಷ್ಟು ಜಾಹಿರಾತು ಬಂದಿದೆ. ಇನ್ನು ಸಂಗ್ರಹ ಕಾರ್ಯ ನಡೆದಿದ್ದು ಆದಷ್ಟು ಹೆಚ್ಚು ಸಂಗ್ರಹಿಸಿ ಅಕ್ಟೋಬರ್ 27 ರೊಳಗೆ ತಲುಪಿಸಬೇಕು. ಜಾಹೀರಾತು ಸಂಗ್ರಹ ಪತ್ರಿಕೆಯ ಪ್ರಕಟಣೆಗೆ ಸಹಾಯ ಎಂಬುದನ್ನು ಗಮನಿಸಿ.

- ಸಂ

ಜನಶಕ್ತಿ

ಚಂದಾದಾರರಾಗಿ

ವಾರ್ಷಿಕ ರೂ. 250

ಅರ್ಧವಾರ್ಷಿಕ ರೂ. 125

ಸಂಪರ್ಕಕ್ಕಾಗಿ

9448230114, 9448505789

ಸಂಪಾದಕೀಯ

ಸಂದರ್ಭಸಾಧಕತೆಯ ದುಷ್ಫಲ

ಕರ್ನಾಟಕದಲ್ಲಿ ಅನಿವಾರ್ಯವಾಗಿದ್ದುದು ಆಗಿದೆ. ರಾಜ್ಯದಲ್ಲಿ ಜನತಾದಳ(ಜಾತ್ಯಾತೀತ) ಮತ್ತು ಬಿಜೆಪಿ ತೋರಿಸಿದ ಅತ್ಯಂತ ಸಂದರ್ಭಸಾಧಕ ವರ್ತನೆಗಳಿಂದಾಗಿ ರಾಷ್ಟ್ರಪತಿ ಆಳ್ವಿಕೆ ಹೇರಲ್ಪಟ್ಟಿದೆ. ಕಳೆದ ವಿಧಾನಸಭಾ ಚುನಾವಣೆಗಳ ನಂತರ ಕೋಮುವಾದದ ವಿರುದ್ಧ ಹೋರಾಡಬೇಕು ಮತ್ತು ಕೋಮುವಾದಿ ಶಕ್ತಿಗಳನ್ನು ಕರ್ನಾಟಕದಲ್ಲಿ ಸರಕಾರದಿಂದ ದೂರವಿಡಬೇಕು ಎಂಬ ಘೋಷಣೆಯ ಮೇಲೆ ಒಂದು ಜಾತ್ಯಾತೀತ ಸಮ್ಮಿಶ್ರ ಸರಕಾರವನ್ನು ರಚಿಸಲು ಕಾಂಗ್ರೆಸ್‌ನೊಂದಿಗೆ ಜೆಡಿ(ಎಸ್) ಸೇರಿಕೊಂಡಿತು. ಈ ಚುನಾವಣೆಗಳಲ್ಲಿ ಬಿಜೆಪಿ ಅತಿ ದೊಡ್ಡ ಪಕ್ಷವಾಗಿ ಮೂಡಿಬಂತು. ನಂತರದ ಸ್ಥಾನ ಕಾಂಗೆಸ್‌ನದ್ದು, ನಂತರ ಜೆಡಿ(ಎಸ್)ನದ್ದು. ಇಪ್ಪತ್ತು ತಿಂಗಳ ನಂತರ ಕಾಂಗ್ರೆಸ್‌ನ 'ವಿಪರೀತ ವರ್ತನೆ' ಯ ಆಪಾದನೆ ಎಬ್ಬಿಸಿ ಧರಂ ಸಿಂಗ್ ರವರ ಕಾಂಗ್ರೆಸ್ ನೇತೃತ್ವದ ಸರಕಾರವನ್ನು ಜೆಡಿ(ಎಸ್) ಕೆಳಗೆಳೆಯಿತು. ಇದಕ್ಕೆ ನಿಜವಾದ ಕಾರಣಗಳೇ ಬೇರೆ ಎಂದು ಆಗಲೇ ಸ್ಪಷ್ಟವಾಗಿತ್ತು.

ಜೆಡಿ(ಎಸ್) ಮತ್ತು ಬಿಜೆಪಿ ಈ ವಿಧಾನ ಸಭೆಯ ಉಳಿದ 40 ತಿಂಗಳ ಅವಧಿಯನ್ನು ಇಬ್ಬರೂ ಸಮವಾಗಿ ಹಂಚಿಕೊಳ್ಳುವುದೆಂಬ ಒಪ್ಪಂದಕ್ಕೆ ಬಂದರು. ಇದರ ಪ್ರಕಾರ ಮೊದಲ 20 ತಿಂಗಳು ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿರುವುದು, ಬಿಜೆಪಿಯ ಯಡಿಯೂರಪ್ಪ ಉಪಮುಖ್ಯಮಂತ್ರಿ ಯಾಗಿರುವುದು, ನಂತರದ 20 ತಿಂಗಳಿಗೆ ಇದನ್ನು ಅದಲು ಬದಲು ಮಾಡುವುದು ಎಂದಾಗಿತ್ತು. ಆದರೆ ಅವಧಿ ಮುಗಿಯುವಾಗ ಕುಮಾರಸ್ವಾಮಿ ಕೆಳಗಿಳಿಯಲು ನಿರಾಕರಿಸಿದರು. ಪರಸ್ಪರ ಕಹಿ ಮಾತುಗಳ ನಂತರ ಬಿಜೆಪಿ ತನ್ನ ಬೆಂಬಲವನ್ನು ಹಿಂತೆಗೆದುಕೋಂಡಿತು. ಇಂತಹ ಸಂದರ್ಭದಲ್ಲಿ ರಾಷ್ಟ್ರಪತಿ ಆಳ್ವಿಕೆಯನ್ನು ಹೇರಿ ಒಂದು ಹೊಸ ಜನಾದೇಶ ಪಡೆಯುವುದಲ್ಲದೆ ಬೇರೆ ಸಾಧ್ಯತೆಯೇನೂ ಇರಲಿಲ್ಲ.


ಜೆಡಿ(ಎಸ್)ನ ರಾಜಕೀಯ 'ವಿಶ್ವಾಸಘಾತ' ಏನೇ ಇರಲಿ, ಬಿಜೆಪಿಗೆ ಮುಖ್ಯಮಂತ್ರಿಯ ಲಗಾಮು ಹಿಡಿಯಲು ಬಿಡಲಿಲ್ಲ ಎಂಬುದು ನಿಜವಾಗಿಯೂ ಒಂದು ಸಮಾಧಾನದ ಸಂಗತಿ. ಕಳೆದ 20ತಿಂಗಳಲ್ಲಿ ಕರ್ನಾಟಕದ ಇತಿಹಾಸದಲ್ಲಿ ಹಿಂದೆಂದೂ ಕಂಡುಬರದ ರೀತಿಯಲ್ಲಿ ಕೋಮು ಧೃವೀಕರಣ ತ್ವರಿತವಾಗಿ ತೀಕ್ಷ್ಣಗೊಂಡಿತು. ಗೋಲ್ವಾಲ್ಕರ್ ಜನ್ಮ ಶತಾಬ್ದಿ ಆಚರಣೆಯನ್ನು ಬಳಸಿಕೊಂಡು ಆರ್‌ಎಸ್‌ಎಸ್/ಬಿಜೆಪಿ ಬೆಂಗಳೂರು ಸೇರಿದಂತೆ ರಾಜ್ಯದ ಹಲವು ಭಾಗಗಳಲ್ಲಿ ಕೋಮು ಸೆಳೆತಗಳನ್ನು ಮತ್ತು ಗಲಭೆಗಳನ್ನು ಉದ್ರೇಕಿಸಿದವು. ಸೂಫೀ ಸಂತನ ಶತಮಾನಗಳಷ್ಟು ಹಿಂದಿನ ಚಿಕ್ಕಮಗಳೂರಿನ ಬಾಬಾ ಬುಡನ್‌ಗಿರಿಯ ಬಗ್ಗೆ ಒಂದು ವಿವಾದವನ್ನು ಸೃಷ್ಟಿಸಿ ಇಂತಹ ಕೋಮು ಧೃವೀಕರಣವನ್ನು ರಾಜ್ಯಾದ್ಯಂತ ತೀವ್ರಗೊಳಿಸಲಾಯಿತು. ಸರಕಾರದಲ್ಲಿ ತನ್ನ ಸ್ಥಾನಗಳನ್ನು ಬಳಸಿಕೊಂಡು ಬಿಜೆಪಿ ಕೋಮು ಸೌಹಾರ್ದವನ್ನು ಕೆಡಿಸಲು ವ್ಯವಸ್ಥಿತವಾಗಿ ಕೆಲಸ ಮಾಡಿತು ಮತ್ತು ಈ ಮೂಲಕ ಕೋಮು ಧೃವೀಕರಣವನ್ನು ತೀವ್ರಗೊಳಿಸಿ ಅದರ ರಾಜಕೀಯ ಲಾಭ ಪಡೆಯಲು ಯತ್ನಿಸಿತು.

ಇಂತಹ ಪರಿಸ್ಥಿತಿಗಳಲ್ಲಿ ಮೂಂದಿನ 20 ತಿಂಗಳಿಗೆ ಅದು ಮುಖ್ಯಮಂತ್ರಿ ಸ್ಥಾನಕ್ಕೆ ಏರಿದ್ದರೆ ರಾಜ್ಯಕ್ಕೆ ಮತ್ತು ರಾಜ್ಯದ ಜನತೆಗೆ ವಿನಾಶಕಾರಿಯಾಗುತ್ತಿತ್ತು, ದೇಶದ ಆರ್ಥಿಕದ ವೇಗೋತ್ಕರ್ಷಕ ಎಂಬ ಅದರ ಸ್ಥಾನಮಾನವನ್ನು ಹಳಿತಪ್ಪಿಸುತ್ತಿತ್ತು. ಕೊನೆ ಗಳಿಗೆಯಲ್ಲೂ ವಿವಿಧ ಸಂದರ್ಭಸಾಧಕ ಕೂಟಗಳನ್ನು ಹೇಗಾದರೂ ಕಲೆಹಾಕಲು ಹತಾಶ ಪ್ರಯತ್ನಗಳು ನಡೆದಿರುವುದನ್ನು ಕಂಡಾಗ ಇನ್ನಷ್ಟು ನೀತಿಬಾಹಿರ ಕುದುರೆ ವ್ಯಾಪಾರವನ್ನು ತಡೆಯಲು ರಾಷ್ಟ್ರಪತಿ ಆಳ್ವಿಕೆಯ ಹೇರಿಕೆಯೊಂದೇ ದಾರಿಯಾಗಿತ್ತು.

ಕರ್ನಾಟಕದಲ್ಲಿ ಪ್ರಜಾಪ್ರಭುತ್ವವನ್ನು ರಕ್ಷಿಸಲು ಮತ್ತು ಜನತೆಯ ಪ್ರಜಾಪ್ರಭುತ್ವ ಹಕ್ಕುಗಳನ್ನು ರಕ್ಷಿಸಲು ರಾಜ್ಯ ವಿಧಾನಸಭೆಗೆ ಬೇಗನೇ ಒಂದು ಚುನಾವಣೆ ನಡೆಸಿ ಜನತೆಯಿಂದ ಹೊಸ ಆದೇಶವನ್ನು ಪಡೆಯುವುದೊಂದೇ ಉಳಿದಿರುವ ಮಾರ್ಗ.

-'ಪೀಪಲ್ಸ್ ಡೆಮಾಕ್ರಸಿ' ವಾರಪತ್ರಿಕೆಯ ಸಂಪಾದಕೀಯದಿಂದ ಆಯ್ದ ಭಾಗಗಳು

ಧರ್ಮಯುದ್ಧವಲ್ಲ ಅಂತರ್ಯುದ್ಧ !



'ಕೈಗೆಟುಕದ ದ್ರಾಕ್ಷಿ ಹುಳಿ' ಎಂಬ ಗಾದೆ ಮಾತು ನಾಡಿನಲ್ಲಿ ತುಂಬಾ ಅನತಿಕಾಲದ್ದು. ಅಧಿಕಾರಕ್ಕೆ ಹಾತೊರೆದ ಬಿಜೆಪಿಯದ್ದು ಅಂತಹದ್ದೇ ಆಲಾಪ! ಜನಾದೇಶಕ್ಕೆ ವಿರುದ್ಧವಾಗಿ, ಕೇವಲ ಅಧಿಕಾರ ಗದ್ದುಗೆಯ ಹವಣಿಕೆಯಿಂದ ಸಂದರ್ಭಸಾಧಕನಾಗಿ ಜೆಡಿ(ಎಸ್) ಜೊತೆ ಸರ್ಕಾರದಲ್ಲಿ ಸೇರಿದ್ದೇ ಒಂದು ಮಹಾ ವಂಚನೆ, ಮಹಾಪ್ರಮಾದ. ಅಧಿಕಾರದ ರುಚಿಕಂಡ ಈ 'ದೇಶಭಕ್ತ'ರಿಗೆ ಕುರ್ಚಿಯನ್ನು ಬಿಡುವುದೆಂದರೆ ಎಲ್ಲಿಲ್ಲದ ಸಂಕಟ. ಆದ್ದರಿಂದಲೇ ಅಧಿಕಾರ ಮತ್ತು ಮುಖ್ಯಮಂತ್ರಿ ಸ್ಥಾನ ತಮ್ಮ ಆ ಜನ್ಮ ಎಂದೇ ಬಿಜೆಪಿ ಭಾವಿಸಿದಂತಿದೆ. ಇದನ್ನು ಜೆಡಿ(ಎಸ್) ತಪ್ಪಿಸಿಬಿಟ್ಟಿತು, ವಚನ ಭ್ರಷ್ಟವಾಯಿತು ಎಂದೇ ಅಬ್ಬರಿಸುತ್ತಿದೆ. ಆಡಳಿತ ಯಂತ್ರದ ಕೀಲಿಗಳನ್ನು ಹಿಡಿದು ತನಗೆ ಬೇಕಾದಂತೆ ಆಡಿಸಿಬಿಡಬಹುದು ಎಂದು ಲೆಕ್ಕಾಚಾರ ಹಾಕಿದ್ದ ಬಿಜೆಪಿ ಈಗ ಅರೆಗಾಯದಿಂದ ಅರಚುವ ಹಾವಿನಂತಾಗಿದೆ. ನಿಂತಲ್ಲಿ ನಿಲ್ಲದೇ ಊರೂರು ತಿರುಗಿ ಬುಸುಗುಡುವುದಕ್ಕೆ 'ಧರ್ಮಯುದ್ಧ'ವೆಂದು ಕರೆದುಕೊಂಡಿದೆ.

ಹಾದಿ ತಪ್ಪಿಸುವ ನಿಸ್ಸೀಮರು

ಹೀಗೆ ಜಾತ್ರೆ ಸೇರಿಸಿ, ಯಾತ್ರೆ ನಡೆಸುವುದರಲ್ಲಿ ಬಿಜೆಪಿ ನಾಯಕರು ನಿಷ್ಣಾತರು ಎಂಬುವುದರಲ್ಲಿ ಅನುಮಾನವಿಲ್ಲ. ಅವರು ಆಡಿದ್ದೇ 'ಅಂತಿಮ ವಾಕ್ಯ' ಎಂದೇ ನಂಬಿಸುವ ಪತ್ರಿಕೆ, ಟಿ.ವಿ.ಯಂತಹ ಮಾಧ್ಯಮಗಳು, ಅಪಾರ ಹಣ ಸಂಪನ್ಮೂಲಗಳು ಬೆಂಗಾವಲಾಗಿ ಇರುವಾಗ ಸುದ್ದಿ ಮಾಡುವುದರಲ್ಲಿ ವಿಶೇಷವೇನಿಲ್ಲ. ಆದರೆ ಬಿಜೆಪಿ ನಡೆಸುವ ಇಂತಹ ಯಾತ್ರೆಗಳು ಘೋಷಿತ ಉದ್ದೇಶ ಒಂದಿದ್ದರೆ, ಮುಚ್ಚಿಟ್ಟ ಅಜೆಂಡಾ ಇನ್ನೊಂದಿರುತ್ತದೆ ಎಂಬುದರಲ್ಲಿಯೂ ಅನುಮಾನ ಇರಬೇಕಿಲ್ಲ. ಯಾಕೆಂದರೆ ಆರ್.ಎಸ್.ಎಸ್ ಆರಂಭಗೊಂಡದ್ದೇ ಸ್ವಾತಂತ್ರ್ಯ ಸಂಗ್ರಾಮವನ್ನು ಹಾದಿತಪ್ಪಿಸಲು, ಬ್ರಿಟೀಷರ ನಿಷ್ಠ ಸೇವೆ ಮಾಡಲು, ನಂತರ ಈ 80ರ ದಶಕದ ಮಧ್ಯಭಾಗದಿಂದ ತೀವ್ರಗೊಂಡ ಅಮೇರಿಕಾ ಸಾಮ್ರಾಜ್ಯಶಾಹಿ ಪ್ರಣೀತ ಜಾಗತೀಕರಣ, ಉದಾರೀಕರಣದ ವಿಷಫಲ ಮೊಳೆಯುತ್ತಿರುವಾಗಲೇ ಅದನ್ನೂ ಮರೆಮಾಚಲು ರಾಮಜನ್ಮಭೂಮಿ ವಿವಾದ ಎಬ್ಬಿಸಿ ಐತಿಹಾಸಿಕ ಬಾಬ್ರಿ ಮಸೀದಿಯನ್ನು ಧ್ವಂಸಗೊಳಿಸಿತು, ಕೋಮು ಗಲಭೆಗಳನ್ನೆಬ್ಬಿಸಿ ಅಲ್ಪಸಂಖ್ಯಾತರ ಮಾರಣಹೋಮ ನಡೆಸಿತು. ಇಂತಹ ಕೋಮು ವಿಭಜನೆಯ ದ್ವೇಷದ ವಿಷ ಹಬ್ಬಿಸಲು ರಥಯಾತ್ರೆ, ರಕ್ತಯಾತ್ರೆಗಳನ್ನು ನಡೆಸಿದ್ದು ಇನ್ನು ಯಾರೂ ಮರೆತಿಲ್ಲ. ಕಾರ್ಗಿಲ್ ಯುದ್ಧಕ್ಕೆ ಒಂದು ಅವಕಾಶ ಕಲ್ಪಿಸಿ, ಅಲ್ಲಿ ಸೈನಿಕರು ಸಾಯುತ್ತಿದ್ದರೆ ಇಲ್ಲಿ ದೇಶಪ್ರೇಮದ ಕಿಚ್ಚಿನಲ್ಲಿ ಬೆಚ್ಚಗಾಗಿಸಿಕೊಂಡಿತು, ಶವಪೆಟ್ಟಿಗೆಯಲ್ಲೂ ಹಣ ಹೊಡೆಯಿತು. ಗುಜರಾತ್ ಹತ್ಯಾಕಾಂಡ, ಈಗ ನಿಲ್ಲದ ರೈತರ ಆತ್ಮಹತ್ಯೆ, ಹಸಿವಿನ ಸಾವು, ಆಹಾರದ ಕೊರತೆ, ದೇಶದ ಸಾರ್ವಭೌಮತ್ವವೇ ನಾಶವಾಗುವ ಅಮೇರಿಕಾದೊಳಗಿನ ಅಣು ಒಪ್ಪಂದ ಅಪಾಯವಿರುವಾಗಲೇ ರಾಮಸೇತು ವಿವಾದ, ಈಗ ಇಂತಹ 'ಅಂತರ್ ಯುದ್ಧ'ಗಳನ್ನು ಸಾರುತ್ತಿದೆ.

ಹೀಗೆ ಸಮಸ್ಯೆಗಳಿಂದ ತತ್ತರಿಸುತ್ತಿರುವ ಜನರ ಬದುಕಿನ ಪ್ರಶ್ನೆಗಳಿಗೆ ಕಾರಣಗಳನ್ನು ಹುಡುಕದಂತೆ, ಅವರು ಕಂಡುಕೊಳ್ಳದಂತೆ ಗಮನವನ್ನು ಬೇರೆಡೆಗೆ ತಿರುಗಿಸುವುದರಲ್ಲಿ ಈ ಸಂಘಪರಿವಾರಿಗಳಿಗೆ ಅಪಾರ ಪರಿಣತಿ ಬಂದುಬಿಟ್ಟಿದೆ.


ರಾಜಕೀಯ ಹಂಚಿಕೆ

ಕರ್ನಾಟಕದಲ್ಲಿ ಈಗ ಬಿಜೆಪಿಯ ನಡೆನುಡಿಗಳು ಮತ್ತು ಅವರ ಆರ್ಭಟಗಳು ಅಂತಹುದೇ ಅನುಮಾನಗಳನ್ನು ಹುಟ್ಟಿಸಿಬಿಟ್ಟಿವೆ. ಈಗ ರಾಜ್ಯದಾದ್ಯಂತ ತಿರುಗುತ್ತಾ ಗುಲ್ಲೆಬ್ಬಿಸುತ್ತಿರುವ ಈ 'ಧರ್ಮಯುದ್ಧ' ಎಂಬುದು ಒಂದು ಸಾದಾ, ಸೀದಾ ವ್ಯವಹಾರವಲ್ಲ. ಈ ಧರ್ಮಯುದ್ಧ ಯಾಕಾಗಿ? ಏನಂಥ ಧರ್ಮಕಾರಣವಿದೆ? ಸ್ವಲ್ಪ ಕೆದಕಿಬಿಟ್ಟರೂ ಸಾಕು. ಅಲ್ಲಿರುವುದು ಪಕ್ಕಾ ರಾಜಕಾರಣ. ಅವಕಾಶವಾದಿ ಹೂರಣ. ಜಾತಿಯ ಭಾವನೆಗಳನ್ನು ಕೆರಳಿಸಿ ಅದರ ಫಲ ಕಬಳಿಸಬೇಕೆಂಬ ಜನವಿರೋಧಿ ರಾಜಕೀಯ ಹಂಚಿಕೆಯಿದೆ.

20 ತಿಂಗಳ ಹಿಂದೆ ಆದ ಒಪ್ಪಂದದಂತೆ ಜೆಡಿ(ಎಸ್) ಪಕ್ಷವು ಬಿಜೆಪಿಗೆ ಮುಖ್ಯಮಂತ್ರಿ ಸ್ಥಾನ ಬಿಡಲಿಲ್ಲ ಎಂಬುದು ಜಾತ್ಯಾತೀತ ಜನತಾದಳದ ಮುಖಂಡತ್ವದ ವಿರುದ್ಧ ಸಾರಿದ ಸಮರವೇ 'ಧರ್ಮಯುದ್ಧ'ವಂತೆ! ಯಡಿಯೂರಪ್ಪನವರಿಗೆ ಯಾಕೆ ಸ್ಥಾನ ತಪ್ಪಿತು, ತಪ್ಪಿಸಲಾಯಿತು ಎಂಬುದಕ್ಕೆ ಇನ್ನೊಂದು ಪ್ರಶ್ನೆ)

ಜಾತಿ ದುರ್ಬಳಕೆ

ಈ ಯುದ್ಧ ಸಾರಿದ್ದು ಅಕ್ಟೋಬರ್ 6 ರಂದು, ಆರಂಭಗೊಂಡದ್ದು ಅದರ ಮರುದಿನವೇ... ಅಂದರೆ ಎಲ್ಲವೂ ಪೂರ್ವನಿಗದಿತವೋ ಎಂಬಂತೆ. ಇಂತಹ ಯುದ್ಧಯಾತ್ರೆ ಆರಂಭಗೊಳ್ಳುವ ಮೊದಲು ಬಿಜೆಪಿ ನಾಯಕಗಣ ಸಿದ್ಧಗಂಗಾ ಮಠದ ಹಿರಿಯ ಸ್ವಾಮಿಜಿಗಳ ಆಶೀರ್ವಚನ ಪಡೆದುಹೊರಟರು. ಇದು ಗುರುಭಕ್ತಿ ಎಂಬುದಕ್ಕಿಂತ ತಾವು ನಡೆಸುವ ಎಲ್ಲಾ ಈ ಕಸರತ್ತಿಗೆ 'ವೀರಶೈವ'ರೆಂಬ ಜಾತಿಯ ತಾಕತ್ತು ಪಡೆಯುವ ಹುನ್ನಾರ. ಹೀಗಾಗಿ ಇದು 'ತೋರುಂಬ ಲಾಭವೇ ಹೊರತು ಬೇರೆನಿಲ್ಲ. ಈ ಘನ ಕಾರ್ಯಕ್ಕೆ ಸಿದ್ಧಗಂಗಾ ಸ್ವಾಮೀಜಿ, ಬಾಳೆಹೊನ್ನೂರಿನ ರಂಭಾಪುರಿ ಸ್ವಾಮಿಗಳು



ತೋರುಂಬ ಲಾಭದ ನಿರೀಕ್ಷೆಯಲ್ಲಿ

ಒಳಗೊಂಡು ಕೆಲಸ ಮಠಾಧೀಶರು ಬಿಜೆಪಿಯ ಬೆನ್ನು ತಟ್ಟಿದರೇಕೆ ಎಂಬ ಪ್ರಶ್ನೆಗೆ ಸ್ಪಷ್ಟನೆ ಸಿಕ್ಕಿಲ್ಲ. ಎಲ್ಲಾ ಜಾತಿಗಳ ಸದ್ಭಕ್ತರಿಂದ ಬೆಳೆದ ಇಂತಹ ಮಠಗಳನ್ನು ಯಡಿಯೂರಪ್ಪನವರು ಲಿಂಗಾಯತ ಜಾತಿಯಲ್ಲಿ ಹುಟ್ಟಿದ್ದಾರೆ ಎಂಬ ಕಾರಣಕ್ಕೆ ಪರಲೋಕದ ಚಿಂತನೆ ಮಾಡುವವರನ್ನು ಇಹಲೋಕದ ಅಧಿಕಾರದಾಹದ ತಮ್ಮ ರಾಜಕಾರಣಕ್ಕೆ ಎಳೆದದ್ದು ಗಂಭೀರ ವಿಷಯ.

ದುರಂತ


ಬಸವಣ್ಣ ಮತ್ತು ಶರಣರ ಆಶಯಗಳಿಗೆ ವಿರುದ್ಧವಾದ, ವೈಧಿಕಶಾಹಿಯ ಸಿದ್ಧಾಂತವನ್ನೇ ತನ್ನ ಅಂತಃಸತ್ವವನ್ನಾಗಿರಿಸಿಕೊಂಡಿರುವ ಹಿಂದುತ್ವವಾದಿ ಫ್ಯಾಸಿಸ್ಟ್ ಶಕ್ತಿಗಳಿಗೆ ಬೆಂಬಲಿಸುವುದು ಒಂದು ದೊಡ್ಡ ದುರಂತಕ್ಕೆ ನಾಂದಿ ಎಂಬುದನ್ನು ಮಠಾಧೀಶರು, ಜಾತಿ ಮುಖಂಡರೆನಿಸಿಕೊಂಡವರು ಅರಿಯಬೇಕಿದೆ. ಯಡಿಯೂರಪ್ಪನವರು ಮುಖ್ಯಮಂತ್ರಿಯಾಗದಿರುವುದು ಅರ್ಥಾತ್ ಬಿಜೆಪಿಗೆ ಅಧಿಕಾರ ಸಿಗದಿರುವುದಕ್ಕೂ ಲಿಂಗಾಯತ ಸಮುದಾಯದ ಹಿತಗಳಿಗೂ ಏನೇನೂ ಸಂಬಂಧವಿಲ್ಲ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಬಿಜೆಪಿ ಎತ್ತಿಹಿಡಿದ, ಹಿಡಿವ ಆರ್ಥಿಕ ನೀತಿಗಳಿಂದಲೇ ಇಂದು ಅಪಾರ ಪ್ರಮಾಣದಲ್ಲಿ ರೈತರು ಆತ್ಮಹತ್ಯೆಗೆ ಈಡಾಗುತ್ತಿರುವುದು. ವೀರಶೈವರಲ್ಲಿ ಬಹುದೊಡ್ಡ ಸಂಖ್ಯೆಯಲ್ಲಿ ಈ ರೈತರೇ ಇದ್ದಾರೆ ಎಂಬುದೂ ಗಮನಾರ್ಹ. ಇಂತಹವರೊಂದಿಗೆ ಗುರುತಿಸಿಕೊಳ್ಳದೇ ಮಠಾದೀಶರು ಮರುವಿಮರ್ಶೆ ಮಾಡಿಕೊಳ್ಳಬೇಕು. ತಾವು ಹೇಳುವಂತೆ ಶರಣರ ತತ್ವಗಳಿಗೆ ಕಟಿಬದ್ಧವಾಗಬೇಕು. ಯಡಿಯೂರಪ್ಪನವರ ಭಕ್ತಿನಟನೆ, ಬಜೆಟ್‌ನ ಹಣ ಹಂಚಿಕೆಗಳು ಅಥವಾ ಸಂಘಪರಿವಾರದ ಧರ್ಮರಕ್ಷಣೆಗಳ ಘೋಷಣೆಗಳಿಗೆ ಧರ್ಮ

ಪುಟ 5 ಕ್ಕೆ

ವೀ.ಚಿ. - ಪ್ರಗತಿಶೀಲ ಕವಿ, ಚಳುವಳಿಯ ಸಂಗಾತಿ

'ವೀ ಚಿ' ಎಂದೇ ಖ್ಯಾತನಾಮರಾಗಿದ್ದ ವಿ.ಚಿಕ್ಕವೀರಯ್ಯನವರ ನಿಧನದಿಂದ ಕನ್ನಡ ಕಾವ್ಯ ವಲಯ ಸಜ್ಜನ, ಸರಳ, ವಿನಯವಂತ ಕವಿಯನ್ನು ಕಳೆದುಕೊಂಡಂತಾಗಿದೆ. ವೃತ್ತಿಯಲ್ಲಿ ಕೃಷಿಕರಾಗಿದ್ದ ವೀಚಿಯವರು ಪ್ರವೃತ್ತಿಯಲ್ಲಿ ಕಾವ್ಯ ಕೃಷಿಯನ್ನು ಕರಗತ ಮಾಡಿಕೊಂಡು ತಮ್ಮ ಕಾವ್ಯಗಳಲ್ಲಿ ಸೂಕ್ಷ್ಮತೆ ಹಾಗೂ ವೈಚಾರಿಕ ಮೊನಚನ್ನು ನಿರಂತರವಾಗಿ ಕಾಯ್ದುಕೊಂಡು ಬಂದ ಕವಿಯಾಗಿದ್ದರು.

ಮಾರ್ಕ್ಸ್‌ವಾದಿ, ಸಮಾಜವಾದಿ ನೆಲೆಯಲ್ಲಿ ತಮ್ಮ ಚಿಂತನೆಗಳನ್ನು ಕಾವ್ಯರೂಪಕ್ಕಿಳಿಸುತ್ತಿದ್ದ ವಿ.ಚಿಕ್ಕವೀರಯ್ಯ ನವರು ಎಂದಿಗೂ ಸಹ ವ್ಯವಸ್ಥೆಯೊಂದಿಗೆ ಹೊಂದಾಣಿಕೆ ಮಾಡಿಕೊಂಡು ನಡೆದವರಲ್ಲ. 1930 ರಲ್ಲಿ ಜನಿಸಿದ ವಿ.ಚಿಕ್ಕವೀರಯ್ಯನವರು ಬಡತನ ಮತ್ತು ಹಸಿವಿನ ನೋವುಂಡವರಾಗಿದ್ದರಿಂದ ಪಿ.ಯು.ಸಿ. ಹಂತಕ್ಕೆ ವಿದ್ಯಾಭ್ಯಾಸಕ್ಕೆ ತೆರೆ ಎಳೆಯಬೇಕಾಯಿತು. ನೇಗಿಲು ಹಿಡಿದು ಜಮೀನು ಹಸನು ಮಾಡಿ ತೋಟ ಮಾಡಿದರು. ಇದೇ ರೀತಿ ಕಾವ್ಯದಲ್ಲೂ ಕೃಷಿ ಮಾಡಿದರ ಫಲವಾಗಿ ಪ್ರಥಮ ಕವನ ಸಂಕಲನ 'ಪ್ರಣಯ ಚೈತ್ರ', ನಂತರ 'ವಿಷಾದ ನಕ್ಷೆ' ಹೊರಬಂದವು. ಕೃಷಿಯ ಕ್ರಿಯಾಶೀಲತೆಯೊಂದಿಗೆ ತಮ್ಮ ಕಾವ್ಯಗಳಲ್ಲಿ ಸೃಜನಶೀಲತೆಯನ್ನು ಕಾಪಾಡಿಕೊಂಡು ಬಂದ ವೀಚಿಯವರು ಜಿಲ್ಲೆಯಲ್ಲಿ ಎಡ ಚಳುವಳಿಗಳ ಏಳಿಗೆಗೆ ಶ್ರಮಿಸಿದವರಲ್ಲಿ ಪ್ರಮುಖರು. ಪ್ರಗತಿಶೀಲ ಚಳುವಳಿಗಳಲ್ಲಿ ಉಸಿರಾಗಿ ಬೆರತು ಹೋಗಿದ್ದ ವೀಚಿಯವರು. ಎಪ್ಪತ್ತರ ದಶಕದಲ್ಲಿ



ಸಿಪಿಐ(ಎಂ) ಪಕ್ಷದ ಬೆಂಬಲದೊಂದಿಗೆ ಪುರಸಭೆಗೆ ಸ್ಪರ್ಧಿಸಿ, ಉಪಾಧ್ಯಕ್ಷರಾಗಿ, ಅಧ್ಯಕ್ಷರಾಗಿ ಜನಾನುರಾಗಿಯಾಗಿ ಸೇವೆ ಸಲ್ಲಿಸಿದರು. 'ವೀಚಿ' ಸಿಪಿಐ(ಎಂ) ಬೆಂಬಲದಿಂದ ವಿಧಾನಸಭೆಗೂ ಸ್ಪರ್ಧಿಸಿ, ಒಮ್ಮೆ ಸೋಲನ್ನು ಅನುಭವಿಸಿದರು.


1960-70ರ ದಶಕದಲ್ಲಿ ರಾಜ್ಯದೆಲ್ಲೆಡೆ ಮಾರ್ಕ್ಸ್‌ವಾದಿ, ಸಮಾಜವಾದಿ, ಎಡ ಚಳುವಳಿ ಚಿಗುರೊಡೆಯುತ್ತಿದ್ದ ಕಾಲ ಹಾಗೂ ಸಮಾಜವಾದಿ ಸಿದ್ಧಾಂತಗಳು ಚರ್ಚೆಯಾಗುತ್ತಿದ್ದ ಕಾಲದಲ್ಲಿ ಯುವಕರಾಗಿದ್ದ 'ವೀಚಿ' ಯವರು ಈ ಚಿಂತನೆಗಳಿಗೆ ಆಕರ್ಷಿಕರಾಗಿ ದುಡಿದವರಲ್ಲಿ ಪ್ರಮುಖರಾಗಿದ್ದಾರೆ.

ಕಾರ್ಮಿಕ ಮುಖಂಡ ಕೆ.ಆರ್.ನಾಯಕ, ಎಡ ಚಿಂತನೆಗಳ ಸಾಹಿತಿ ಎಂದೇ ನಾಮಾಂಕಿತರಾಗಿದ್ದ ಪ್ರೊ: ಸಣ್ಣಗುಡ್ಡಯ್ಯ ಹಾಗೂ ಕವಿ 'ವೀಚಿ'ಯವರು ತುಮಕೂರು ಜಿಲ್ಲೆಯಲ್ಲಿ ಪ್ರಗತಿಶೀಲ ಸಾಹಿತ್ಯ, ಚಳುವಳಿಗೆ ಏಳಿಗೆಗೆ ತನ್ನದೇ ರೀತಿಯಲ್ಲಿ ಜೀವನ ಸವೆಸಿದವರು.

ಎಂಭತ್ತರ ದಶಕದಲ್ಲಿ ಮತ್ತೆ ಕಾವ್ಯ ಕೃಷಿಗೆ ಹೆಚ್ಚು ಒತ್ತು ನೀಡಿದ 'ವೀಚಿ' 'ಸಂಕರತಳಿ' 'ನವಿಲುಮನೆ' 'ಅಭಿನಯದ ಬಯಲು' ಮತ್ತು 'ನಿತ್ಯಯದುಮಾಗಿತ್ತಿ' ಇತ್ಯಾದಿ ಕವನ ಸಂಕಲನಗಳನ್ನು ರಚಿಸಿದರು.

ಮಾರ್ಕ್ಸ್‌ವಾದಿ, ಸಮಾಜವಾದಿ ಚಿಂತನೆಯ ಈ ನೆಲದ ಹೃದಯವಂತ ಕವಿ ಬಹುದೂರ ನಡೆದು ಹೋಗಿದ್ದರೂ ಅವರ ವಿಶಿಷ್ಟ ಮತ್ತು ಅಪರೂಪದ ಕೃತಿಗಳು ಅವರು ನಂಬಿದ ತತ್ವ ಸಿದ್ಧಾಂತಗಳನ್ನು, ಚಳುವಳಿಗಳನ್ನು ಸದಾ ಹಸಿರಾಗಿಸಿರುತ್ತವೆ.

- ರಮೇಶ್



ಎಸ್.ಆರ್. ಬೊಮ್ಮಾಯಿ ನಿಧನ

ಕರ್ನಾಟಕದ ಮಾಜಿ ಮುಖ್ಯಮಂತ್ರಿ ಸೋಮಪ್ಪ ರಾಯಪ್ಪ ಬೊಮ್ಮಾಯಿಯವರು ನಿಧನರಾಗಿದ್ದಾರೆ. ಕರ್ನಾಟಕದ ಏಕೀಕರಣ ಚಳುವಳಿಯಲ್ಲಿ ತಮ್ಮನ್ನು ತೊಡಗಿಸಿ ಕೊಂಡವರಾಗಿದ್ದ ಎಸ್.ಆರ್.ಬೊಮ್ಮಾಯಿ ಕಾಂಗ್ರೆಸ್‌ಗೆ ಪರ್ಯಾಯವಾಗಿ ರೂಪುಗೊಂಡ ಜನತಾಪಕ್ಷ, ಜನತಾದಳದಲ್ಲಿ ಸಕ್ರಿಯರಾಗಿದ್ದರು. ಕೇಂದ್ರ ಮಾನವ ಸಂಪನ್ಮೂಲ ಶಾಖೆ ಸಚಿವರೂ ಆಗಿದ್ದ ಬೊಮ್ಮಾಯಿಯವರು ಸ್ವಲ್ಪಕಾಲ ರಾಜ್ಯ ಮುಖ್ಯಮಂತ್ರಿಯೂ ಆಗಿದ್ದರು.

ತಮ್ಮ ನೇತೃತ್ವದ ಜನತಾದಳ ಸರ್ಕಾರದ ವಜಾ ವಿರುದ್ಧ ದೇಶದ ಸರ್ವೋಚ್ಚ ನ್ಯಾಯಾಲಯದಲ್ಲಿ ಇವರು ನಡೆಸಿದ ಕಾನೂನು ಹೋರಾಟದಿಂದಾಗಿ ಸರ್ಕಾರದ ಬಹುಮತ ಪರೀಕ್ಷೆಯಾಗಬೇಕಾದದ್ದು ಶಾಸನ ಸಭೆಯಲ್ಲೇ ಎಂಬ ಮಹತ್ವದ ತೀರ್ಪು ಬಂದಿದೆ ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಇವರ ನಿಧನಕ್ಕೆ ಜನಶಕ್ತಿ ತನ್ನ ಸಂತಾಪ ಸಲ್ಲಿಸಿದೆ.

ವಚನಭ್ರಷ್ಟರು, ಇಸ್ವಾಸ ದ್ರೋಹಿಗಳು ಯಾರು ?

ಕಣ್ತೆರೆ

'ಛೇ ಇಂಗಾಗಬಾರದಿತ್ತು. ಬಾಳ ಅನ್ಯಾಯ ಭಾಳ ಅನ್ಯಾಯ' ಎಂದ ಬಹಳ ದುಃಖದಲ್ಲಿದ್ದ ಚೆಡ್ಡಿ ಚಿಕ್ಕಣ್ಣ.

'ಯಾಕ್ಲ ಚಿಕ್ಕ? ಏನ್ಲಾ ಆಯ್ತು ನಿಂಗೆ? ಯಾಕೀ ಪಾಟಿ ಬ್ಯಾಸ್ರ ಮಾಡ್ಕೊಂಡಿದೀಯಾ?' ಕಾಳಜಿಯಿಂದ ಕೇಳಿದ ಎಣ್ಣೆ ತಮ್ಮಣ್ಣ.

'ನಂಗೇನಾಗಿಲ್ಲ ಕಣ್ಲಾ, ಪಾಪ ಯಡೂರಪ್ಪಂಗೆ ಭಾರಿ ಮೋಸ ಮಾಡ್ಬುಟ್ರು' ಎಂದ ಚಡ್ಡಿ ಚಿಕ್ಕಣ್ಣ.

'ಸರ್ಯಾಗಾಯ್ತು ಬುಡ್ಲಾ. ಮಾಡ್‌ಬಾರದ್ದು ಮಾಡಿದ್ರೆ ಆಗ್‌ಬಾರದ್ದು ಆಯ್ತದೆ' ಎಂದ ಎಣ್ಣೆ ತಮ್ಮಣ್ಣ.

'ಏನ್ಲಾ ಅದು. ಏನೇನೋ ಏಳ್ತೀಯಾ? ಏನ್ಲಾ ಮಾಡ್‌ಬಾರದ್ದು ಮಾಡಿದ್ರು ನಮ್ಮ ಯಡೂರಪ್ಪ?' ಕೋಪದಿಂದ ಕೇಳಿದ ಚೆಡ್ಡಿ ಚಿಕ್ಕಣ್ಣ.

'ನೋಡು ಇಂಥ ದುಃಖ ಆದಾಗ, ಸಂತೋಷ ಆದಾಗ ಪಾಕೀಟ್ ಆಕ್ಕೊಂಡು ಸುಖವಾಗಿದ್ವಪ್ಪ. ನಿಮ್ ಯಡೂರಪ್ಪ ಸರಾಯಿ ನಿಸೇಧ ಮಾಡ್‌ಬುಟ್ಟು ನಾವೆಲ್ಲ ದುಬಾರಿ ಬಾಟ್ಲು ಎತ್ತೋ ಅಂಗೆ ಮಾಡ್‌ಬುಟ್ರಲ್ಲ. ತಟ್‌ದಲೇ ಬುಡ್ತದಾ ನಮ್ಮ ಸಾಪ?" ಎಂದು ಕೇಳಿದ ಎಣ್ಣೆ ತಮ್ಮಣ್ಣ.

'ಲೇ ಲೇ ತಮ್ಮಣ್ಣ, ನಿನ್ನಂತೋರು ಎಣ್ಣೆ ಆಕೋದು ಬುಡ್ಲಿ ಅಂತ ಕಣ್ಲಾ ಸರಾಯಿ ನಿಸೇದ ಮಾಡಿದ್ದು. ನಿಮ್ಮೊಳ್ಳೆದಕ್ಕೇ ಅಲ್ವೇನ್ಲಾ?'.

'ಅದ್ಯಾಕ್ಲ ನಾವು ಬಡುವ್ರು ಮಾತ್ರ ಕುಡಿಯೋದು ಬಿಡ್‌ಬೇಕು? ತಾಕತ್ತಿದ್ರೆ ಎಲ್ಲಾ ಡ್ರಿಂಕ್ಸೂ ನಿಸೇದ ಮಾಡ್‌ಬೇಕಾಗಿತ್ತು. ಈಗೇನು ನಾವು ಬುಟ್ವಾ ಕುಡಿಯೋದನ್ನ? ಪಾಕೀಟ್ ಬದ್ಲು ಬಾಟ್ಲು. ಬಾಟ್ಲು ಆಗದೇ ಇರ್ದೋರು ಕಳ್ಳಬಟ್ಟಿ. ಒಟ್ನಲ್ಲಿ ಊಟ ಬುಟ್ಟು ಬೇಕಾದ್ರೆ ಇರ್ತೋದು, ಎಣ್ಣೆ ಬುಟ್ಟು ಇರಕ್ಕಾಯದೇನ್ಲಾ ಚಿಕ್ಕ?"

'ಔದಾ ಇದ್ರಿಂಧ ಇಷ್ಟೊಂದು ತೊಂದ್ರೆ ಆಯ್ತದಾ? ಅಂಗಾರೆ ಇದ್ರಲ್ಲಿ ಕುಮಾರಸ್ವಾಮೀನೂ ಇರಬೇಕು. ಮೊನ್ನ ಅವರ ಪಕ್ಷದ ಅಧ್ಯಕ್ಷರು ಏಳ್ತಿದ್ದಂಗಿತ್ತು. ಸಾರಾಯಿ ನಿಸೇದ ನಾವೇ ಮಾಡಿದ್ದು ಅಂತ'

'ಏ..... ನಮ್ಮ ಕುಮಾರಣ್ಣ, ಅಂಗಲ್ಲ ಬುಡ್ಲಾ, ನಮ್ಮೆಲ್ಲಿಗೆಲ್ಲಾ ಬಂದು ಮನಿಕ್ಕತಿದ್ದ. ಒಳ್ಳೆ ಮನ್ಸ'

'ಆದ್ರೂ ಮಾತಿಗೆ ತಪ್ಪಿಬಿಟ್ಟ ಕುಮಾರಣ್ಣ' 'ಕೊಟ್ಟ ಮಾತಿಗೆ ತಪ್ಪಲಾರೆನು, ಕೆಟ್ಟ ಯೋಚನೆ ಮಾಡಲಾರೆನು.' ಅನ್ನೋ ಸಮ್ಮುಸ್ಕೃತಿ ಕಣ್ಲಾ ನಮ್ದು'

'ಅದೆಂಗ್ಲಾ ಮಾತಿಗೆ ತಪ್ಪಿದಂತೆ ಆಯ್ತದೆ? ಅವರಪ್ಪನಿಗೂ ಮಾತು ಕೊಟ್ಟಿರಬಹುದು. ಅದ್ರು ಪರಕಾರವೇ ನಡಕಂಡಿರಬಹುದು. ಸ್ರೀ ರಾಮಚಂದ್ರನೇ ಅವರಪ್ಪನ ಮಾತು ಕೇಳಿ ಕಾಡಿಗೆ ಒಗಲಿಲ್ವಾ? ಅಪ್ಪನ ಮಾತು ನಡೆಸೋದು ನಮ್ಮ ಸಮುಸ್ಕೃತಿ ತಾನೇ?"

'ಲೇ... ತಮ್ಮಾ ಇಂತ ಇಚಾರಕ್ಕೆಲ್ಲ ಆ ಸ್ರೀ ರಾಮಚಂದ್ರನ್ನ ಯಾಕ್ಲ ಓಲುಸ್ತಿಯಾ?'

'ಯಾಕ್ಲ ? ಸ್ರೀ ರಾಮಚಂದ್ರ ನಿಮ್ಮ ಸೋದರ ಮಾವ್ನ? ನಮ್ಗೂ ದ್ಯಾವ್ರು ಕಣ್ಲಾ ಅವ್ನು. ಈಗ ನಡಿತಿರೋ ಗಲೀಜು ರಾಜಕೀಯಕ್ಕೆ ಸತ್ಯ ಅರಿಚ್ಚಂದ್ರ, ಗಾಂಧೀಜಿ, ಬಸ್ವಣ್ಣ ... ... ಾಸ ಎಲ್ಲಾರ್ನೂ ಬಳಸ್ಕೋತಿದಾರಲ್ಲ. ನಾನು ಏಳಿದ್ರೆ ಮಾತ್ರ ತಪ್ಪಾ?" ಕೆರಳಿ ಕೇಳಿದ ಎಣ್ಣೆ ತಮ್ಮಣ್ಣ. 'ಅದೇನ್ಲಾ ಸರ್ಯಾಗಿ ಏಳ್ಲಾ ಬುಡ್ಲಿ'

'ಅಲ್ಲ ಕಣ್ಲಾ ಅಕ್ಟೋಬರ್ 2ನೇ ತಾರೀಖು ಗಾಂಧಿ ಜಯಂತಿ. ಅವತ್ತು ಗಾಂಧಿ ನೆನಪಾಗ್ಲಿಲ್ಲ. ಕುರ್ಚಿ ಎಂಗೆ ಇಡಕಳದು ಅಂತ ಪರದಾಡ್‌ತಿದ್ರು. ಕುರ್ಚಿ ತಪ್ಪಿತು ಅಂದ ಕೂಡ್ಲೆ ಗಾಂಧಿ ಯಾಕೆ ನೆನಪಾಯ್ತು?" ಕೇಳಿದ ಎಣ್ಣೆ ತಮ್ಮಣ್ಣ. 'ಉಲ್ಲಾ.... ಕಣ್ಲಾ ನೀನೋಳದ್ರಲ್ಲೂ ಪಾಯಿಂಟ್ ಅದೆ. ಆಮೇಲೆ?'

'ಊರು ತುಂಬಾ ಬ್ಯಾನರ್ರು ನೋಡಿದ್ಯೇನ್ಲಾ? ಆಚಾರವಿಲ್ಲದ ನಾಲಿಗೆ ನಿನ್ನ ನೀಚ ಬುದ್ಧಿಯ ಬಿಡು ನಾಲಿಗೆ' ಅಂತ ದಾಸ್ರು ಪದ. 'ಕಳಬೇಡ ಕೊಲಬೇಡ ಹುಸಿಯ ನುಡಿಯಬೇಡ' ಅಂತ ಬಸ್ವಣ್ಣನ ವಚನ. 'ಸತ್ಯ ಅರಿಚ್ಚಂದ್ರ ಸತ್ಯಕ್ಕಾಗಿ ರಾಜ್ಯ ಬುಟ್ಟ' ಅಂತ ಇನ್ನೂ ಏನೇನೋ ಆಡಿದಾರೆ ಅದೆಲ್ಲ ಸರಿ ಏನ್ಲಾ?'

'ಅದ್ರಾಗೆ ತಪ್ಪೇನ್ಲಾ? ಕರೆಟ್ಟಾಗೇ ಐತಲ್ಲ?'

'ಭಾರೀ ಬುದ್ರಿವಂತ್ರು ಬುಡ್ಲಾ ನಿಮ್ಮ ಪಾಲ್ಟಿಯೋರು. ಅಷ್ಟೆಲ್ಲಾ ಹಾಕುದ್ರು ಎಲ್ಲೂ ಕುಮಾರಣ್ಣನ ಎಸ್ರಾಕಿಲ್ಲ. ಅಲ್ಲಾ ಕಣ್ಲಾ ಈ ತರ ಈನಾಮಾನ ಮೂದಲಿಸಿದ ಮೇಲೂ, ಕುಮಾರಣ್ಣ ಮತ್ತೆ ಕೂಡಾವಳಿ ಮಾಡ್ಕಳನ ಅಂತೇಳಿದ ಕೂಡ್ಲೆ ಮೂದಲಿಕೆ ಬಾಸಣ ಅರ್ಧಕ್ಕೆ ಬಿಟ್ಟು ಜೊಲ್ಲು ಸುರಿಸ್ಕೊಂಡು ಎದ್ದೂಬಿದ್ದು ಬೆಂಗಳೂರಿಗೆ ಓಡಿದ್ಯಾಕೆ? ಮಾನ ಮರ್ವಾದೆ ಇರೋರು ಮಾಡ ಕೆಲ್ಸನಾ ಇದು? 'ಪಾಯಿಂಟ್ ಹಾಕಿದ ಎಣ್ಣೆ ತಮ್ಮಣ್ಣ. 'ಲೇ... ತಮ್ಮಣ್ಣ ನೀನು ಇಷ್ಟೊಂದು ಎಣ್ಣೆ ಹಾಕಿದ್ರೂ ಇಂತಾ ಐನಾತಿ ಪಾಯಿಂಟು ಎಂಗ್ಲಾ ಒಳಿಯುತ್ತೆ?' ಎಂದು ಕೇಳಿದ ಚಿಕ್ಕ.

'ಅದಲ್ಲ ಕಣ್ಲಾ ಐನಾತಿ ಪಾಯಿಂಟು. ಈಗೇಳ್ತಿನಿ ಕೇಳು' ವಚನ ಭ್ರಷ್ಟರಿಗೆ ವಿಶ್ವಾಸ ದ್ರೋಹಿಗಳಿಗೆ ಪಾಠ ಕಲಿಸಿ' ಅಂತ ಅಲ್ಲೆಲ್ಲ ಬ್ಯಾನರ್ ಆಕೌವ್ರಲ್ಲ. ಅದ್ರಲ್ಲಿ ಬರೀ ಬಿಜೆಪಿ ನಾಯಕರ ಪೋಟೋ ಆಕೌವ್ರೆ ಯಾಕೇಳು'? ಎಂದು ಕೇಳಿದ ಎಣ್ಣೆ ತಮ್ಮಣ್ಣ.

'ಅಷ್ಟೂ ಅರ್ತ ಆಗಕಿಲ್ವೇನ್ಲಾ? ಈಗ 'ಕಾಣೆಯಾಗಿದ್ದಾರೆ' ಅಂತ ಜಾಹಿರಾತು ಇದ್ರ ಅದರ ಕೆಳಗೆ ಕಾಣೆಯಾದವರ ಪೋಟೋ ತಾನೆ ಇರುತ್ತೆ?'

'ಔದು' ಎಂದ ಚಡ್ಡಿ ಚಿಕ್ಕಣ್ಣ ಮುಗ್ಧವಾಗಿ.

'ಅಂಗೇ.... ವಚನ ಭ್ರಷ್ಟರಿಗೆ ವಿಶ್ವಾಸ ದ್ರೋಹಿಗಳಿಗೆ ಪಾಠ ಕಲಿಸಿ' ಅಂತ ಹಾಕಿ ಅದರ ಕೆಳಗೆ ಬಿಜೆಪಿ ನಾಯಕರ ಪೋಟೊ ಆಕಿದ್ರೆ ಏನರ್ತ?'

'ಅಂದ್ರೆ ಬಿಜೆಪಿ ನಾಯುಕರು ವಚನ ಭ್ರಷ್ಟರು, ಇಸ್ವಾಸ ದ್ರೋಯಿಗಳು ಅಂತ್ಲಾ? ಏ.... ಅದೆಂಗ್ಲಾ ಆಯ್ತುದೆ? ಅವ್ರೆಲ್ಲಾ ಸ್ರೀ ರಾಮನ ಭಕ್ತರು' ಎಂದ ಚಡ್ಡಿ ಚಿಕ್ಕಣ್ಣ.

'ಔದು ಕಣ್ಲಾ, ಬಾಬ್ರಿ ಮಸೀದಿ ಕಾಪಾಡುತ್ತೀವಿ ಅಂತ ಬಾಂಡ್ ಪೇಪರ್‌ನಾಗೆ ಬರ್ಕೊಟ್ಟಿದ್ರು. ಸುಪ್ರೀಂ ಕೋರ್ಟಿಗೆ, ಆದ್ರೆ ಮಾಡಿದ್ದೇನು? ಮಂದಿರದಲ್ಲೇ ಕಟ್ಟುವೆವು ಅಂತ ದೇಶದ ಎಲ್ಲಾ ಜನರಿಗೂ ಪ್ರಮಾಣ ಮಾಡಿ ಏಳಿದ್ರು. ಎಲ್ಲೋಯ್ತು ಮಂದ್ರ? ಯಾರು ವಚನ ಭ್ರಷ್ಟರು ವಿಸ್ವಾಸ ದ್ರೋಯಿಗಳೂ? ಇಂತವ್ರು ಇನ್ನೂ ಎಷ್ಟೋ ಅವೆ. ಏಳ್ಲಾ ಇನ್ನೂ? ಕೇಳಿದ ಎಣ್ಣೆ ತಮ್ಮಣ್ಣ.

'ಬ್ಯಾಡ ಸಾಕು ನಡಿಲಾ ಓಗನ, ನಮಗ್ಯಾಕೆ ಬೇಕು ಈ ವಲಸು' ಎಂದು ಚೆಡ್ಡಿ ಚಿಕ್ಕ ಮೆಲ್ಲಗೆ ಜಾರಿದ.

*ಎಸ್.ವಿ.

ಜನಶಕ್ತಿ ಕನ್ನಡ ವಾರಪತ್ರಿಕೆ

ದೋಸ್ತಿ ಅಲ್ಲ ಕುಸ್ತಿ!

ಅಡ್ವಾಣಿ ಪ್ರಧಾನಿಯಾಗಬೇಕು, ಜೆಡಿ(ಎಸ್)ಪಕ್ಷ ಎನ್‌ಡಿಎ ಸೇರಬೇಕು ಎಂದು ಗೌಡರಿಗೆ ಶರತ್ತು ಹಾಕಿದ್ದ ಯಶವಂತ ಸಿನ್ಹ....

ಅದು ದೇವೇಗೌಡ, ಕುಮಾರಸ್ವಾಮಿಯವರ ವಚನಭ್ರಷ್ಟತೆ ಎಂಬುದನ್ನು ಜ್ಜಾಹೀರುಗೊಳಿಸಲಾಗಿದೆ. ಆದರೆ ಅದೇನಾ ಕಾರಣ? ಎಂದು ಮರುಪ್ರಶ್ನೆ ಹಾಕಿಕೊಳ್ಳಬೇಕಾಗಿದೆ.

ಬಿಜೆಪಿಯೊಂದಿಗೆ ಜೆಡಿ(ಎಸ್) ಪಕ್ಷವು ಮೈತ್ರಿ ಮುಂದುವರಿಸಬಾರದು ಎಂದು ಮಾಜಿ ಪ್ರಧಾನಿಗಳು ಪಟ್ಟು ಹಿಡಿದಿದ್ದರು ನಿಜ. ಇದನ್ನೂ ಮೀರಿದ ಹಲವು ಸಂಗತಿಗಳು ಇವೆ. ಅಧಿಕಾರ ತಪ್ಪಿಸಿದ್ದು ಬಿಜೆಪಿಯ ಪ್ರಮುಖ ನಾಯಕರೇ ಎಂಬುದು ಬೆಳಕಿಗೆ ಬರುತ್ತಿದೆ.

“ವಚನ ಭ್ರಷ್ಟರೆಂದು ನಮ್ಮನ್ನು ದೂಷಿಸಲಾಗುತ್ತಿದೆ. ಸ್ವಲ್ಪ ತಾಳ್ಮೆವಹಿಸಿ ಯಡಿಯೂರಪ್ಪನವರು ಯೋಚಿಸಬೇಕು. ಅವರು ಭಾವೋದ್ವೇಕದಿಂದ ಅಳುವಾಗ ನಗುತ್ತಿದ್ದವರು ಯಾರು ಎಂಬುದನ್ನು ನೋಡಲಿ' ಎಂದಿದ್ದರು ಕುಮಾರಸ್ವಾಮಿ.. ಹಾಗೆಯೇ 'ಅಧಿಕಾರ




ಕಾರು - ಬಾರು ನಡೆಸಿ ಹಾರಿ ಹೋದ ಸಿನ್ಹಾ-ನಾಯ್ಡು

ಹಸ್ತಾಂತರವೆಂಬುದು ಕುರ್ಚಿ ಬಿಟ್ಟು ಎದ್ದು ಅವರನ್ನು ಕೂಡಿಸುವಷ್ಟು ಸರಳವಲ್ಲ. ಅಂಥಹದ್ದೊಂದು ನಡೆಯಬೇಕೆಂದರೆ ಹಲವಾರು ಪೂರ್ವಭಾವಿ ವಸ್ತಾತುಕತೆಗಳು ನಡೆಯಬೇಕು. ಅದು ಹುಡುಗಾಟವಲ್ಲ' ಎಂದೂ ಹೇಳಿದ್ದರು ಕುಮಾರಸ್ವಾಮಿ.

ಸಿನ್ಹಾ ಕಾರುಬಾರು

ಅದು ಸೆಪ್ಟೆಂಬರ್ 30ರ ಹೊತ್ತಿಗೆ-ಅದೇಕೆ ನಿತ್ಯವೂ ಅಧಿಕಾರ ಹಸ್ತಾಂತರದ ಬಗ್ಗೆ

ಯಡಿಯೂರಪ್ಪ ಮುಖ್ಯಮಂತ್ರಿ ಆಗುವುದನ್ನು ತಪ್ಪಿಸಿದ್ದು ಯಾರು?

ಖಾತ್ರಿಪಡಿಸಿಕೊಳ್ಳುತ್ತಿದ್ದರು ಯಡಿಯೂರಪ್ಪ. ಆದರೆ 30ರಂದು ಸ್ಥಳೀಯ ಸಂಸ್ಥೆಗಳ ಚುನಾವಣಾ ಫಲಿತಾಂಶ ಪ್ರಕಟವಾಗುತ್ತಿರುವಂತೆಯೇ ಹಸ್ತಾಂತರ ಬಿಸಿ ಇನ್ನಷ್ಟು ಏರತೊಡಗಿತು. ಈ ಕೆಲಸಗಳಿಗೆಂದೇ ಬಿಜೆಪಿ 'ಹೈಕಮಾಂಡ್' ಅಚ್ಚುಕಟ್ಟಾಗಿ, ಕೆಲಸ ನಿರ್ವಹಿಸುವರೆಂಬ ಖ್ಯಾತಿಯ (ಸಂಯುಕ್ತ ಕರ್ನಾಟಕದ ವರ್ಣನೆ) ಯಶವಂತ್ ಸಿನ್ಹಾರನ್ನು ಬೆಂಗಳೂರಿಗೆ ಕಳುಹಿಸಿತು ಅಥವಾ ಕರೆಸಿಕೊಳ್ಳಲಾಯಿತು(ವೆಂಕಯ್ಯ ನಾಯ್ಡು ಸಹ ಆಗಮಿಸಿದ್ದರು). ಬಿಜೆಪಿ ನಾಯಕರ ಜೊತೆ ಮಾತನಾಡಿದ ಸಿನ್ಹಾ ಅಕ್ಟೋಬರ್ 30ರಂದು ರಾತ್ರಿ ದೇವೇಗೌಡರನ್ನು ಭೇಟಿ ಮಾಡಿದ್ದಾರೆ. ಅಲ್ಲಿ ನಡೆದ ಚರ್ಚೆಯೇ ಪ್ರಮುಖ ಪಾತ್ರವಹಿಸಿದೆ. 'ಕುಮಾರಸ್ವಾಮಿ ಬೇಕಾದರೆ ಮುಖ್ಯಮಂತ್ರಿಯಾಗಿ ಮುಂದುವರಿಯಲಿ (ಯಡಿಯೂರಪ್ಪ ಎಲ್ಲಿ?) ಆದರೆ ಜೆಡಿ(ಎಸ್) ಪಕ್ಷ ಬಿಜೆಪಿ ನೇತೃತ್ವದ ಎನ್.ಡಿ.ಎ ಕೂಟ ಸೇರಬೇಕು. ಮಾತ್ರವಲ್ಲ ಎಲ್.ಕೆ.ಅಡ್ವಾನಿಯವರನ್ನು ಪ್ರಧಾನಮಂತ್ರಿಗಳನ್ನಾಗಿಸಲು ಪೂರ್ಣ ಬೆಂಬಲ ನೀಡಬೇಕು' ಎಂಬ ಷರತ್ತನ್ನು ಸಿನ್ಹಾ ವಿಧಿಸಿದ್ದಾರೆ.



ಜೊತೆಗಿದ್ದು ಇಲ್ಲದವರು - ಬೆಂಬಲ ಹಿಂತೆಗೆದುಕೊಂಡು ರಾಜಭವನದಿಂದ ಹೊರಬರುತ್ತಿರುವ ಬಿಜೆಪಿಯ ನಾಯಕರು

'ಇದು ಅಸಾಧ್ಯ' ಎಂದು ದೇವೇಗೌಡರು ಆಗ ಹೇಳಿಕಳಿಸಿದರಂತೆ. 'ದೆಹಲಿಗೆ ಮಾತನಾಡಿ ಅರ್ಧ ಗಂಟೆಯಲ್ಲಿ ತಮಗೆ ತಿಳಿಸುವುದಾಗಿ ಹೇಳಿಹೋದ ಸಿನ್ಹಾ, ಫೋನೂ ಮಾಡಲಿಲ್ಲ. ದೆಹಲಿಗೂ ಹೋಗಲಿಲ್ಲ. ಇಲ್ಲೇ ಬೆಂಗಳೂರಲ್ಲಿ ಮೂರು ದಿನ ಟೆಂಟ್ ಹಾಕಿಬಿಟ್ಟರು.

ಕುಮಾರಸ್ವಾಮಿ ರಾಜೀನಾಮೆ ನೀಡಲು ಮೂರನೇ ತಾರೀಖಿನವರೆಗೆ ಸಮಯವಿತ್ತು. ಆದರೆ ಅಕ್ಟೋಬರ್ 1ರಿಂದ ಬಿಜೆಪಿಯ ನಾಯಕರು ವರಾತ ಶುರುವಿಟ್ಟುಕೊಂಡರು. 2ರಂದು ಎಲ್ಲಾ ಸಚಿವರು ಸಾಮೂಹಿಕವಾಗಿ (ಬಿಜೆಪಿ) ರಾಜೀನಾಮೆ ಸಲ್ಲಿಸಿದರು. 3ರ ಸಂಪುಟ ಸಭೆಗೆ ಬರಲಿಲ್ಲ.... ಹೀಗೆ ದೋಸ್ತಿಗಳು ಕುಸ್ತಿ ಮತ್ತೆ ಆರಂಭವಾಗಿಬಿಟ್ಟಿತು. ಬಳ್ಳಾರಿ ಗಣಿ ರೆಡ್ಡಿ- ಶ್ರೀರಾಮುಲು ಪ್ರಕರಣ, ಮಂಗಳೂರು-ಕರಾವಳಿ ವಿಷಯಗಳು ; ನೈಸ್ ಪ್ರಕರಣ, ಬಾಬಾಬುಡನ್‌ಗಿರಿ ವಿವಾದ. ಹೀಗೆ 4 ಪ್ರಮುಖ ವಿಷಯಗಳ ಬಗ್ಗೆ ಚರ್ಚಿಸಬೇಕಿತ್ತು. ಆದರೆ ಅದನ್ನು ಗಂಭೀರವಾಗಿ ಬಿಜೆಪಿ ನಾಯಕರು ತೆಗೆದುಕೊಳ್ಳಲಿಲ್ಲ ಎನ್ನುತ್ತಾರೆ ಜೆಡಿ(ಎಸ್) ನಾಯಕರು. ಇದರ ಬೆನ್ನಲ್ಲೇ ಮೈತ್ರಿ ಅಸಾಧ್ಯ, ಚುನಾವಣೆಗೆ ಹೋಗೋಣ ಎಂಬ ಬಿಜೆಪಿ ತೀರ್ಮಾನ ಹೊರಬಿದ್ದಿತು. ಕೇಂದ್ರದ ನಾಯಕರು, ರಾಜ್ಯದಲ್ಲಿರುವ ಕೇಂದ್ರ ನಾಯಕ (ಅನಂತ್) ಯಡಿಯೂರಪ್ಪಗೆ ಸಿ.ಎಂ. ಸ್ಥಾನ ತಪ್ಪಿಸಿದರೆಂಬ ಮಾಹಿತಿಗಳು ಈಗ ಲಭ್ಯ. ಆದರೆ ಇವು ಗಂಭೀರ ಚರ್ಚೆ ಮಟ್ಟಕ್ಕೆ ಬರಲಿಲ್ಲ. ಒಂದು ಕಾಲಕ್ಕೆ ಗಳಸ್ಯ ಕಂಠಸ್ಯರಾಗಿದ್ದ ಅನಂತ್‌ಕುಮಾರ್, ಯಡಿಯೂರಪ್ಪನವರು ದೋಸ್ತಿ ಬಿಟ್ಟು ಕುಸ್ತಿ ಹಿಡಿದಿದ್ದು ಇತಿಹಾಸವೇ?

ಆದರೆ ಒಂದೆಡೆ ಈ ಮಾಹಿತಿಗಳು ಸಾರ್ವಜನಿಕ ಚರ್ಚೆಗೆ ಬಾರದಂತೆ ನೋಡಿಕೊಳ್ಳುತ್ತಾ, ಹುತಾತ್ಮ ಪಟ್ಟಕ್ಕೆ ಹಾತೊರೆದು ಅದರ ಅನುಕಂಪ, ಮತ ರಾಜಕಾರಣಕ್ಕೆ, ಜಾತಿ ಪ್ರಚೋದನೆಗೆ ಗಂಟುಬಿದ್ದು ಬಿಜೆಪಿ ಹೊರಟಿದೆ. ಜೊತೆಗೆ ಕಡು ಕೋಮುದ್ವೇಷದ ಅಜೆಂಡಾವನ್ನು ಘೋಷಿಸಿದೆ. ಇವರ ಮಾತುಗಳಿಗೆ ಮಾರುಹೋಗುವಷ್ಟು, ಬಿಜೆಪಿ ಬೆರಳಿನ ತುದಿಯಲ್ಲಿ ಕುಣಿಸಿಬಿಡಲು ಜನರೇನು ಮೂರ್ಖರೇ? ಹಾಗೆ ನಂಬಿದವರು ಮೂರ್ಖರಷ್ಟೆ.

.........ಧರ್ಮಯುದ್ಧವಲ್ಲ ಅಂತರ್ಯುದ್ಧ

ಪುಟ 3 ರಿಂದ

ಪ್ರತಿನಿಧಿಗಳು, ಜನತೆ ಬಲಿಬೀಳಬೇಕಿಲ್ಲ. ಬಿಜೆಪಿಯ ರಾಜಕೀಯ ಹುನ್ನಾರಗಳಿಗೆ, ಲಿಂಗಾಯತ ಸಮುದಾಯದವರನ್ನು ಸೆಳೆವ ಯತ್ನದ 'ಯುದ್ಧ' ಯಾತ್ರೆಯ ಸಭೆ ರಾಜ್ಯದ ಪ್ರಮುಖ ನಗರಗಳಲ್ಲಿ ನಡೆದಿವೆ. ಜೆಡಿ(ಎಸ್) ನಾಯಕ ದೇವೇಗೌಡ, ಕುಮಾರಸ್ವಾಮಿಯವರ ವಚನಭ್ರಷ್ಟತೆ, ದ್ರೋಹದ ಬಗ್ಗೆ ಯಡಿಯೂರಪ್ಪ, ಅನಂತಕುಮಾರ್, ಸದಾನಂದ ಗೌಡ ಮುಂತಾದವರು ತಮ್ಮದೇ ಆದ ಚತುರ ಭಾಷಣ ಕಲೆ ಬಳಸಿ ಟೀಕಿಸಿದ್ದಾರೆ. ಇದು ಬಹುತೇಕ ಕಡೆಗಳಲ್ಲಿ ಪ್ರಸ್ತಾಪಿತ ವಿಷಯವಾದರೂ ವಿಶೇಷವಾಗಿ ಒಂದೊಂದು ಜಿಲ್ಲೆಗಳಲ್ಲಿಯೂ ಬೇರೆ ವಿಷಯಗಳನ್ನು ಪ್ರಸ್ತಾಪಿಸಿದ್ದಾರೆ. ಚಿಕ್ಕಮಗಳೂರಿನ ಬಹಿರಂಗ ಸಭೆಯಲ್ಲಿ ಮಾಜಿ ಕೇಂದ್ರಸಚಿವ ಅನಂತಕುಮಾರ್ ತಮಗೇ ಬಹುಮತ ನೀಡಿ ಅಧಿಕಾರಕ್ಕೆ ತಂದರೆ ಬಾಬಾಬುಡನ್‌ಗಿರಿಯನ್ನು (ಗುಹೆಯನ್ನು) ದತ್ತಪೀಠವನ್ನಾಗಿ ಮಾಡುವುದಾಗಿ ಘೋಷಿಸಿರುವುದು ಸಂಘಪರಿವಾರದ ನಿಜ ಅಜೆಂಡಾವನ್ನು ಬಹಿರಂಗಗೊಳಿಸಿತು. ಇದೇ ಮಹಾಶಯರು ಹಿಂದೆ ಗಿರಿಯನ್ನು ಇನ್ನೊಂದು ಅಯೋಧ್ಯೆಯನ್ನಾಗಿಸುವ, ಕರ್ನಾಟಕವನ್ನು ಗುಜರಾತನ್ನಾಗಿಸುವ ಬೆದರಿಕೆಯನ್ನು ಪ್ರಕಟಿಸಿದ್ದರು. ಕೋಮುಸೌಹಾರ್ದತೆ, ಸಾಮರಸ್ಯ, ಬಹುಸಂಸ್ಕೃತಿಯ ಆಚರಣೆಗಳನ್ನು ನಾಶಗೊಳಿಸುವುದಕ್ಕಾಗಿ ಇವರಿಗೆ ಅಧಿಕಾರ ನೀಡಬೇಕೆ ಎಂಬುದು ಗಂಭೀರ ಪ್ರಶ್ನೆ.

ಜನರ ಜೀವನದ ಪ್ರಶ್ನೆಗಳಿಗೆ ಸಂಪೂರ್ಣ ನಿರ್ಲಕ್ಷ್ಯ

ಈ ಧರ್ಮಯುದ್ಧದಲ್ಲಿ ಬಹುತೇಕವಾಗಿ ಅಂತಹುದೇ ಮಾತುಗಳು. ಆದರೆ ಕರ್ನಾಟಕದ ಜನ ಅನುಭವಿಸುತ್ತಿರುವ ನೆರೆಹಾವಳಿ, ರೇಷನ್ ಕಡಿತ, ಸಾಲದ ಬಾಧೆ, ಸರಣಿ ಆತ್ಮಹತ್ಯೆಗಳು, ನಿರುದ್ಯೋಗ, ಕಾರ್ಮಿಕರು, ರೈತರು, ಕೂಲಿಕಾರರು-ಮಹಿಳೆಯರ ಬವಣೆಗಳು, ಕುಡಿವ ನೀರಿಗೂ ಹಾಹಾಕಾರ, ನಿವೇಶನವಿಲ್ಲದಿರುವುದು ಮುಂತಾದ ಗಂಭೀರವಾದ ಪ್ರಶ್ನೆಗಳ ಬಗ್ಗೆ ಒಂದೇ ಒಂದು ಪ್ರಸ್ತಾಪವೇ ಇಲ್ಲ. ಇದು ಜನದ್ರೋಹವಲ್ಲವೇ? ಇಂತಹ ಜನದ್ರೋಹಕ್ಕೆ ಬಿಜೆಪಿಯನ್ನು ಅಧಿಕಾರಕ್ಕೆ ತರಬೇಕೇ? ಅಧಿಕಾರದಲ್ಲಿದ್ದಾಗ ಬಿಜೆಪಿ ಏನು ಮಾಡಿತು? ಕೋಮುದ್ವೇಷ ಹರಡಲು, ಭೂಮಿ ಕಬಳಿಸುವ ಸಾರ್ವಜನಿಕ ಆಸ್ತಿ ಹೊಡೆಯುವುದರಲ್ಲಿ ಭ್ರಷ್ಟಾಚಾರ ಮಹಾನಿಪುಣರು ಎಂಬುದನ್ನು ಜನ ನೋಡಿ ಆಯಿತು. ಇನ್ನಷ್ಟು ಲೂಟಿ ಹೊಡೆಯಿರಿ ಎಂದು ಪೂರ್ಣ ಅವಕಾಶ ನೀಡಬೇಕು. ಜನ ಇದನ್ನು ಪ್ರಶ್ನಿಸಬೇಕು.

ಯಡಿಯೂರಪ್ಪನವರಿಗೆ ಮುಖ್ಯ ಮಂತ್ರಿ ಸ್ಥಾನ ತಪ್ಪಿದ್ದು ಯಾಕೆ, ತಪ್ಪಿಸಿದ್ದು ಯಾರು ಎಂಬ ಬಗ್ಗೆ ಹಲವಾರು ಸಂಗತಿಗಳು ಬಯಲಿಗೆ ಬರುತ್ತಿವೆ. ಬಿಜೆಪಿಯ ನಾಯಕರೇ ಅದನ್ನು ತಪ್ಪಿಸಿದರು, ತಮ್ಮ ಮೇಲೆ ವಚನಭ್ರಷ್ಟರೆಂಬ ದೂಷಣೆ ಯಾಕೆ ಎಂದು ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿಯೇ ಹೇಳುತ್ತಿದ್ದಾರೆ. ಅವರು ಬಹಿರಂಗಗೊಳಿಸಿರುವ ಅಂಶಗಳು ಗಹನವಾಗಿವೆ. ಹೀಗಾಗಿ ಒಂದರ್ಥದಲ್ಲಿ ಇದು ಬಿಜೆಪಿಯ ಒಳಜಗಳಗಳಿಂದ ಪಾರಾಗಲು ಬಹಿರಂಗದಲ್ಲಿ ನಡೆದಿರುವ 'ಬರೀ ಅಂತರ್ ಯುದ್ಧ' ಮಾತ್ರ.

ಅಧಿಕಾರದ ದಾಹದ ಪರಾಕಾಷ್ಠೆ


ತಮಗೆ ಅಧಿಕಾರದ ದಾಹವಿಲ್ಲ, ಜನರ ಆಶೀರ್ವಾದದಿಂದ ಸ್ವಂತ ಶಕ್ತಿಯ ಮೇಲೆಯೇ ಮುಖ್ಯಮಂತ್ರಿಯಾಗುವುದಾಗಿ ಘೋಷಿಸುತ್ತಿರುವ ಯಡಿಯೂರಪ್ಪ ಹಾಗೂ ಅನಂತಕುಮಾರ್ ಏನೆಲ್ಲಾ ಸೇರಿಕೊಂಡರೂ ವಾಸ್ತವ ಬೇರೆಯೇ ಇದೆಯೆಂಬುದನ್ನು ಅವರೇ ಬಯಲುಗೊಳಿಸಿಕೊಂಡರು. ಅತ್ತ ತುಮಕೂರಿನಲ್ಲಿ ಬಹಿರಂಗ ಸಭೆಯಲ್ಲಿ ಯುದ್ಧ ಘೋಷಿಸುತ್ತಿರುವಾಗಷ್ಟೇ ಜೆಡಿ(ಎಸ್)ನ ಶಾಸಕರು (ಕುಮಾರಸ್ವಾಮಿ ಇತ್ಯಾದಿ) ಬಿಜೆಪಿಗೆ ಬೆಂಬಲಿಸಲು ನಿರ್ಧರಿಸಿದ್ದಾರೆಂಬ ಸುದ್ದಿ ಹಿಡಿದು ತರಾತುರಿಯಲ್ಲಿ ಹೆಲಿಕಾಪ್ಟರ್ ಹತ್ತಿ ಯಡಿಯೂರಪ್ಪ ಧಾವಿಸಿದರು. ಪೂರ್ವಭಾವಿ ಸಿದ್ಧತೆಯ ಮಾತುಗಳೂ ಸಭೆಗಳೂ ನಡೆದುಹೋದವು.

ಆದರೆ ನಿಗದಿ ಅವಧಿಯೊಳಗೆ ಬಿಜೆಪಿಯನ್ನು ಬೆಂಬಲಿಸುವ ಪತ್ರವನ್ನು ಜೆಡಿ(ಎಸ್) ಕೊಡಲಾಗಲಿಲ್ಲ. ಆ ಬಳಿಕ ಬಿಜೆಪಿಯೊಂದಿಗೆ ಮರುಮೈತ್ರಿ ಸಾಧ್ಯತೆಯನ್ನೇ ಅಲ್ಲಗಳೆಯಲಾಯಿತು. ಹೀಗಾಗಿ ಹ್ಯಾಪ್ ಮೋರೆ ಹೊತ್ತು ಯಡಿಯೂರಪ್ಪ ಮತ್ತೆ ಯುದ್ಧ ಸಾರಲು ಹೊರಟರು. ಆದರೆ 'ಈಗ ಬೆಂಗಳೂರಿಗೆ ಬೆನ್ನುತಿರುಗಿಸಿ ಜೆಡಿ(ಎಸ್) ಬೆಂಬಲ ತೆಗೆದುಕೊಳ್ಳೊಲ್ಲ ಎಂದು ರಾಜ್ಯಪಾಲರಿಗೆ ತಿಳಿಸಲು ಬಂದಿದ್ದೇ' ಎಂದು ಬುರುಡೆಬಿಟ್ಟಿದ್ದಾರೆ.

ಆದರೆ ಜೆಡಿ(ಎಸ್) ಮೇಲೆ 'ಧರ್ಮಯುದ್ಧ' ಸಾರಿ ಕತ್ತಿ ಹಿಡಿದು ಹೊರಟ ಇವರು ಅಧಿಕಾರ ಸಿಗುತ್ತದೆ ಎಂದಾಗ ಹೇಗೆ ಹಾತೊರೆಯುತ್ತಾರೆ, ಹಪಾಹಪಿಸುತ್ತಾರೆ ಎಂದು ಅಧಿಕಾರದ ದಾಹದ ಪರಾಕಾಷ್ಠೆ ಪ್ರದರ್ಶನ ಕರ್ನಾಟಕದ ಜನರಿಗೆ ಲಭಿಸಿತು.

ಅಣುಒಪ್ಪಂದ : ಅವಸರದ ತೀರ್ಮಾನ ಬೇಡ - ಜಿ.ಎನ್. ನಾಗರಾಜ್

ಭಾರತ ಅಮೇರಿಕ ಅಣು ಒಪ್ಪಂದದ ಬಗ್ಗೆ ಲೋಕಸಭೆಯಲ್ಲಿ ಚರ್ಚೆಯಾಗಿ ಒಪ್ಪಂದದ ಸಾಧಕ ಬಾಧಕಗಳು, ಇದಕ್ಕಾಗಿ ನಾವು ತೆರಬೇಕಾದ ಬೆಲೆ, ಒಪ್ಪಂದದ ಪಾತ್ರದ ಬಗ್ಗೆ ಜನತೆ ತಿಳಿದುಕೊಳ್ಳುವಂತಾಗಬೇಕು. ಈ ಬಗ್ಗೆ ಅವಸರದ ತೀರ್ಮಾನ ಬೇಡ ಎಂದು ಸಿಪಿಐ(ಎಂ)ನ ಕರ್ನಾಟಕ ರಾಜ್ಯ ಸಮಿತಿಯ ಕಾರ್ಯದರ್ಶಿ ಜಿ.ಎನ್.ನಾಗರಾಜ್ ಅಭಿಪ್ರಾಯಪಟ್ಟರು.



ಮಂಗಳೂರಿನ ಕಂದಾಯ ಭವನದಲ್ಲಿ ಸಿಪಿಎಂ ದಕ್ಷಿಣ ಕನ್ನಡ ಜಿಲ್ಲಾ ಸಮಿತಿ ವತಿಯಿಂದ 'ಭಾರತ ಅಮೇರಿಕ ಪರಮಾಣು ಒಪ್ಪಂದ ಮತ್ತು ಅಮೆರಿಕ ಷರತ್ತು' ಎಂಬ ವಿಚಾರ ಸಂಕಿರಣ ಕಾರ್ಯಕ್ರಮದಲ್ಲಿ ಅವರು ಮಾತನಾಡುತ್ತಿದ್ದರು.

ಈ ಅಣು ಒಪ್ಪಂದವು 40 ವರ್ಷಗಳ ಕಾಲ ನಮ್ಮ ದೇಶವನ್ನು ಅಮೆರಿಕದ ಬಂಧನಕ್ಕೊಳಪಡಿಸುವಂಥದ್ದು. ಇದರ ಜೊತೆಗೆ ಅಂತರಾಷ್ಟ್ರೀಯ ಅಣುಶಕ್ತಿ ಆಯೋಗ (ಐಎಇಎ)ದ ಜೊತೆ ಒಪ್ಪಂದ ಮಾಡಿಕೊಂಡು ಅಮೇರಿಕದ ಅಣು ಸಂಸ್ಥೆಗಳು ನಮ್ಮ ಅಣು ಸ್ಥಾವರಗಳ ನಿರಂತರ ತಪಾಸಣೆಗೆ ಅವಕಾಶ ನೀಡುವುದೂ ಸೇರಿದೆ. ಅಣುಶಕ್ತಿ, ವಿದ್ಯುಚ್ಛಕ್ತಿ ಅಗತ್ಯದ ಬಗ್ಗೆ ನಮಗಾವುದೇ ರೀತಿಯ ತಕರಾರಿಲ್ಲ ಎಂದು ಅವರು ಹೇಳಿದರು.

ಈ ಅಣು ಒಪ್ಪಂದದ ಪ್ರಕಾರ 2040ರವರೆಗೆ 40,000 ಮೆಗಾವ್ಯಾಟ್ ವಿದ್ಯುತ್ತನ್ನು ಮಾತ್ರ ಪಡೆಯಬಹುದು. ಅಂದರೆ ನಮ್ಮ ಶೇ.6ರಷ್ಟು ವಿದ್ಯುಚ್ಛಕ್ತಿ ಅಗತ್ಯವನ್ನು ಪೂರೈಸಲು ಮಾತ್ರ ಸಾಧ್ಯ. ಆದರೆ ನಮ್ಮಲ್ಲಿ 1 ಲಕ್ಷ 50 ಸಾವಿರ ಮೆಗಾವ್ಯಾಟ್ ಜಲವಿದ್ಯುತ್ ಲಭ್ಯವಿದೆ. 150 ವರ್ಷಗಳ ವಿದ್ಯುತ್ ಪೂರೈಕೆಗೆ ಅಗತ್ಯವಾದ ಕಲ್ಲಿದ್ದಲು ನಮ್ಮಲ್ಲಿದೆ. ಹೀಗಿರುವಾಗ ಈ ಒಪ್ಪಂದದಿಂದ ಏನು ಲಾಭ ಎಂದವರು ಪ್ರಶ್ನಿಸಿದರು.

ಈ ಅಣುಶಕ್ತಿ ಒಪ್ಪಂದಕ್ಕಾಗಿ 5 ಲಕ್ಷ ಕೋಟಿ ರೂ. ನೀಡಲು ಕೇಂದ್ರ ಸರಕಾರ ಮುಂದಾಗಿದೆ. ಆದರೆ ನಮ್ಮ ದೇಶದಲ್ಲಿ ಯಥೇಚ್ಛವಾಗಿ ದೊರೆಯುವ ಥೋರಿಯಂ ಅನ್ನು ಇಂಧನವಾಗಿ ಉಪಯೋಗಿಸಿ ಅಣುಶಕ್ತಿ ಉತ್ಪಾದಿಸಲು ವಿಜ್ಞಾನಿಗಳು ಮುಂದಾಗಿದ್ದಾರೆ. ಈ ಬಗ್ಗೆ ಸಂಶೋಧನೆಗಳು ಕೂಡಾ ನಡೆಯುತ್ತಿವೆ. ಅದಕ್ಕಾಗಿ ಅವರು ಕಳೆದ 15 ವರ್ಷಗಳಿಂದ 150 ಕೋಟಿ ರೂ.ಗಳನ್ನು ಕೇಳಿದ್ದರೂ ಅದನ್ನು ಕೊಡಲು ನಮ್ಮ ಸರಕಾರ ತಯಾರಿಲ್ಲ ಎಂದು ಹೇಳಿದ ಜಿ.ಎನ್. ನಾಗರಾಜ್, ಒಂದು ವೇಳೆ ನಮ್ಮ ವಿಜ್ಞಾನಿಗಳಿಗೆ ತಮ್ಮ ಸಂಶೋಧನೆಗೆ ಆರ್ಥಿಕ ನೆರವು ಒದಗಿಸಿದಲ್ಲಿ ನಮ್ಮ ದೇಶವು ಥೋರಿಯಂ ಮೂಲಕ ಅಣುಶಕ್ತಿ ಉತ್ಪಾದಿಸುವ ಪ್ರಥಮ ರಾಷ್ಟ್ರವಾಗಿ ಹೊರಹೊಮ್ಮಲಿದೆ ಎಂದು ಅಭಿಪ್ರಾಯಪಟ್ಟರು. ಈ ಮೂಲಕ ದೇಶವು ಸ್ವಾವಲಂಬಿಯಾಗಲು ನಮ್ಮ ವಿಜ್ಞಾನಿಗಳಿಗೆ ಅವಕಾಶ ನೀಡುವಂತೆ ಅವರು ಪ್ರಧಾನಿ ಮನಮೋಹನ್‌ಸಿಂಗ್ ಹಾಗೂ ಸೋನಿಯಾ ಗಾಂಧಿಯವರನ್ನು ಆಗ್ರಹಿಸಿದರು.

ಭಾರತವು ಅಣುಶಕ್ತಿಯಲ್ಲಿ ಸ್ವಾವಲಂಬನೆ ಪಡೆಯುವುದು ಅಮೇರಿಕಕ್ಕೆ ಬೇಕಾಗಿಲ್ಲ. ಜೊತೆಗೆ ಪೆಟ್ರೋಲಿಯಂ ಉತ್ಪನ್ನಗಳಿಗಾಗಿ ಅರಬ್ ರಾಷ್ಟ್ರಗಳು ಹಾಗೂ ಇರಾನ್ ಜೊತೆಗಿನ ನಮ್ಮ ಬಹಳ ಕಾಲದ ಮೈತ್ರಿಯನ್ನು ಮುರಿಯುವುದು ಕೂಡಾ ಅಮೇರಿಕದ ಪ್ರಯತ್ನವಾಗಿದೆ. ಹಾಗಾಗಿ, ಈ ಬಗ್ಗೆ ಕೇವಲ 140 ಸಂಸದರನ್ನು ಹೊಂದಿರುವ ಕಾಂಗ್ರೆಸ್ ಪಕ್ಷವು ಅಮೇರಿಕದ ಒತ್ತಡಕ್ಕೆ ಮಣಿದು ಏಕಪಕ್ಷೀಯ ನಿರ್ಧಾರ ಕೈಗೊಳ್ಳುವುದು ಸರಿಯಲ್ಲ ಎಂದವರು ಅಭಿಪ್ರಾಯಪಟ್ಟರು.

ಲೋಕಸಭೆಯಲ್ಲಿ ಈ ಒಪ್ಪಂದದ ವಿರುದ್ಧ ಬಹುಮತವಿರುವಾಗ ಅದನ್ನು ಧಿಕ್ಕರಿಸದೆ ಪ್ರಜಾಪ್ರಭುತ್ವವನ್ನು ಗೌರವಿಸುವಂತೆ ಪ್ರಧಾನಮಂತ್ರಿಗೆ ನಾಗರಾಜ್ ಸಲಹೆ ನೀಡಿದರು. ವಿಚಾರ ಸಂಕಿರಣದಲ್ಲಿ ಸಿಪಿಎಂನ ರಾಜ್ಯ ಕಾರ್ಯದರ್ಶಿ ಮಂಡಳಿಯ ಸದಸ್ಯ ಬಿ.ಮಾಧವ, ಸಿಪಿಎಂನ ಜಿಲ್ಲಾ ಕಾರ್ಯದರ್ಶಿ ಕೆ.ಆರ್.ಶ್ರೀಯಾನ್ ಉಪಸ್ಥಿತರಿದ್ದರು.

ಅಣು ಒಪ್ಪಂದ ಸಾರ್ವಭೌಮತೆಗೆ ಮಾರಕ - ಜಿ.ವಿ.ಶ್ರೀರಾಮರೆಡ್ಡಿ

ಅಮೆರಿಕ ಜತೆಗಿನ ಪರಮಾಣು ಒಪ್ಪಂದವು ದೇಶದ ಸಾರ್ವಭೌಮತೆಗೆ ಧಕ್ಕೆ ತರಲಿದ್ದು ಈ ವಿಚಾರವಾಗಿ ಕೇಂದ್ರ ಸರ್ಕಾರ ಜನರ ದಿಕ್ಕು ತಪ್ಪಿಸುವಂತೆ ಹೇಳಿಕೆ ನೀಡುತ್ತಿದೆ ಎಂದು ಸಿಪಿಐ(ಎಂ) ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರು, ಬಾಗೇಪಲ್ಲಿ ಶಾಸಕರೂ ಆದ ಜಿ.ವಿ.ಶ್ರೀರಾಮರೆಡ್ಡಿ ಹೇಳಿದರು. ಭಾರತ ದಾರಿ ಮಾಡಿಕೊಳ್ಳುತ್ತಿದೆ. ಎಂದು ಟೀಕಿಸಿದರು.

ಅಣು ವಿದ್ಯುತ್ ಉತ್ಪಾದಿಸಲು ಭಾರತವು ಅಮೆರಿಕಕ್ಕೆ 3.40 ಲಕ್ಷ ಕೋಟಿ ರೂ. ನೀಡಬೇಕಾಗುತ್ತದೆ. ಒಂದು ಯೂನಿಟ್‌ಗೆ 5.50 ರೂ.ಉತ್ಪಾದನಾ ವೆಚ್ಚವಾಗುತ್ತದೆ. ಸಾಗಾಣಿಕೆಯ ಖರ್ಚೂ ಸೇರಿದರೆ ಪ್ರತಿ ಯೂನಿಟ್ ವಿದ್ಯುತ್‌ನ ದರ 11.30 ರೂ. ಆಗಲಿದೆ. ಶೇ.38ರಷ್ಟು ಬಡತನ



ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ ಜಿಲ್ಲಾಸಮಿತಿಯ ವತಿಯಿಂದ ಬಳ್ಳಾರಿ ನಗರದಲ್ಲಿ ಗುರುವಾರ ಹಮ್ಮಿಕೊಂಡಿದ್ದ 'ಭಾರತ ಅಮೆರಿಕ ಪರಮಾಣು ಒಪ್ಪಂದ ಮತ್ತು ಹೈಡ್ ಕಾಯ್ದೆಯ ಪರಿಣಾಮಗಳು' ಕುರಿತು ವಿಚಾರ ಸಂಕಿರಣದಲ್ಲಿ ಅವರು ಮಾತನಾಡಿದರು.

ಈ ಒಪ್ಪಂದವು ಕೇವಲ ಭಾರತದ ವಿದ್ಯುಚ್ಛಕ್ತಿಯ ಅಗತ್ಯವನ್ನು ಪೂರೈಸುವುದಕ್ಕೆ ಸೀಮಿತವಾಗಿಲ್ಲ. ಯುರೇನಿಯಂ ಹಾಗೂ ಪರಮಾಣು ರಿಯಾಕ್ಟರ್‌ಗಳನ್ನು ಸರಬರಾಜು ಮಾಡುವ ನೆಪದಲ್ಲಿ ಅಮೆರಿಕ ಈ ದೇಶದ ವಿದೇಶಾಂಗ ನೀತಿಯ ಮೇಲೆ ನಿಯಂತ್ರಣ ತರಲು ರೇಖೆಗಿಂತ ಕೆಳಗಿರುವ ಜನರಿಂದ ಕೂಡಿರುವ ನಮ್ಮ ದೇಶದಲ್ಲಿ ಇಷ್ಟು ದುಬಾರಿಯಾದ ವಿದ್ಯುತ್ ಖರೀದಿಸಲು ಜನ ಸಾಮಾನ್ಯರಿಗೆ ಸಾಧ್ಯವಾಗುವುದೇ ಎಂದು ಅವರು ಪ್ರಶ್ನಿಸಿದರು. ಹೈಡ್ ಕಾಯ್ದೆಯ ಪ್ರಕಾರ ಅಮೆರಿಕದ ಅಧ್ಯಕ್ಷರು ವರ್ಷಕ್ಕೊಮ್ಮೆ ಭಾರತದ ವಿದೇಶಾಂಗ ನೀತಿಯ ಕುರಿತು ಅಮೇರಿಕದ ಪಾರ್ಲಿಮೆಂಟ್‌ಗೆ ವರದಿ ನೀಡಬೇಕು ಎಂಬ ಷರತ್ತು ಭಾರತದ ಸಾರ್ವಭೌಮತೆಗೆ ಪೆಟ್ಟು ಕೊಡುತ್ತದೆ ಎಂದರು. ಪಕ್ಷದ ಮುಖಂಡರಾದ ಆರ್.ಎಸ್. ಬಸವರಾಜ್, ಎಸ್.ಪ್ರಸನ್ನಕುಮಾರ್, ಯು.ಬಸವರಾಜ್.ಡಿ, ವೆಂಕಟರಮಣ ಹಾಜರಿದ್ದರು.

ಭಾರತ ಅಮೇರಿಕಾ ಪರಮಾಣು ಒಪ್ಪಂದದ ಕುರಿತು ಚರ್ಚೆ

'ಚುನಾವಣೆಗಳು 2009 ರಲ್ಲೇ' - ಪ್ರಧಾನಿ, ಕಾಂಗ್ರೆಸ್ ಅಧ್ಯಕ್ಷರು

'ಚುನಾವಣೆಗಳು ಇನ್ನೂ ಬಹಳ ದೂರ ಇವೆ. ಸರ್ಕಾರ ಇನ್ನೂ ಒಂದೂವರೆ ವರ್ಷಗಳನ್ನು ಪೂರೈಸಬೇಕಾಗಿದೆ. ಅಲ್ಲಿಯವರೆಗೆ ಮುಂದುವರೆಯುತ್ತೇವೆ' ಎಂಬುದು ನನ್ನ ನಿರೀಕ್ಷೆ ಎಂದು ಪ್ರಧಾನ ಮಂತ್ರಿ ಮನಮೋಹನ್‌ಸಿಂಗ್‌ರವರು ಹೇಳಿದ್ದಾರೆಂದು ವರದಿಯಾಗಿದೆ. ಕಾಂಗ್ರೆಸ್ ಅಧ್ಯಕ್ಷೆ ಹಾಗೂ ಯುಪಿಎ ಅಧ್ಯಕ್ಷೆ ಸೋನಿಯಾ ಗಾಂಧಿಯವರೂ 'ಇಲ್ಲ, ನಾವು ಬೇಗನೇ ಚುನಾವಣೆಗಳನ್ನು ನಡೆಸುವ ಪರವಾಗಿ ಇಲ್ಲ. ಪ್ರಧಾನ ಮಂತ್ರಿಗಳು ಹೇಳಿದಂತೆ 2009ರ ವರೆಗೆ ನಮ್ಮ ಅವಧಿ. 2009ರವರೆಗೆ ನಮ್ಮ ಕಾರ್ಯಕ್ರಮಗಳನ್ನೆಲ್ಲಾ ಜಾರಿಗೆ ತರಲು ಏನು ಸಾಧ್ಯವೋ ಅದನ್ನೆಲ್ಲಾ ಮಾಡುತ್ತೇವೆ' ಎಂದು ಹೇಳಿದ್ದಾಗಿ ವರದಿಯಾಗಿದೆ.



ಪರಮಾಣು ಒಪ್ಪಂದ ಕುರಿತ ಸಮಿತಿ ಸಭೆ ಬಳಿಕ ಹೊರಬರುತ್ತಿರುವ ಯುಪಿಎ-ಎಡಪಕ್ಷಗಳ ನಾಯಕರು.

ಭಾರತ-ಅಮೇರಿಕಾ ಪರಮಾಣು ಒಪ್ಪಂದ ಕುರಿತ ಒಪ್ಪಂದ ಹಾಗೂ ಅಂತರಾಷ್ಟ್ರೀಯ ಅಣುಶಕ್ತಿ ಆಯೋಗದ ಅಧ್ಯಕ್ಷರ ಭಾರತ ಭೇಟಿಯ ಸಂದರ್ಭದಲ್ಲಿ ಕಾಂಗ್ರೆಸ್ ಮುಖಂಡರು ಮಾಡಿದ ತಪ್ಪುಗಳಿಂದಾಗಿ ಈ ವಿವಾದ ಯುಪಿಎ ಸರ್ಕಾರ ಪತನಕ್ಕೆ ಕಾರಣವಾಗಬಹುದು ಎಂಬ ಸಂದೇಹ ಹರಡಿತ್ತು.

ಪ್ರಧಾನಿಗಳು ಮತ್ತು ಯುಪಿಎ ಅಧ್ಯಕ್ಷರ ಈ ಹೇಳಿಕೆಗಳು ಈ ನಿಟ್ಟಿನಲ್ಲಿ ಸಕಾರಾತ್ಮಕವಾಗಿದ್ದು ಈ ಸಂದೇಹ ದೂರವಾಗಿದೆ, ರಾಜಕೀಯ ಬಿಕ್ಕಟ್ಟು ಸದ್ಯಕ್ಕೆ ದೂರವಾಗಿದೆ ಎಂದು ರಾಜಕೀಯ ವೀಕ್ಷಕರು ಅಭಿಪ್ರಾಯಪಡುತ್ತಿದ್ದಾರೆ.

ಹಿಂದೂಸ್ಥಾನ್ ಟೈಮ್ಸ್ ಲೀಡರ್ ಶಿಪ್ ಸಮ್ಮಿಟ್‌ನ್ನು ಉದ್ಘಾಟಿಸಿದ ಪ್ರಧಾನ ಮಂತ್ರಿಗಳು ನಂತರ ಪ್ರಶ್ನೆಗಳಿಗೆ ಉತ್ತರಿಸುತ್ತಾ 'ಈ ಒಪ್ಪಂದ ಜಾರಿಗೆ ಬರದಿದ್ದರೆ ತನಗೆ ನಿರಾಶೆಯಂತೂ ಆಗುತ್ತದೆ, ಆದರೆ ನಮ್ಮದು ಒಂದೇ ಪ್ರಶ್ನೆಯ ಮೇಲೆ ಕೆಲಸ ಮಾಡುವ ಸರ್ಕಾರವಲ್ಲ, ಜೀವನದಲ್ಲಿ ಕೆಲವು ನಿರಾಶೆಗಳಾಗುವುದು ಖಂಡಿತ. ಅದನ್ನು ಎದುರಿಸಿ ಮುಂದುವರೆಯಬೇಕು. ಈ ಒಪ್ಪಂದವಾಗದಿದ್ದರೆ ಅದೇ ಜೀವನದ ಕೊನೆಯೇನಲ್ಲ' ಎಂದರಂತೆ.

ಹರ್ಯಾಣದಲ್ಲಿ ತಾನು ಹೇಳಿದ್ದು ಎಡಪಕ್ಷಗಳ ಬಗ್ಗೆ ಅಲ್ಲ, ಸ್ಥಳೀಯ ವಿರೋಧ ಪಕ್ಷಗಳ ಬಗ್ಗೆ ಎಂದು ಸೋನಿಯಾ ಗಾಂಧಿಯವರು ತಮ್ಮನ್ನು ಕೇಳಿದ ಒಂದು ಪ್ರಶ್ನೆಗೆ ಉತ್ತರಿಸುತ್ತಾ, 'ಎಡ ಪಕ್ಷಗಳು ಕಾರಣವಿಲ್ಲದೆ ವರ್ತಿಸುತ್ತಿಲ್ಲ, ಅವರು ತಮ್ಮ ಅಭಿಪ್ರಾಯಗಳನ್ನು ಹೇಳುತ್ತಿದ್ದಾರಷ್ಟೆ. ನಾವು ಜತೆಗೆ ಕೆಲಸ ಮಾಡುತ್ತಿದ್ದೇವೆ. ನಾವು ಅವರ ಅಭಿಪ್ರಾಯಗಳನ್ನು ಅರ್ಥಮಾಡಿ ಕೊಳ್ಳಬೇಕು, ಅದನ್ನು ಗಮನಕ್ಕೆ ತೆಗೆದುಕೊಳ್ಳಬೇಕು' ಎಂದಿದ್ದಾರೆ.

ಪರಮಾಣು ಒಪ್ಪಂದವನ್ನು ತಾವು ವಿರೋಧಿಸುವುದಾಗಿ ಹೇಳಿದರೂ, ಎಡಪಕ್ಷಗಳಂತೆ ತರ್ಕಬದ್ಧವಾಗಿ ತಮ್ಮ ಆಕ್ಷೇಪಗಳನ್ನು ಮುಂದಿಡದ, ಸಂಸತ್ತಿನಲ್ಲಿ ಆ ಬಗ್ಗೆ ಚರ್ಚೆ ನಡೆಯಲು ಬಿಡದ ಬಿಜೆಪಿ ಮುಖಂಡರಿಗೆ ಈ ಹೇಳಿಕೆಗಳಿಂದಾಗಿ ಬಹಳ ನಿರಾಸೆಯಾದಂತಿದೆ.

ಅಮೆರಿಕಾ-ಭಾರತಗಳ ನಡುವಿನ ಅಣು ಒಪ್ಪಂದದ ಪ್ರಯತ್ನ ಇದೇ ಮೊದಲೇನಲ್ಲ. ಈ ಹಿಂದೆಯೂ ಆಗಿತ್ತು. ಆದರೆ ಆಗ ಆ ಒಪ್ಪಂದವನ್ನು ಮುರಿದದ್ದು ಯಾರು? ಏಕೆ?

ತಾರಾಪುರ ಪರಮಾಣು ವಿದ್ಯುತ್ ಸ್ಥಾವರ



ಭಾರತಕ್ಕೆ ಅಮೆರಿಕಾದ ವಿಶ್ವಾಸ ಘಾತುಕತನ

ಭಾರತ - ಅಮೆರಿಕಾ ನಡುವಿನ ಪ್ರಥಮ ಪರಮಾಣು ಸಹಕಾರ ಒಪ್ಪಂದ

ಜಯ

ಭಾರತ-ಅಮೇರಿಕಾ ರಾಷ್ಟ್ರಗಳು 1963ರ ಆಗಸ್ಟ್ 8ರಂದು ನಾಗರೀಕ ಪರಮಾಣು ಸಹಕಾರ ಒಪ್ಪಂದಕ್ಕೆ ಪ್ರಥಮ ಬಾರಿಗೆ ಸಹಿ ಹಾಕಿದವು. ಇದರಂತೆ ಭಾರತಕ್ಕೆ ಅಮೇರಿಕಾ ಎರಡು ಪರಮಾಣು ವಿದ್ಯುತ್ ಸ್ಥಾವರಗಳನ್ನು ನೀಡುವ ಒಪ್ಪಂದವಾಯಿತು. ಮಹಾರಾಷ್ಟ್ರದ ತಾರಾಪುರ ಬಳಿಯಿರುವ ಅಕ್ಕರಪಟ್ಟಿ ಎಂಬ ಸ್ಥಳದಲ್ಲಿ 200 ಮೆಗಾವ್ಯಾಟ್ ಸಾಮರ್ಥ್ಯದ ಎರಡು (ಒಟ್ಟು ನಾಲ್ಕು ನೂರು ಮೆಗಾವ್ಯಾಟ್ ಸಾಮರ್ಥ್ಯ) ಪರಮಾಣು ವಿದ್ಯುತ್ ಸ್ಥಾವರಗಳನ್ನು ಅಮೇರಿಕಾದ ಬಹುರಾಷ್ಟ್ರೀಯ ಕಂಪನಿಗಳಾದ ಬೆಚ್‌ಟೆಲ್ ಮತ್ತು ಜನರಲ್ ಎಲೆಕ್ಟ್ರಿಕ್ ಕಂಪನಿಗಳು 1963ರಲ್ಲಿ ನಿರ್ಮಿಸಿಕೊಟ್ಟವು. ಇದಕ್ಕೆ ಪ್ರತಿಯಾಗಿ ಭಾರತವು ಅಮೇರಿಕಾ ನೀಡುವ ಯುರೇನಿಯಂನ್ನು ಮಾತ್ರವೇ ಉಪಯೋಗಿಸುವ ಷರತ್ತಿಗೊಳಗಾಯಿತು. ಹಾಗೂ ಈ ಅಣು ಸ್ಥಾವರಗಳನ್ನು ಅಂತರಾಷ್ಟ್ರೀಯ ಅಣು ಶಕ್ತಿ ಏಜೆನ್ಸಿಯ ತಪಾಸಣೆಗೆ ಒಳಪಡಿಸಬೇಕಾಯಿತು. ಆದರೆ ಭಾರತ ತನ್ನ ಇತರೆ ಪರಮಾಣು ಸ್ಥಾವರಗಳನ್ನು ಈ ಏಜೆನ್ಸಿಯ ತಪಾಸಣೆಗೆ ಒಳಪಡಿಸುವ ಅಗತ್ಯವಿರಲಿಲ್ಲ. ಈ ಏಜೆನ್ಸಿಯ ತಪಾಸಣೆಯು ಮೂಲದಲ್ಲಿ ಭಾರತ ಪರಮಾಣು ಇಂಧನವನ್ನು ಶಾಂತಿ ಮತ್ತು ನಾಗರೀಕ ಬಳಕೆಗಲ್ಲದೆ ಬೇರಾವುದೇ ಬಾಂಬು ತಯಾರಿಕೆಯಂಥಹ ಉಪಯೋಗಕ್ಕೆ ದುರ್ಬಳಕೆ ಮಾಡಿಕೊಳ್ಳುವುದಿಲ್ಲ ಎಂಬುದನ್ನು ಖಾತರಿ ಪಡಿಸಿಕೊಳ್ಳುವುದಾಗಿತ್ತು. ಮತ್ತೂ ಮುಂದುವರಿದು, ಈ ಅಣುಸ್ಥಾವರದಲ್ಲಿ ಉತ್ಪತ್ತಿಯಾಗುವ ಬಳಸಿದ ಇಂಧನವನ್ನು ಪುನರ್-ಸಂಸ್ಕರಣೆ ಮಾಡುವ ಸಂದರ್ಭದಲ್ಲಿ ಪ್ಲುಟೋನಿಯಂನ್ನು ಬೇರ್ಪಡಿಸಿ ಸಂಗ್ರಹಿಸಿಟ್ಟುಕೊಳ್ಳಲು ಅಮೇರಿಕಾದ ಒಪ್ಪಿಗೆ ಪಡೆಯುವ ಷರತ್ತು ಕೂಡ ಇತ್ತು. ಇದಕ್ಕಾಗಿ ಅಮೇರಿಕಾವು ಸುಮಾರು 80 ದಶಲಕ್ಷ ಡಾಲರ್ ಸಾಲವನ್ನು ಶೇ 0.75ರ ಬಡ್ಡಿದರದಲ್ಲಿ 40ವರ್ಷಗಳ ಅವಧಿಗೆ ಭಾರತಕ್ಕೆ ನೀಡಿತ್ತು. ಇದರಿಂದ ಅಮೇರಿಕಾದ ಪರಮಾಣು ತಂತ್ರಜ್ಞಾನ ಕೈಗಾರಿಕೆಗಳಿಗೆ ಮತ್ತು ಅಮೇರಿಕಾದ ಬೊಕ್ಕಸಕ್ಕೆ ದೊಡ್ಡ ಲಾಭವಾಗಿರುವುದು ಸ್ಪಷ್ಟ.

ಭಾರತದ ಪ್ರಥಮ ಅಣು ಪರೀಕ್ಷೆ:


ಭಾರತ 1974ರ ಮೇ ತಿಂಗಳಲ್ಲಿ ರಾಜಸ್ತಾನದ ಮರುಭೂಮಿಯಲ್ಲಿ ಪ್ರಥಮ ಅಣ್ವಸ್ತ್ರ ಪರೀಕ್ಷೆ ನಡೆಸಿತು. ಇದಕ್ಕೆ ತೀವ್ರವಾಗಿ ಪ್ರತಿಕ್ರಿಯಿಸಿದ ಕೆನಡಾ ತಾನು ಈ ಹಿಂದೆ ಭಾರತದೊಂದಿಗೆ ಮಾಡಿಕೊಂಡಿದ್ದ ಪರಮಾಣು ಸಹಕಾರ ಒಪ್ಪಂದವನ್ನು ರದ್ದುಗೊಳಿಸಿ ಎಲ್ಲ ಪರಮಾಣು ತಂತ್ರಜ್ಞಾನ ಮತ್ತು ಇಂಧನ ಪೂರೈಕೆಗಳನ್ನು ಸ್ಥಗಿತಗೊಳಿಸಿತು. ಪಾಕಿಸ್ತಾನ ಕೂಡ ತೀವ್ರವಾಗಿ ಪ್ರತಿಕ್ರಿಯಿಸಿತು.

ಆದರೆ ಭಾರತದ ಅಣ್ವಸ್ತ್ರ ಪರೀಕ್ಷೆಗೂ ಭಾರತ-ಅಮೇರಿಕಾ ಪರಮಾಣು ಸಹಕಾರ ಒಪ್ಪಂದಕ್ಕೂ ಯಾವುದೇ ಸಂಬಂಧವಿರಲಿಲ್ಲ. ಅದರಂತೆ ಅಣ್ವಸ್ತ್ರ ಪರೀಕ್ಷೆಯ ನಂತರವೂ ತಾನು ಭಾರತಕ್ಕೆ ಪರಮಾಣು ಇಂಧನವನ್ನು ಮುಂದುವರೆಸುವುದಾಗಿಯೂ ಅಮೇರಿಕಾ ಅದೇ ವರ್ಷದ ಜೂನ್ ತಿಂಗಳಲ್ಲಿ ಪ್ರಕಟಿಸಿತ್ತು. ಭಾರತ ನಡೆಸಿದ ಅಣ್ವಸ್ತ್ರ ಪರೀಕ್ಷೆಯು ಭಾರತ-ಅಮೇರಿಕಾ ನಾಗರೀಕ ಪರಮಾಣು ಸಹಕಾರ ಒಪ್ಪಂದದ ಉಲ್ಲಂಘನೆಯನ್ನೇನೂ ಮಾಡುವುದಿಲ್ಲವೆಂದು ಅಮೇರಿಕಾ ತಿಳಿಸಿತ್ತು. ಕಾಲಾ ನಂತರದಲ್ಲಿ ಕೆಲವರ್ಷ ಕಾಲ ತಾರಾಪುರ ಅಣು ವಿದ್ಯುತ್ ಸ್ಥಾವರಕ್ಕೆ ಅಗತ್ಯವಿರುವ ಇಂಧನ ಪೂರೈಕೆ ಮತ್ತು ಬಿಡಿಭಾಗಗಳನ್ನು ಅಮೇರಿಕಾ ಪೂರೈಸುತ್ತಾ ಬಂದಿತು.

ಅಮೇರಿಕಾದ ಪರಮಾಣು ಪ್ರಸರಣ-ನಿಷೇಧ ಕಾಯಿದೆಯ ಹೊಸ ರಾಗ:

ಪರಮಾಣು ತಂತ್ರಜ್ಞಾನವನ್ನು ಹೊಂದಿದ್ದ 5 ರಾಷ್ಟ್ರಗಳ (ಅಮೇರಿಕಾ, ರಷ್ಯಾ, ಫ್ರಾನ್ಸ್, ಚೀನಾ ಮತ್ತು ಬ್ರಿಟನ್) ಸಾಲಿಗೆ ಬೇರಾವುದೇ ರಾಷ್ಟ್ರವು ಸೇರದಂತೆ ಮಾಡಲು ಅಮೇರಿಕಾ ನಿರಂತರವಾಗಿ ಕೆಲಸ ಮಾಡುತ್ತಾ ಬಂದಿದೆ. ಅದೇನಿದ್ದರೂ ಅಂಥಹ ತಂತ್ರಜ್ಞಾನಕ್ಕಾಗಿ ವಿಶ್ವದ ಇತರೆ ರಾಷ್ಟ್ರಗಳು ಬಿಡಿ ಭಾಗಕ್ಕೂ ಕೂಡ ಸದಾ ತನ್ನ ಮೇಲೆ ಅವಲಂಬಿತವಾಗಿಯೇ ಇರಬೇಕೆಂಬುದು ಅದರ ಇಂಗಿತ. ಪರಮಾಣು ತಂತ್ರಜ್ಞಾನವನ್ನು ಅಂಥಹ ತಂತ್ರಜ್ಞಾನ ತಿಳಿದಿಲ್ಲದ ಬೇರೊಂದು ರಾಷ್ಟ್ರಕ್ಕೆ ನೀಡಬಾರದೆಂದು ತಾಕೀತು ಮಾಡುವ ಪರಮಾಣು ಪ್ರಸರಣ-ನಿಷೇಧ ಕಾಯಿದೆಯನ್ನು ಅಮೇರಿಕಾ 1978ರ ಮಾರ್ಚ್‌ನಲ್ಲಿ ತನ್ನ ದೇಶದಲ್ಲಿ ಜಾರಿಗೆ ತಂದಿತು. ಈ ಅಮೇರಿಕಾ ದೇಶದ ಆಂತರಿಕ ಕಾಯಿದೆಯ ಪ್ರಕಾರ ಯಾವ ರಾಷ್ಟ್ರ ತನ್ನೆಲ್ಲ ಪರಮಾಣು ಸ್ಥಾವರಗಳನ್ನು ಅಂತರಾಷ್ಟ್ರೀಯ





ಅಂದಿನ ಭಾರತ ಪ್ರಧಾನಿ ಮೊರಾರ್ಜಿ ದೇಸಾಯಿ
ಅಮೆರಿಕಾದ ಅಧ್ಯಕ್ಷ ಜಿಮ್ಮಿ ಕಾರ್ಟರ್

ಅಣುಶಕ್ತಿ ಏಜೆನ್ಸಿಯ ತಪಾಸಣೆಗೆ ಒಳಪಡಿಸುವುದೋ ಅಂಥಹ ರಾಷ್ಟ್ರಗಳಿಗೆ ಮಾತ್ರವೇ ಅಮೇರಿಕಾ ಪರಮಾಣು ತಂತ್ರಜ್ಞಾನವನ್ನು ನೀಡುವ ಕಟಿಬದ್ದತೆಗೆ ಒಳಗಾಗಬೇಕಾಯಿತು. ಯುರೇನಿಯಂ ಇಂಧನವೂ ಸೇರಿದಂತೆ ಯಾವೊಂದು ಪರಮಾಣು ತಂತ್ರಜ್ಞಾನದ ಸಾಮುಗ್ರಿಗಳನ್ನು ಅದು ಅಂಥಹ ರಾಷ್ಟ್ರಗಳಿಗೆ ಮಾತ್ರವೇ ರಫ್ತು ಮಾಡಬೇಕಾಯಿತು.

ಅಮೇರಿಕಾದ ಆಂತರಿಕ ಕಾಯಿದೆಯ ಗಮ್ಮತ್ತು:

ಭಾರತ-ಅಮೇರಿಕಾ ನಡುವಿನ 1963 ಮತ್ತು ನಂತರದ 1966ರ ಪರಮಾಣು ಸಹಕಾರ ಒಪ್ಪಂದವು 1978ರ ಅಮೇರಿಕಾದ ಪರಮಾಣು ಪ್ರಸರಣ-ನಿಷೇಧ ಕಾಯಿದೆಗಿಂತಲೂ ಮೊದಲೇ ಜಾರಿಗೆ ಬಂದಿದ್ದರೂ, ಅಲ್ಲದೆ ಅಮೇರಿಕಾದ ಪರಮಾಣು ಪ್ರಸರಣ-ನಿಷೇಧ ಕಾಯಿದೆಯು ಅದರ ಆಂತರಿಕ ಕಾಯಿದೆಯಾಗಿದ್ದರೂ, ಅಮೇರಿಕಾ ತಾನು ಭಾರತದ ತಾರಾಪುರ ಪರಮಾಣು ಸ್ಥಾವರಕ್ಕೆ ನೀಡುತ್ತಿದ್ದ ಪರಮಾಣು ಸಾಮಗ್ರಿ



ಪೂರೈಕೆಯನ್ನು ನೀಡುವಲ್ಲಿ ಸತಾಯಿಸಲಾರಂಭಿಸಿತು. ಪರಮಾಣು ಸಾಮಗ್ರಿ ಪೂರೈಕೆಯನ್ನು ಅಮೇರಿಕಾ ವಿಳಂಬ ಮಾಡುತ್ತಿರುವುದರ ಹಿಂದೆ ಭಾರತವು ಜಾಗತಿಕ ಪರಮಾಣು ಪ್ರಸರಣ-ನಿಷೇಧ ಒಪ್ಪಂದಕ್ಕೆ ಸಹಿ ಹಾಕುವಂತೆ ಮಾಡುವ ಕುತಂತ್ರ ಇರುವುದನ್ನು, ಮತ್ತು ಭಾರತವು ತನ್ನೆಲ್ಲ ಪರಮಾಣು ಸ್ಥಾವರಗಳನ್ನು ಅಂತರಾಷ್ಟ್ರೀಯ ಅಣುಶಕ್ತಿ ಏಜೆನ್ಸಿಯ ತಪಾಸಣೆಗೆ ಒಳಪಡಿಸುವಂತೆ ಮಾಡುವ ಒತ್ತಡದ ತಂತ್ರವಿದೆಂದು ಭಾರತದ ಸಂಸತ್ತಿನ ಸದಸ್ಯರು ಅಂದೇ ಸ್ಪಷ್ಟವಾಗಿ ಗುರುತಿಸಿದ್ದರು. 1978ರ ಏಪ್ರಿಲ್‌ನಲ್ಲಿ ಅಮೇರಿಕಾದ ಪರಮಾಣು ನಿಯಂತ್ರಣ ಆಯೋಗವು ಭಾರತದ ತಾರಾಪುರಕ್ಕೆ ಪೂರೈಕೆಯಾಗುತ್ತಿದ್ದ ಸಾಮಗ್ರಿಗಳನ್ನು ತುಂಬಿದ್ದ ಹಡಗನ್ನು ತಡೆಹಿಡಿಯಿತು. ಈ ಮಧ್ಯೆ, ಅಂದಿನ ಅಮೇರಿಕಾದ ಅಧ್ಯಕ್ಷ ಜಿಮ್ಮಿ ಕಾರ್ಟರ್‌ರವರು ಭಾರತವು ಜಾಗತಿಕ ಪರಮಾಣು ಪ್ರಸರಣ-ನಿಷೇಧ ಒಪ್ಪಂದಕ್ಕೆ 1980ರ ಹೊತ್ತಿಗೆ ಸಹಿ ಮಾಡುವಲ್ಲಿ ಯಶಸ್ವಿಯಾಗುತ್ತೇನೆಂದು ಅಮೇರಿಕಾದ ಸಂಸತ್ತಿಗೆ ವಾಗ್ದಾನ ನೀಡಿ ಪರಮಾಣು ಸಾಮಗ್ರಿ ಪೂರೈಕೆಯನ್ನು ಒಂದಷ್ಟು ಮಟ್ಟಿಗೆ ಚಾಲನೆಗೊಳಿಸಿದರು. ಅಂದಿನ ಭಾರತದ ಪ್ರಧಾನಿ ಮೊರಾರ್ಜಿ ದೇಸಾಯಿ ಯವರೊಂದಿಗೆ ಅತೀವ ಸ್ನೇಹದ ನಡೆಗಳನ್ನೂ ಕೂಡ ಕಾರ್ಟರ್ ನಡೆಸಿದ್ದರು. (ಭಾರತದ ವಿದೇಶಾಂಗ ನೀತಿಯು ಅಮೇರಿಕಾದ ವಿದೇಶಾಂಗ ನೀತಿಗೆ ಅನುರೂಪವಾಗಿರುತ್ತದೆಂದು ಇಂದಿನ ಅಧ್ಯಕ್ಷ ಬುಷ್ ಕೂಡ ಅಂಥಹುದೇ ವಾಗ್ದಾನವನ್ನು ತನ್ನ ಸಂಸತ್ತಿಗೆ ನೀಡಿರುವುದನ್ನು ಇಲ್ಲಿ ಸ್ಮರಿಸಬಹುದು).

ಆದರೆ ಅಮೇರಿಕಾ ಎಷ್ಟೇ ಪ್ರಯತ್ನಿಸಿದರೂ ಭಾರತವು ಜಾಗತಿಕ ಪರಮಾಣು ಪ್ರಸರಣ-ನಿಷೇಧ ಒಪ್ಪಂದಕ್ಕೆ ಸಹಿ ಹಾಕುವುದಿಲ್ಲವೆಂದು ಅರಿತ ಅಮೇರಿಕಾ, ಅಂತಿಮವಾಗಿ ಎಲ್ಲ ರೀತಿಯ ಪರಮಾಣು ಸಾಮಗ್ರಿ ಪೂರೈಕೆಯನ್ನು ಭಾರತಕ್ಕೆ ಸ್ಥಗಿತಗೊಳಿಸಿ ದಿಗ್ಬಂಧನ ವಿಧಿಸಿತು. ಅಂತರಾಷ್ಟ್ರೀಯ ಮಟ್ಟದಲ್ಲಿ ಭಾರತವನ್ನು ಮೂಲೆಗುಂಪು ಮಾಡಲು ಯತ್ನಿಸಲಾಯಿತು. ಅಮೇರಿಕಾ ತಾನು ಭಾರತದೊಂದಿಗೆ ಮಾಡಿಕೊಂಡಿದ್ದ 30ವರ್ಷಗಳ ಕಾಲದ ಒಪ್ಪಂದವನ್ನು ತನ್ನ ಆಂತರಿಕ ಕಾಯಿದೆಯ ಕಟಿಬದ್ಧತೆಯಿಂದಾಗಿ 10ವರ್ಷ ಮುಂಚೆಯೇ ಅಂದರೆ 1983ರಲ್ಲಿ ಸಾರಾಸಗಟಾಗಿ ಮುರಿದು ಹಾಕಿತು. ಅಮೇರಿಕಾದ ಬಲವಂತ ಹೇರಿಕೆಗೆ ಮಣಿಯದ ಭಾರತದ ನಿಲುಮೆಗೆ ತಕ್ಕುದಾಗಿ ಭಾರತೀಯ ವಿಜ್ಞಾನಿಗಳು ನಮ್ಮ ಪರಮಾಣು ತಂತ್ರಜ್ಞಾನವನ್ನು ಮತ್ತಷ್ಟು ಅಭಿವೃದ್ಧಿ ಪಡಿಸಿದರೆನ್ನುವುದು ಬೇರೆಯದೇ ಮಾತು.

ಭಾರತವನ್ನು ಕಾಡುವ ಅಮೇರಿಕಾದ ಆಂತರಿಕ ಕಾಯಿದೆಯ ದುಸ್ವಪ್ನ:

ಅಂತರಾಷ್ಟ್ರೀಯ ಅಣು ಶಕ್ತಿ ಏಜೆನ್ಸಿಯ ತಪಾಸಣೆಗೆ ತಾರಾಪುರ ಪರಮಾಣು ಸ್ಥಾವರವನ್ನು ಒಡ್ಡಿದ್ದರೂ ಕೂಡ ಅಮೇರಿಕಾ ತಾನು ತಾರಾಪುರ ಅಣು ಸ್ಥಾವರಕ್ಕೆ 30ವರ್ಷಗಳ ಕಾಲ ಇಂಧನ ಪೂರೈಸುವ ಒಪ್ಪಂದಕ್ಕೆ ಅರ್ಧದಲ್ಲೇ ಎಳ್ಳು ನೀರು ಬಿಟ್ಟಿತು. ಇದಲ್ಲದೆ ಈ ಅಣುಸ್ಥಾವರಕ್ಕೆ ಅಗತ್ಯವಿದ್ದ ಬಿಡಿಭಾಗಗಳು ಮತ್ತು ನಿರ್ವಹಣೆಗೆ ಅತ್ಯಗತ್ಯವಿದ್ದ ತಂತ್ರಜ್ಞಾನಗಳನ್ನು ಕೊಡದೆ ಭಾರತವನ್ನು ಸತಾಯಿಸಿ ಸಂಕಷ್ಟಕ್ಕೆ ದೂಡಿತು. ಆಗ ನಮ್ಮ ನೆರವಿಗೆ ಬಂದು ಪರಮಾಣು ಇಂಧನ ಪೂರೈಸಿ ತಾರಾಪುರ ಅಣು ಸ್ಥಾವರ ಕಾರ್ಯನಿರತವಾಗುವಂತೆ ಸಹಾಯ ಮಾಡಿದ್ದೇ ರಷ್ಯಾ.

ಭಾರತದ ತಾರಾಪುರ ಅಣು ಸ್ಥಾವರಕ್ಕೆ 60ಟನ್‌ನಷ್ಟು ಪರಮಾಣು ಇಂಧನ ಪೂರೈಸಲು ರಷ್ಯಾ ಮುಂದೆ ಬಂದಿತ್ತು. ಭಾರತ-ಅಮೇರಿಕಾ ಪರಮಾಣು ಒಪ್ಪಂದಕ್ಕೆ ಸಹಿ ಹಾಕದ ಹೊರತು ಭಾರತಕ್ಕೆ ಯಾವೊಂದು ದೇಶವೂ ಇಂಧನ ಪೂರೈಸಲು ತಾನು ಅವಕಾಶ ನೀಡುವುದಿಲ್ಲವೆಂದು 2006ರ ಮಾರ್ಚ್‌ನಲ್ಲೂ ಕೂಡ ಅಮೇರಿಕಾ ಘಂಟಾಘೋಷವಾಗಿ ತಿಳಿಸಿದೆ. ಇದರಿಂದಾಗಿ ಇಂಧನ ಕೊರತೆಯುಂಟಾಗಿ 400 ಮೆಗಾವ್ಯಾಟ್ ಸಾಮರ್ಥ್ಯದ ಸ್ಥಾವರಗಳಲ್ಲಿ ಕೇವಲ 320 ಮೆಗಾವ್ಯಾಟ್ ವಿದ್ಯುತ್‌ನ್ನು ಉತ್ಪಾದಿಸಲಾಗುತ್ತಿದೆ.

ಅಮೇರಿಕಾದ ಸಂಸತ್ತು ಅಂಗೀಕರಿಸುವ ಹೆನ್ರಿ ಹೈಡ್ ಕಾಯಿದೆಯು ಅಮೇರಿಕಾ ದೇಶದ ಆಂತರಿಕ ಕಾಯಿದೆಯಾಗಿದ್ದು ಅದರಿಂದ ಭಾರತ-ಅಮೇರಿಕಾ ನಡುವಿನ 123 ಒಪ್ಪಂದಕ್ಕೆ ಯಾವುದೇ ರೀತಿಯ ಬಾಧ್ಯತೆ ಇಲ್ಲವೆಂದು ಕಾಂಗ್ರೆಸ್ ವಾದ ಮಾಡುತ್ತಿದೆ. ಆದರೆ ತಾರಾಪುರ ಅಣು ಸ್ಥಾವರ ವಿಷಯದಲ್ಲಿ ಈಗಾಗಲೇ ಅಮೇರಿಕಾ ನಡೆದುಕೊಂಡಿರುವ ಧೋರಣೆಗಿಂತ ನಮ್ಮ ಕಾಂಗ್ರೆಸ್ ನಾಯಕರಿಗೆ ಮತ್ತೊಂದು ದೊಡ್ಡ ಪಾಠದ ಅಗತ್ಯವಿದೆಯೇ?

ರಾಜ್ಯಪಾಲ ರಾಮೇಶ್ವರ ಠಾಕೂರ್ ಆಡಳಿತ ಸೂತ್ರವನ್ನು ವಹಿಸಿಕೊಳ್ಳುವ ಮೂಲಕ ಕರ್ನಾಟಕಕ್ಕೆ ನವದೆಹಲಿ ಆಡಳಿತ ಪ್ರಾಪ್ತವಾಗಿದೆ. ಹೆಚ್.ಡಿ.ಕುಮಾರಸ್ವಾಮಿ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡುತ್ತಿದ್ದಂತೆ ರಾಜ್ಯಪಾಲರು ರಾಷ್ಟ್ರಪತಿ ಆಳ್ವಿಕೆಗೆ ಶಿಫಾರಸ್ಸು ಮಾಡಿದ್ದರು. ರಾಜ್ಯಪಾಲರ ಶಿಫಾರಸನ್ನು ಪ್ರಧಾನಿ ಡಾ: ಮನಮೋಹನ್ ಸಿಂಗ್ ಅವರ ಅಧ್ಯಕ್ಷತೆಯಲ್ಲಿ ಸೇರಿದ ಕೇಂದ್ರ ಸಚಿವ ಸಂಪುಟ ಸಭೆ ಅಂಗೀಕರಿಸಿ, ಕರ್ನಾಟಕ ವಿಧಾನ ಸಭೆಯನ್ನು ಅಮಾನತ್ತಿನಲ್ಲಿಟ್ಟು ರಾಷ್ಟ್ರಪತಿ ಆಳ್ವಿಕೆ ಜಾರಿ ಮಾಡಲು ತೀರ್ಮಾನಿಸಿತು. ಕೇಂದ್ರ ಸಚಿವ ಸಂಪುಟದ ಈ ತೀರ್ಮಾನಕ್ಕೆ ರಾಷ್ಟ್ರಪತಿ ಪ್ರತಿಭಾ ಪಾಟೀಲ್ ಅಂಕಿತ ಹಾಕುವುದರೊಂದಿಗೆ ಕರ್ನಾಟಕ ಮತ್ತೆ 5ನೇ ಬಾರಿಗೆ ರಾಷ್ಟ್ರಪತಿ ಆಳ್ವಿಕೆಗೆ ಒಳಪಡುವಂತಾಯಿತು. ರಾಜ್ಯದಲ್ಲಿ ರಾಷ್ಟ್ರಪತಿ ಆಳ್ವಿಕೆಯನ್ನು ಜಾರಿಗೆ ತರುವ ಮೂಲಕ ಕೇಂದ್ರ ಸರ್ಕಾರವು ರಾಜ್ಯದ ರಾಜಕೀಯವನ್ನು ತನ್ನ ಕೈಯಲ್ಲಿ ಭದ್ರಪಡಿಸಿಕೊಂಡಿದೆ ಎಂಬ ಚರ್ಚೆಗಳು ಕೇಳಿ ಬರುತ್ತಿದ್ದರೂ ಬೊಮ್ಮಾಯಿ ಪ್ರಕರಣದಲ್ಲಿ ಸುಪ್ರೀಂಕೋರ್ಟ್ ನೀಡಿರುವ ತೀರ್ಪಿನ ಎದುರು ಕೇಂದ್ರ ಸಚಿವ ಸಂಪುಟಕ್ಕೆ ಬೇರೆ ಆಯ್ಕೆ ಇರಲಿಲ್ಲ.

- ಇದು ಐದನೇ ಬಾರಿ
- ಕುದುರೆ ವ್ಯಾಪಾರದ ಆತಂಕ
- ಕೋಮುವಾದಿಗಳನ್ನು ನಿಯಂತ್ರಿಸುವ ಗುರುತರ ಹೊಣೆ

ಜೆಡಿ(ಎಸ್) - ಬಿಜೆಪಿಗಳ ಅವಕಾಶವಾದಿ ಮೈತ್ರಿಕೂಟ ಪತನದ ಹಿನ್ನೆಲೆಯಲ್ಲಿ ಕರ್ನಾಟಕಕ್ಕೆ ರಾಷ್ಟ್ರಪತಿ ಆಡಳಿತ ಅನಿವಾರ್ಯವಾಯಿತೇ?



ಕರ್ನಾಟಕಕ್ಕೆ ದೆಹಲಿ ಆಡಳಿತ

ನಿತ್ಯಾನಂದಸ್ವಾಮಿ

ಬೊಮ್ಮಾಯಿ ಪ್ರಕರಣ

ದೂರವಾಣಿ ಕದ್ದಾಲಿಕೆ ಪ್ರಕರಣದಲ್ಲಿ ಅಂದು ರಾಜ್ಯದ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ ರಾಜೀನಾಮೆ ನೀಡಿದಾಗ ಆಗಸ್ಟ್ 12, 1988 ರಂದು ಜನತಾಪಕ್ಷದ ಶಾಸಕಾಂಗ ಪಕ್ಷದ ನಾಯಕರಾಗಿ ಆಯ್ಕೆಯಾದ ಎಸ್.ಆರ್. ಬೊಮ್ಮಾಯಿ ರಾಜ್ಯದ 11ನೇ ಮುಖ್ಯಮಂತ್ರಿಯಾಗಿ ಆಯ್ಕೆಯಾದರು. ಆದರೆ ಈ ಅವಧಿಯಲ್ಲಿ ರಾಜ್ಯ ಜನತಾಪಕ್ಷದಲ್ಲಿ ಭಿನ್ನಮತ ಉಲ್ಬಣಿಸಿತು. ಡಾ: ಜೀವರಾಜ ಆಳ್ವ ಬೊಮ್ಮಾಯಿ ವಿರುದ್ಧ ತಿರುಗಿ ಬಿದ್ದರು. ದೇವೇಗೌಡರು ಮಂತ್ರಿ ಮಂಡಲಕ್ಕೆ ರಾಜೀನಾಮೆ ನೀಡಿದರು. ದೇವೇಗೌಡರನ್ನು ಬೆಂಬಲಿಸಿ ಕೆಲವು ಸಚಿವರು ತಮ್ಮ ಸ್ಥಾನಗಳನ್ನು ತ್ಯಜಿಸಿದರು. ಭಿನ್ನಮತ ಪರಾಕಾಷ್ಠೆ ತಲುಪಿತು. ಆಗ ವೆಂಕಟಸುಬ್ಬಯ್ಯ ರಾಜ್ಯದಲ್ಲಿ ರಾಜ್ಯಪಾಲರಾಗಿದ್ದರು.



ಮಹತ್ವದ ತೀರ್ಪಿಗೆ ಹೋರಾಡಿದ ಎಸ್.ಆರ್.ಬೊಮ್ಮಾಯಿ

ಬೊಮ್ಮಾಯಿ ವಿಧಾನಸಭೆಯಲ್ಲಿ ಬಹುಮತ ಸಾಬೀತುಪಡಿಸುವುದಾಗಿ ಹೇಳಿದರು. ಈ ಮಧ್ಯೆ ಶಾಸಕರ ಕುದುರೆ ವ್ಯಾಪಾರ ಆರಂಭವಾಯಿತು. ಈ ಸಂದರ್ಭವನ್ನು ಬಳಸಿಕೊಂಡು ಕೇಂದ್ರದಲ್ಲಿದ್ದ ಕಾಂಗ್ರೆಸ್ ಸರ್ಕಾರ ರಾಜ್ಯಪಾಲರ ಶಿಫಾರಸ್ಸು ಪಡೆದು ಬೊಮ್ಮಾಯಿ ಸರ್ಕಾರವನ್ನು ವಜಾಮಾಡಿ ರಾಷ್ಟ್ರಪತಿ ಆಳ್ವಿಕೆಯನ್ನು ವಿಧಿಸಿತು. ಬೊಮ್ಮಾಯಿ ಅವರಿಗೆ ವಿಧಾನಸಭೆಯಲ್ಲಿ ಬಹುಮತ ಸಾಬೀತುಪಡಿಸಲು ಅವಕಾಶ ಸಿಗಲಿಲ್ಲ.

ಬೊಮ್ಮಾಯಿ ಅವರು ಕೇಂದ್ರದ ಈ ಕ್ರಮವನ್ನು ಸುಪ್ರಿಂಕೋರ್ಟ್‌ನಲ್ಲಿ ಪ್ರಶ್ನಿಸಿದರು. ಸುಪ್ರಿಂಕೋರ್ಟ್ 1994ರಲ್ಲಿ ಬೊಮ್ಮಾಯಿ ಸರ್ಕಾರವನ್ನು ವಜಾ ಮಾಡಿದ ಕ್ರಮ 'ಸಂವಿಧಾನ ಬಾಹಿರ' ಎಂದು ತೀರ್ಪು ನೀಡಿತು. ಅಂದಿನಿಂದ ರಾಜ್ಯ ಸರ್ಕಾರಗಳ ವಜಾ ವಿಚಾರದಲ್ಲಿ ಸುಪ್ರಿಂಕೋರ್ಟ್ ನೀಡಿರುವ ತೀರ್ಪನ್ನೇ ಉಲ್ಲೇಖಿಸುವಂತಾಯಿತು. ಮಾರ್ಚ್ 11 ರಂದು ಹೊರಬಿದ್ದ ಸುಪ್ರೀಂಕೋರ್ಟ್ ಆದೇಶದಲ್ಲಿ ಹೇಳಿರುವಂತೆ ಸಂವಿಧಾನದ 356ನೇ ವಿಧಿ ಪ್ರಕಾರ ರಾಷ್ಟ್ರಪತಿಗಳು ವಿಧಾನಸಭೆಯನ್ನು ಅಮಾನತ್ತಿನಲ್ಲಿ ಮಾತ್ರ ಇಡಬಹುದು. ಸಂಸತ್ತಿನ ಎರಡೂ ಸದನಗಳ ಒಪ್ಪಿಗೆ ಇಲ್ಲದೆ ವಿಧಾನಸಭೆಯನ್ನು ಯಾವುದೇ ಕಾರಣಕ್ಕೂ ವಿಸರ್ಜಿಸುವಂತಿಲ್ಲ. ಅಮಾನತು ಮಾಡಿದ ಎರಡು ತಿಂಗಳ ಒಳಗೆ ಸಂಸತ್ತು ರಾಷ್ಟ್ರಪತಿಯ ತೀರ್ಮಾನವನ್ನು ಅನುಮೋದಿಸದೆ ಹೋದರೆ ಮತ್ತೆ ವಿಧಾನಸಭೆ ಚಾಲ್ತಿಗೆ ಬರುತ್ತದೆ. ಒಂದು ವೇಳೆ ಸಂಸತ್ತಿನ ಅನುಮೋದನೆ ದೊರೆತರೆ, ಆಗ ರಾಷ್ಟ್ರಪತಿಗಳು ವಿಧಾನಸಭೆಯನ್ನು ವಿಸರ್ಜಿಸಬಹುದು.


ರಾಷ್ಟ್ರಪತಿ ಆಡಳಿತದ ತೀರ್ಮಾನಕ್ಕೆ ಸಂಸತ್ತಿನ ಅನುಮೋದನೆ ಪಡೆಯಲು ನಿಗದಿಯಾಗಿರುವ ಎರಡು ತಿಂಗಳ ಅವಧಿಯಲ್ಲಿ ಯಾವುದಾದರೂ ಪಕ್ಷ ಇಲ್ಲವೆ ಮೈತ್ರಿಕೂಟ ಹೊಸ ಸರ್ಕಾರ ರಚನೆಯ ಅಪೇಕ್ಷೆ ಮುಂದಿಟ್ಟರೆ ರಾಜ್ಯಪಾಲರು ಅದನ್ನು ಪರಿಶೀಲಿಸಬೇಕಾಗುತ್ತದೆ. ಇದರಿಂದಾಗಿ ರಾಜ್ಯದಲ್ಲಿ ಶಾಸಕರನ್ನು ಕೊಂಡುಕೊಳ್ಳುವ ಅನೈತಿಕ ಚಟುವಟಿಕೆಗಳಿಗೆ ಆಸ್ಪದ ಆಗುವ ಅಪಾಯ ಇದ್ದೇ ಇದೆ. ಇಂತಹ ಅನೈತಿಕ ಚಟುವಟಿಕೆಗಳನ್ನು ಗಣನೆಗೆ ತೆಗೆದುಕೊಂಡು ಯಾವುದೇ ಕ್ಷಣದಲ್ಲಿ ರಾಷ್ಟ್ರಪತಿಗಳು ವಿಧಾನಸಭೆಯನ್ನು ವಿಸರ್ಜಿಸುವ ಸಾಧ್ಯತೆ ಕೂಡಾ ಇದೆ. ಕಳೆದ ವರ್ಷ ರಾಷ್ಟ್ರಪತಿ ಆಡಳಿತಕ್ಕೆ ಸಂಸತ್ ಅನುಮೋದನೆ ನೀಡುವ ಮೊದಲೇ ಗೋವಾ ವಿಧಾನಸಭೆಯನ್ನು ವಿಸರ್ಜಿಸಿದನ್ನು ಇಲ್ಲಿ ಸ್ಮರಿಸಬಹುದು.

ರಾಜ್ಯಪಾಲರ ಆಡಳಿತ

ಅಧಿಕಾರ ಹಸ್ತಾಂತರದ ವಿವಾದ ಹಿನ್ನೆಲೆಯಲ್ಲಿ ಕಳೆದ ಐದಾರು ತಿಂಗಳುಗಳಲ್ಲಿ ರಾಜ್ಯದಲ್ಲಿ ಸರಿಯಾದ ಸರ್ಕಾರವೇ ಇರಲಿಲ್ಲ. ನೆರೆಹಾವಳಿಗೆ ತುತ್ತಾಗಿ ಸಂತ್ರಸ್ತರಾದ ಜನಗಳಿಗೆ ಇದುವರೆಗೂ ಪರಿಹಾರ, ಪುನರ್ವಸತಿ ವ್ಯವಸ್ಥೆಯಾಗಲಿಲ್ಲ. ಬಿಪಿಎಲ್ ರೇಷನ್ ಕಾರ್ಡ್ ವಿತರಣೆಯ ದೋಷಗಳನ್ನು ಸರಿಪಡಿಸುವುದಾಗಲಿ, ಬಡವರಿಗೆ ಅಗತ್ಯವಾದ ಆಹಾರ ಧಾನ್ಯಗಳನ್ನು ಒದಗಿಸುವ ವಿಷಯದಲ್ಲಾಗಲಿ ಸರ್ಕಾರ ಗಮನ ಕೊಡಲೇ ಇಲ್ಲ. ಸರ್ಕಾರದ ನಿರಾಸಕ್ತಿಯಿಂದ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಲಾಭ ನಮ್ಮ ಗ್ರಾಮೀಣ ಬಡವರಿಗೆ ಸಿಗದಂತಾಗಿದೆ. ಜನಹಿತ ಕಾಪಾಡುವ ಹೊಣೆಗಾರಿಕೆ ಈಗ ರಾಜ್ಯಪಾಲರ ಮೇಲೆ ಇದೆ. ಕೇವಲ ಅಧಿಕಾರಿಗಳನ್ನು ಅವಲಂಬಿಸಿ ಅವರು ಈ ಹೊಣೆಗಾರಿಕೆಯನ್ನು ಹೇಗೆ ನಿಭಾಯಿಸಬಹುದು ಎಂಬುದು ಆತಂಕದ ವಿಷಯ. ಈ ನಡುವೆ, ಈ ಅವಧಿಯಲ್ಲಿ ಪರ್ಯಾಯ ಸರ್ಕಾರ ರಚನೆಯ ಪ್ರಯತ್ನ ನಡೆಯಬಹುದು ಅಂತಹ ಸಂಧರ್ಭದಲ್ಲಿ ಸಂವಿಧಾನದ ಕಾವಲುಗಾರರಾಗಿ ಅವರು ಮಹತ್ವದ ಪಾತ್ರ ನಿರ್ವಹಿಸಬೇಕಾಗುತ್ತದೆ. ಅಧಿಕಾರದಿಂದ ವಂಚಿತರಾದ ಕೋಮುವಾದಿ ಶಕ್ತಿಗಳು ರಾಜ್ಯದಲ್ಲಿ ಅರಾಜಕತೆ ಉಂಟು ಮಾಡುವ ಅಪಾಯ ಇದ್ದೇ ಇದೆ. ಇಂತಹ ಪ್ರಯತ್ನಗಳನ್ನು ಕಠಿಣವಾದ ಕ್ರಮಗಳ ಮೂಲಕ ತಡೆಗಟ್ಟಬೇಕಾದುದು ರಾಜ್ಯಪಾಲರ ದೊಡ್ಡ ಜವಾಬ್ದಾರಿಯಾಗಿದೆ.

ರಾಷ್ಟ್ರಪತಿ ಆಳ್ವಿಕೆ ಅನಿವಾರ್ಯವಾಗಿತ್ತೆ?

ರಾಜ್ಯದಲ್ಲಿ ರಾಷ್ಟ್ರಪತಿ ಆಳ್ವಿಕೆ ಜಾರಿಯಾಗುತ್ತಿರುವುದು ಇದೇ ಮೊದಲಲ್ಲ. 1971ರಲ್ಲಿ ವೀರೇಂದ್ರ ಪಾಟೀಲ್ ಮುಖ್ಯಮಂತ್ರಿ ಯಾಗಿದ್ದಾಗ ಸುಮಾರು ಒಂದು ವರ್ಷದ ಅವಧಿಗೆ ರಾಜ್ಯವು ಕೇಂದ್ರದ ಆಡಳಿತಕ್ಕೆ ಒಳಪಟ್ಟಿತ್ತು. ಆಗ ರಾಜ್ಯದಲ್ಲಿ ಸಂಸ್ಥಾ ಕಾಂಗ್ರೆಸ್ ಅಧಿಕಾರದಲ್ಲಿದ್ದು ಲೋಕಸಭಾ ಚುನಾವಣೆಯಲ್ಲಿ ಎಲ್ಲಾ ಸ್ಥಾನಗಳಲ್ಲಿ ಸೋತದ್ದನ್ನು ನೆಪಮಾಡಿಕೊಂಡು ಸರ್ಕಾರವನ್ನು ವಜಾ ಮಾಡಲಾಗಿತ್ತು. 2ನೇ ಬಾರಿ ದೇವರಾಜ ಅರಸು ಮುಖ್ಯಮಂತ್ರಿಯಾಗಿದ್ದಾಗ, ಲೋಕಸಭಾ ಚುನಾವಣೆಯ ನಂತರ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ಜನತಾ ಪಕ್ಷದ ಸರ್ಕಾರ, ಅರಸು ಸರ್ಕಾರವನ್ನು ವಜಾಗೊಳಿಸಿ ರಾಷ್ಟ್ರಪತಿ ಆಳ್ವಿಕೆಯನ್ನು ಜಾರಿಗೆ ತಂದಿತು. ಮೂರನೇ ಬಾರಿ ಎಸ್.ಆರ್. ಬೊಮ್ಮಾಯಿ ನೇತೃತ್ವದ ಜನತಾದಳ ಸರ್ಕಾರ ಬಹುಮತ ಕಳೆದುಕೊಂಡು ವಜಾಗೊಂಡಿತು. ನಾಲ್ಕನೇ ಬಾರಿ ಮತ್ತೆ ವೀರೇಂದ್ರಪಾಟೀಲ್ ಮುಖ್ಯಮಂತ್ರಿಯಾಗಿದ್ದಾಗ ಕಾಂಗ್ರೆಸ್ಸಿನ ಆಂತರಿಕ ಸಮಸ್ಯೆಯಿಂದ 10.10.1990 ರಿಂದ ಕೇವಲ 7 ದಿನಗಳ ಕಾಲ ರಾಷ್ಟ್ರಪತಿ ಆಳ್ವಿಕೆ ಜಾರಿಯಾಗಿತ್ತು. ಈಗ ಸುಮಾರು 17 ವರ್ಷಗಳ ನಂತರ ರಾಜ್ಯವು ರಾಷ್ಟ್ರಪತಿ ಆಳ್ವಿಕೆಗೆ ಒಳಪಟ್ಟಿದೆ.



ಕರ್ನಾಟಕ ರಾಜ್ಯಪಾಲ

ಬೊಮ್ಮಾಯಿ ಪ್ರಕರಣದಲ್ಲಿ ಸುಪ್ರೀಂಕೋರ್ಟ್ ಸ್ಪಷ್ಟ ಆದೇಶ ನೀಡಿದ್ದು ಸರ್ಕಾರಕ್ಕೆ ಬಹುಮತ ಇದೆಯೋ ಇಲ್ಲವೇ ಎಂಬುದು ವಿಧಾನಸಭೆಯಲ್ಲಿ ಮಾತ್ರ ತೀರ್ಮಾನವಾಗಬೇಕು. ಒಂದು ವೇಳೆ ಸರ್ಕಾರಕ್ಕೆ ಬಹುಮತ ನಷ್ಟವಾದರೆ, ಸ್ಥಿರ ಸರ್ಕಾರ ರಚನೆಯ ಎಲ್ಲ ಸಾಧ್ಯತೆಗಳನ್ನು ರಾಜ್ಯಪಾಲರು ಪರಿಶೀಲಿಸಬೇಕು. ಸರ್ಕಾರವನ್ನು ರಚಿಸುವ ಸಾಧ್ಯತೆಗಳು ಇಲ್ಲವೇ ಇಲ್ಲ ಎಂದಾದಾಗ ವಿಧಾನಸಭೆಯನ್ನು ವಿಸರ್ಜಿಸಲು ಶಿಫಾರಸ್ಸು ಮಾಡಬಹುದು. ಆದರೆ ಅದಕ್ಕೂ ಮೊದಲು ವಿಧಾನಸಭೆ ವಿಸರ್ಜನೆಗೆ ಸಂಸತ್ತಿನ ಅಂಗೀಕಾರಬೇಕು.

ರಾಜ್ಯಪಾಲ ರಾಮೇಶ್ವರ ಠಾಕೂರ್ ಅವರು ಸರ್ಕಾರ ರಚಿಸುವಂತೆ ಯಾವುದೇ ರಾಜಕೀಯ ಪಕ್ಷಕ್ಕೆ ಆಹ್ವಾನ ನೀಡದೇ ನೇರವಾಗಿ ವಿಧಾನಸಭೆ ವಿಸರ್ಜಿಸಿ ರಾಷ್ಟ್ರಪತಿ ಆಡಳಿತ ಜಾರಿ ಮಾಡುವಂತೆ ಶಿಫಾರಸ್ಸು ಮಾಡಿದ್ದು ಎಷ್ಟರ ಮಟ್ಟಿಗೆ ಸರಿ ಎಂಬ ಜಿಜ್ಞಾಸೆಯೂ ವ್ಯಕ್ತವಾಗುತ್ತಿದೆ. ಇಂದಿನ ರಾಜಕೀಯ ಅಸ್ಥಿರತೆಗೆ ಕಾರಣವಾದ ಕಾಂಗ್ರೆಸ್, ಬಿಜೆಪಿ ಮತ್ತು ಜೆಡಿ(ಎಸ್) ಪಕ್ಷಗಳ ಸ್ವಾರ್ಥ ರಾಜಕೀಯವೇ ರಾಷ್ಟ್ರಪತಿ ಆಳ್ವಿಕೆ ಹೇರಿಕೆಗೆ ಕಾರಣವಾಗಿದೆ. ಮೂರು ಪಕ್ಷಗಳ ಪೈಕಿ ಅತಿ ದೊಡ್ಡ ಪಕ್ಷವಾಗಿರುವ ಬಿಜೆಪಿ ಕುಮಾರಸ್ವಾಮಿ ಸರ್ಕಾರಕ್ಕೆ ನೀಡಿರುವ ಬೆಂಬಲವನ್ನು ಹಿಂದಕ್ಕೆ ಪಡೆದ ಪತ್ರವನ್ನು ರಾಜ್ಯಪಾಲರಿಗೆ ನೀಡಿತು. ಆದರೆ ಅದು ಸರ್ಕಾರ ರಚಿಸಲು ತನ್ನ ಹಕ್ಕನ್ನು ಪ್ರತಿಪಾದಿಸಲಿಲ್ಲ. ಇದೊಂದು ಆಕಸ್ಮಿಕವಾಗಿರಲು ಸಾಧ್ಯವಿಲ್ಲ. ಇದರ ಹಿಂದೆ ಬಿಜೆಪಿಯ ಕೇಂದ್ರೀಯ ನಾಯಕತ್ವದ ಪಾತ್ರವನ್ನು ಅಲ್ಲಗಳೆಯುವಂತಿಲ್ಲ.

ಕಾಂಗ್ರೆಸ್ ಪಕ್ಷವೂ ಸಹ ಸರ್ಕಾರ ರಚಿಸುವ ಸೂಚನೆಯನ್ನು ರಾಜ್ಯಪಾಲರ ಮುಂದೆ ತರಲಿಲ್ಲ. ಬದಲಾಗಿ ಬಹುಮತ ಕಳೆದುಕೊಂಡಿರುವ ಕುಮಾರಸ್ವಾಮಿ ಸರ್ಕಾರವನ್ನು ತಕ್ಷಣವೇ ವಜಾ ಮಾಡುವಂತೆ ಕಾಂಗ್ರೆಸ್ ಪಕ್ಷ ರಾಜ್ಯಪಾಲರನ್ನು ಒತ್ತಾಯಿಸಿತು. ಕುಮಾರಸ್ವಾಮಿ ರಾಜ್ಯಪಾಲರ ಸೂಚನೆ ಮೇರೆಗೆ ರಾಜೀನಾಮೆ ನೀಡಿದರು. ಈ ಹಿನ್ನೆಲೆಯಲ್ಲಿ ರಾಜ್ಯಪಾಲರಿಗೆ ರಾಷ್ಟ್ರಪತಿ ಆಳ್ವಿಕೆಗೆ ಶಿಫಾರಸ್ಸು ಮಾಡುವುದು ಬಿಟ್ಟರೆ ಅನ್ಯ ಮಾರ್ಗವಿರಲಿಲ್ಲ ಎಂದೇ ಹೇಳಬೇಕಾಗುತ್ತದೆ. *

ಬಾಬಾಬುಡನ್ ಗಿರಿಗೆ ಚಿಡ್ಡಿಪಡೆ ಧಾಳಿ, ಹೊತ್ತಿ ಉರಿದ ಚಿಕ್ಕಮಗಳೂರು



ಜನತಾದಳದ ಸೆಕ್ಯುಲರ್ ಸಂದಿಗ್ಧಗಳು

ಜಿ.ಎನ್.ನಾಗರಾಜ್

ಜನತಾದಳ ಮೂಲದಲ್ಲಿ ಜನತಾಪಕ್ಷದ ವಿಭಜನೆಯಿಂದ ಉದ್ಭವಿಸಿದ ಭಾಗ. ಜನತಾಪಕ್ಷವೆಂಬುದು ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಸರ್ವಾಧಿಕಾರಿ ಧೋರಣೆಯ ಕಾಂಗ್ರೆಸ್ ಪಕ್ಷವನ್ನು ಎದುರಿಸಲು ನಾಲ್ಕು ಪಕ್ಷಗಳು ವಿಲೀನಗೊಂಡು ರಚಿಸಿದ ಪಕ್ಷ. ಕಾಂಗ್ರೆಸ್ ಪಕ್ಷದ 1967ರ ವಿಭಜನೆಯಿಂದ ಉದ್ಭವಿಸಿದ ಕಾಂಗ್ರೆಸ್, ಅಥವಾ ಸಂಸ್ಥಾ ಕಾಂಗ್ರೆಸ್, ಸಮಾಜವಾದಿ ಪಕ್ಷ, ಲೋಕದಳ (ಚರಣಸಿಂಗ್‌ರವರ ನಾಯಕತ್ವದಲ್ಲಿದ್ದ ಪಕ್ಷ) ಮತ್ತು ಜನ ಸಂಘಗಳು ಹೀಗೆ ವಿಲೀನಗೊಂಡ ಪಕ್ಷಗಳು. ಸ್ವಾತಂತ್ರ್ಯಪೂರ್ವದಿಂದಲೂ ಕೋಮುವಾದವನ್ನು ಹಬ್ಬಿಸಲು ಪ್ರಯತ್ನಿಸುತ್ತಿದ್ದ, ನಮ್ಮ ದೇಶದಲ್ಲಿ ನಡೆದ ಎಲ್ಲಾ ಕೋಮುದಂಗೆಗಳ ಹತ್ಯೆಗಳ ಕಾರಣಕರ್ತೃ ಆರೆಸ್ಸೆಸ್‌ನ ಅಂದಿನ ರಾಜಕೀಯ ಮುಖವಾಡವೇ ಜನಸಂಘ. ಇಂತಹ ಜನ ಸಂಘದ ಜೊತೆ ಸೇರಲು, ಜನತಾ ಪಕ್ಷವನ್ನು ರೂಪಿಸಲು ಪ್ರಯತ್ನಿಸಿದ ಮತ್ತು ಅದರಲ್ಲಿ ವಿಲೀನಗೊಂಡ ಇತರ ಪಕ್ಷಗಳಿಗೆ ಅಭ್ಯಂತರವಿರಲಿಲ್ಲ. ಕೋಮುವಾದ ವಿನಾಶಕಾರಿ ಎಂಬ ನಿಲುವು ತಳೆದವರಲ್ಲ ಇವರು ಎಂಬುದು ಇದರಿಂದಲೇ ಸ್ಪಷ್ಟ. ಕೋಮುವಾದಿಗಳ ಜೊತೆಗೂಡಿ ಸ್ಪರ್ಧಿಸಿದವರು ಹಾಗೂ ಅಧಿಕಾರವನ್ನು ನಡೆಸಿದವರು ಈ ಪಕ್ಷಗಳ ಮುಖಂಡರು.



ಆರೆಸ್ಸೆಸ್ ವಿರುದ್ಧವಾದ ದನಿ ಕರ್ನಾಟಕದ ಜನತಾ ಪಕ್ಷದಲ್ಲಿ ಗಟ್ಟಿಯಾಗಲಿಲ್ಲ. ಹೀಗೆ ಆರೆಸ್ಸೆಸ್ ಅನ್ನು ಏಕೆ ವಿರೋಧಿಸಬೇಕು, ಅದರ ಸ್ವರೂಪವೇನು ಎಂಬುದು ಕರ್ನಾಟಕದಲ್ಲಿ ಒಂದು ದೊಡ್ಡ ವಿಷಯವಾಗಲಿಲ್ಲ.

ಕರ್ನಾಟಕದಲ್ಲಿ ಹೀಗೆ ಜನತಾಪಕ್ಷಕ್ಕೆ ಸೇರಿದವರು ಸಂಸ್ಥಾ ಕಾಂಗ್ರೆಸ್, ಸಮಾಜವಾದಿ ಹಾಗೂ ಜನ ಸಂಘ ಪಕ್ಷಗಳು. ಆಗ ಅದರ ರಾಜ್ಯ ಘಟಕದ ಅಧ್ಯಕ್ಷರಾದವರು ಸಂಸ್ಥಾ ಕಾಂಗ್ರೆಸ್ ಮೂಲದ ದೇವೇಗೌಡರು. 1977ರಲ್ಲಿ ಕೇಂದ್ರದಲ್ಲಿ ಮತ್ತು ಅನೇಕ ರಾಜ್ಯಗಳಲ್ಲಿ ಜನತಾ ಪಕ್ಷ ಅಧಿಕಾರಕ್ಕೆ ಬಂದರೂ ಕರ್ನಾಟಕದಲ್ಲಿ ಜನತಾಪಕ್ಷ ಅಧಿಕಾರಕ್ಕೆ ಬರಲಿಲ್ಲ. 1979ರಲ್ಲಿ ಜನತಾಪಕ್ಷವನ್ನು ರಾಜ್ಯ ಸರ್ಕಾರ, ಕೇಂದ್ರ ಸರ್ಕಾರಗಳನ್ನು ತನ್ನ ವಶಕ್ಕೆ ತೆಗೆದುಕೊಳ್ಳಲು ಅಥವಾ ತನ್ನ ಪ್ರಭಾವವನ್ನು ವಿಸ್ತರಿಸಲು ಆರೆಸ್ಸೆಸ್ ಪ್ರಯತ್ನಿಸಿದಾಗ ಜನತಾಪಕ್ಷದಲ್ಲಿ 'ದ್ವಿ ಸದಸ್ಯತ್ವ' ವಿವಾದ ಎಂಬುದು(ಜನತಾ ಪಕ್ಷದಲ್ಲಿದ್ದವರು ತಮ್ಮ ಮೂಲ ಪಕ್ಷ, ಸಂಘಟನೆಯ ಸದಸ್ಯತ್ವ ಹೊಂದಿರಬಹುದು. ಎಲ್ಲರೂ ಕೇವಲ ಜನತಾಪಕ್ಷದ ಸದಸ್ಯರಾಗಿ ಇರಬೇಕು ಆರೆಸ್ಸೆಸ್ ಸದಸ್ಯತ್ವವನ್ನೂ ಬಿಡಬೇಕು, ಎಂಬುದು ಈ ವಿವಾದ ತಿರುಳು) ಬಹಳದೊಡ್ಡದಾಯಿತು. ಇದು ಕೋಮುವಾದಿ ಸಂಘಟನೆಗಳು ಸರ್ಕಾರ ಮತ್ತು ಪಕ್ಷದ ಮೇಲೆ ನಿಯಂತ್ರಣವನ್ನು ಸಾಧಿಸುವುದರ ವಿರುದ್ಧದ ಸಂಘರ್ಷವಾಗಿತ್ತು. ಇದರಲ್ಲಿ ಚರಣಸಿಂಗ್ ಮೊದಲಾದವರು ದ್ವಿ ಸದಸ್ಯತ್ವದ ವಿರುದ್ಧ ಧ್ವನಿ ಎತ್ತಿದ್ದಾರೆ. ಮೊರಾರ್ಜಿ ದೇಸಾಯಿ ದ್ವಿಸದಸ್ಯತ್ವವನ್ನು ವಿರೋಧಿಸಿರಲಿಲ್ಲ. ಈ ಸಂಘರ್ಷ ಜನತಾಪಕ್ಷದ ವಿಭಜನೆಗೆ ಹಾಗು ಸರ್ಕಾರದ ಪತನಕ್ಕೆ ಕಾರಣವಾಯಿತು. ಈ ಸಂಘರ್ಷದಲ್ಲಿ ಕರ್ನಾಟಕದ ಘಟಕ ಮೊರಾರ್ಜಿದೇಸಾಯಿ, ಚಂದ್ರಶೇಖರ್ ಹಾಗೂ ರಾಮಕೃಷ್ಣಹೆಗಡೆಯವರೊಂದಿಗೆ ಗುರುತಿಸಿಕೊಂಡಿತು. ಹೀಗಾಗಿ ಆರೆಸ್ಸೆಸ್ ವಿರುದ್ಧವಾದ ದನಿ ಕರ್ನಾಟಕದ ಜನತಾ ಪಕ್ಷದಲ್ಲಿ ಗಟ್ಟಿಯಾಗಲಿಲ್ಲ. ಹೀಗೆ ಆರೆಸ್ಸೆಸ್ ಅನ್ನು ಏಕೆ ವಿರೋಧಿಸಬೇಕು, ಅದರ ಸ್ವರೂಪವೇನು ಎಂಬುದು ಕರ್ನಾಟಕದಲ್ಲಿ ಒಂದು ದೊಡ್ಡ ವಿಷಯವಾಗಲಿಲ್ಲ. ನಂತರ ರಾಷ್ಟ್ರಮಟ್ಟದಲ್ಲಿ ಆರೆಸ್ಸೆಸ್ ಮೂಲದವರು ಜನತಾಪಕ್ಷದಿಂದ ಹೊರಬಂದು ಜನಸಂಘ ಎಂಬ ಹೆಸರನ್ನು ಕೈಬಿಟ್ಟು ಭಾರತೀಯ ಜನತಾಪಕ್ಷವೆಂಬ ಹೆಸರನ್ನು ಧರಿಸಿ ಬೇರೆ ಪಕ್ಷವಾದರು. ಆ ನಂತರವೂ ಕರ್ನಾಟಕದ ಜನತಾ ಪಕ್ಷದ ನಾಯಕರು ಮುಖ್ಯವಾಗಿ ಹೆಗಡೆಯವರು ರಾಷ್ಟ್ರಮಟ್ಟದಲ್ಲಿ ಕಾಂಗ್ರೆಸ್ ವಿರೋಧಿ ಕೂಟ - ಮೈತ್ರಿಕೂಟವನ್ನು ರಚಿಸುವ ಪ್ರಸ್ತಾಪ ಬಂದಾಗೆಲ್ಲಾ ಬಿಜೆಪಿಯನ್ನು ಬಿಡಲು ತಯಾರಿರಲಿಲ್ಲ. ಆದರೆ ಸಿಪಿಐ(ಎಂ) ಜನತಾಪಕ್ಷದ ವಿಭಜನೆಯಾಗುವ ಸಂದರ್ಭದಲ್ಲಿ ದ್ವಿ ಸದಸ್ಯತ್ವದ ವಿರೋಧವಾಗಿ ಚರಣ್ ಸಿಂಗ್ ಸರ್ಕಾರಕ್ಕೆ ಬೆಂಬಲ ನೀಡಿತು ಮತ್ತು ಮುಂದೆಂದೂ ಬಿಜೆಪಿಯೊಡನೆ ಸೇರಿಕೊಂಡು ಮೈತ್ರಿ ಕೂಟ ರಚಿಸಿದರೆ ತಾನು ಬೆಂಬಲ ನೀಡುವುದಿಲ್ಲವೆಂದು ಸಾರಿತು. ಹೀಗಾಗಿ ಅಂತಹ ಪ್ರಸಂಗ ಬಂದಾಗ ಬಿಜೆಪಿ ಹೊರಗಿನಿಂದ ಬೆಂಬಲ ಕೊಡುವ ಪರಿಸ್ಥಿತಿ ಉಂಟಾಯಿತೇ ಹೊರತು ಮೈತ್ರಿಕೂಟದ ಭಾಗವಾಗಲು ಅವಕಾಶವಾಗಲಿಲ್ಲ. ಹೀಗಾಗಿ ಮುಂದೆ 1989ರ ಚುನಾವಣೆಗೆ ಮೊದಲು ಜನರ ಪಕ್ಷ ಮತ್ತು ವಿ.ಪಿ.ಸಿಂಗ್‌ರವರ ಜನ ಮೋರ್ಚಾ ಮೊದಲಾದ ಕೆಲ ಪಕ್ಷಗಳು, ಗುಂಪುಗಳು ಸೇರಿ ಜನತಾದಳವನ್ನು ರಚಿಸಿಕೊಂಡಾಗ ಬಿಜೆಪಿ ಅದರ ಭಾಗವಾಗುವುದನ್ನು ಸಿಪಿಐ(ಎಂ) ಯಶಸ್ವಿಯಾಗಿ ತಡೆಹಿಡಿಯಿತು. ಆದರೆ ಹೀಗೆ ಜನತಾ ಪಕ್ಷ ಜನತಾದಳವಾಗಿ ರೂಪುಗೊಳ್ಳುವಾಗಲು ಕೋಮುವಾದದ ಸ್ವರೂಪ, ಅಪಾಯಗಳ ಬಗ್ಗೆ ದೇಶದ ಐಕ್ಯತೆ, ಸಮಾಜದ ಐಕ್ಯತೆಯ ಬಗ್ಗೆ ತಲೆಕೆಡಿಸಿಕೊಳ್ಳದೆ ಆಯಾ ಕಾಲದ ಚುನಾವಣೆಗಳನ್ನು ಎದುರಿಸುವುದು ಹೇಗೆ ಎಂಬ ವಿಷಯಕ್ಕಷ್ಟೇ ಸಿಮಿತವಾಗಿತ್ತು ಜನತಾದಳದ ನಾಯಕರ ಯೋಚನೆಗಳು.



ವಾಜಪೇಯಿ - ಹೆಗಡೆ
ಜನತಾ ಪರಿವಾರ + ಸಂಘ ಪರಿವಾರ
ಇದೆಂಥಾ ಸೂತ್ರ?

ರಾಮಜನ್ಮಭೂಮಿ ವಿವಾದವನ್ನು ಬಿಜೆಪಿ ಕೈಗೆತ್ತಿಕೊಂಡಾಗ, ಇಟ್ಟಿಗೆ ಯಾತ್ರೆ, ರಾಮಜ್ಯೋತಿ, ಇತ್ಯಾದಿ ಕಾರ್ಯಕ್ರಮಗಳ ಸಂದರ್ಭದಲ್ಲಿಯಾಗಲಿ 1992ರಲ್ಲಿ ಬಾಬರಿ ಮಸೀದಿ ಧ್ವಂಸದ ಸಂದರ್ಭದಲ್ಲಿಯಾಗಲಿ, ಜನತಾದಳ ದೃಢ ನಿಲುವನ್ನು ತಳೆಯಲಿಲ್ಲ. ಸಂಘ ಪರಿವಾರದ ಕೋಮುವಾದಿ ಚಟುವಟಿಕೆಗಳು ಕೋಮು ದಂಗೆಗಳು ತಾರಕಕ್ಕೇರುತ್ತಿರುವಾಗ ಮತ್ತು ಈದ್ಗಾ ವಿವಾದ ಕರ್ನಾಟಕವನ್ನು ಸುಡುತ್ತಿರುವಾಗ ಅದರ ವಿರುದ್ಧ ಅನೇಕ ಸಂಘಟನೆಗಳು ವ್ಯಕ್ತಿಗಳು, ತಮ್ಮ ತಮ್ಮ ಶಕ್ತ್ಯಾನುಸಾರ ಧ್ವನಿ ಎತ್ತುತ್ತಿದ್ದವು. ಸಿಪಿಐ(ಎಂ) ಸೇರಿದಂತೆ ಎಡಪಕ್ಷಗಳು ದೃಢವಾಗಿ ಹೋರಾಟ ಮಾಡುತ್ತಿದ್ದಾಗ ಜನತಾದಳ ಎಲ್ಲಿಯೂ ದನಿಗೂಡಿಸಿರಲಿಲ್ಲ. ಹೀಗಾಗಿ ಜನತಾದಳದ ನಾಯಕರು, ಕಾರ್ಯಕರ್ತರು ಹಾಗೂ ಅವರ ಮತದಾರರಿಗೆ ಸೆಕ್ಯುಲರಿಸಂ ಎಂದರೇನು ಎಂಬ ತಿಳುವಳಿಕೆ ಮೂಡಿಸುವ ಕೆಲಸ ನಡೆದೇ ಇಲ್ಲ.

ಜನತಾದಳದ ಜಾತ್ಯಾತೀತ ಸ್ವರೂಪದ ಮಿತಿಗಳು

ಅಂದರೆ ಜನತಾದಳ ಜಾತ್ಯಾತೀತ ಅಥವಾ ಸೆಕ್ಯುಲರ್ ಅಲ್ಲವೇ? ಎಂಬ ಪ್ರಶ್ನೆ ಏಳುತ್ತದೆ. ಜನತಾದಳ ಅಧಿಕಾರಕ್ಕೆ ಬರಲು ಹಿಂದೂ ಧರ್ಮವನ್ನಾಧರಿಸಿ ಮತಯಾಚನೆ ಮಾಡುವುದಿಲ್ಲ. ಬೇರೆ ಧರ್ಮದವರ ವಿರುದ್ಧ ದ್ವೇಷ ಸಾಧನೆಯನ್ನೇ ಹಿಂದೂಧರ್ಮದವರ ಒಗ್ಗಟ್ಟಿನ ಹೆಸರಿನಲ್ಲಿ ಅವರ ಮತ ಗಳಿಕೆಗೆ ಬಳಸುವುದಿಲ್ಲ. ಕೋಮುದಂಗೆಗಳನ್ನು ಅದಕ್ಕೆ ಬಳಸುವುದಿಲ್ಲ. ಜನರ ಸಮಸ್ಯೆಗಳಿಗೆ ಅಷ್ಟಿಷ್ಟು ಪರಿಹಾರ ನೀಡುವುದನ್ನು, ಜಾತಿವಾದವನ್ನು ಬಳಸುತ್ತಾರೆ. ಇದು ಜನತಾದಳ ಕಾಂಗ್ರೆಸ್ ಮತ್ತು ಇತರ ಕೆಲವು ಪ್ರಾದೇಶಿಕ ಪಕ್ಷಗಳಂತೆಯೇ ಸೆಕ್ಯುಲರ್ ಸ್ವರೂಪದ ಪಕ್ಷ ಎಂಬುದನ್ನು ತೋರಿಸುತ್ತದೆ. ಮುಸ್ಲಿಮ್ ಮೊದಲಾದ ಅಲ್ಪಸಂಖ್ಯಾತರ ಮತಗಳನ್ನು ಗಳಿಸುವುದಕ್ಕಾಗಿ, ಹಿಂದುಳಿದ, ಕೆಳಜಾತಿಗಳ ಮತಗಳನ್ನು ಗಳಿಸುವುದಕ್ಕಾಗಿ ಕೂಡ ಅವರಿಗೆ ಕೋಮುವಾದಿಗಳ ವಿರುದ್ಧವಾದ ರಾಜಕೀಯವನ್ನು ಎತ್ತಿ ಹಿಡಿಯಬೇಕಾಗುತ್ತದೆ. ಆದರೆ ಅವರು ರಾಜಕೀಯವಾಗಿ ನಿರಂತರವಾಗಿ ಎದುರಿಸಬೇಕಾದ ಪಕ್ಷ ಇಂತಹುದೇ ಸ್ವರೂಪವುಳ್ಳ ಕಾಂಗ್ರೆಸ್ ಪಕ್ಷ. ಬಿಜೆಪಿ ಪ್ರಬಲವಾಗಿರುವ ಪ್ರದೇಶಗಳಲ್ಲಿ ಜನತಾದಳ ದುರ್ಬಲವಾಗಿರುವುದರಿಂದ ಬಿಜೆಪಿಯನ್ನು ಎದುರಿಸಬೇಕಾದ ಅವರ ಕೋಮುವಾದದ ವಿರುದ್ಧ ದನಿ ಎತ್ತಬೇಕಾದ ತುರ್ತು ಅಗತ್ಯವಿಲ್ಲ. ರಾಷ್ಟ್ರಮಟ್ಟದ ರಾಜಕಾರಣದಲ್ಲಿ ಇತರೆ ಜಾತ್ಯಾತೀತ ಪಕ್ಷಗಳ ಜೊತೆ ಸೇರಬೇಕಾದ ಅಗತ್ಯವೂ ಅವರನ್ನು ಎನ್.ಡಿ.ಎ. ಕೂಟಕ್ಕೆ ಸೇರಲು ಬಂದ ಆಹ್ವಾನವನ್ನು ತಿರಸ್ಕರಿಸುವಂತೆ ಮಾಡಿದೆ. ಆದರೆ ಅದೇ ಸಮಯದಲ್ಲಿ ಕೋಮುವಾದದ ವಿರುದ್ಧ ಸೆಕ್ಯುಲರ್ ತತ್ವಕ್ಕಾಗಿ ವ್ಯಾಪಕವಾದ ಹೋರಾಟವನ್ನು ಮಾಡುವುದಾಗಲೀ ಆ ಮೂಲಕ ಅವರ ಪಕ್ಷದ ನಾಯಕರಿಗೆ, ಕಾರ್ಯಕರ್ತರಿಗೆ ಈ ಬಗ್ಗೆ ಮನವರಿಕೆ ಮಾಡುವುದಾಗಲೀ ಜನತಾದಳ ಮಾತ್ರವಲ್ಲ ಕಾಂಗ್ರೆಸ್ ಮೊದಲಾದ ಅನೇಕ ಸೆಕ್ಯುಲರ್ ಪಕ್ಷಗಳೂ ಅವಶ್ಯವೆಂದು ಭಾವಿಸಿಲ್ಲ. ಇದು ಅವರ ಕಾರ್ಯಕರ್ತರನ್ನು, ನಾಯಕರನ್ನು ಕೇವಲ ಅಧಿಕಾರದಾಹದ ಸಂದರ್ಭಸಾಧಕರನ್ನಾಗಿ ರೂಪಿಸುತ್ತದೆ. **ಜನತಾದಳ ಸೆಕ್ಯುಲರ್ ಸ್ವರೂಪವನ್ನು ಪಡೆದ ಪಕ್ಷ ಆದರೆ ಸೆಕ್ಯುಲರ್ ತತ್ವವೆಂದರೇನು ಎಂಬುದನ್ನು ತಿಳಿಯದ ಪಕ್ಷ.**

ಜನತಾದಳ ಸೆಕ್ಯುಲರ್ ಆದ ಕಥೆ

ದೇವೇಗೌಡರೇ ಒಮ್ಮೆ ಪತ್ರಿಕಾ ಹೇಳಿಕೆಯೊಂದರಲ್ಲಿ ಹೇಳಿದಂತೆ ಅವರಿಗೆ ಯಾವ ಇಸಂ ಅಥವಾ ವಾದಗಳ ಪರಿಚಯವೂ ಇರಲಿಲ್ಲ. ಇದ್ದಕ್ಕಿದಂತೆ 1996ರಲ್ಲಿ ಅವರು ಪ್ರಧಾನಿಯಾಗುವ ಸಂದರ್ಭ ಒದಗಿದಾಗ, ಬಿಜೆಪಿ ಕೋಮುವಾದಿ ಬಿಜೆಪಿಯವರನ್ನು ಅದರಲ್ಲಿಯೂ ಬಾಬ್ರಿ ಮಸೀದಿ ಒಡೆದ ನಂತರದ ಸಂದರ್ಭದಲ್ಲಿ ಆಡಳಿತದಿಂದ ದೂರ ಇಡಬೇಕು ಅದಕ್ಕಾಗಿ ಸಂಯುಕ್ತರಂಗ ರಚಿಸಿಕೊಂಡು ಕಾಂಗ್ರೆಸ್‌ನ ಹೊರ ಬೆಂಬಲ ಪಡೆದು ಸೆಕ್ಯುಲರ್ ಸರ್ಕಾರ ರಚಿಸಬೇಕನ್ನುವ ಚರ್ಚೆಗಳು ದೇವೇಗೌಡರ ಕಿವಿಗೆ ಬಿದ್ದವು. ಆಮೂಲಕ ಅವರಿಗೆ ಮೊದಲಬಾರಿಗೆ ಕೋಮುವಾದ ಸೆಕ್ಯುಲರಿಸಂ (ಜ್ಯಾತ್ಯಾತೀತತೆ ಎಂದು ತಪ್ಪಾಗಿ ಕನ್ನಡದಲ್ಲಿ ಅನುವಾದಿಸಲಾಗುತ್ತದೆ) ಎಂಬ ಪದಗಳ ಪರಿಚಯವಾಯಿತು. ಅದೇ ಸಮಯದಲ್ಲಿ ಒಬ್ಬ ಸಂಸತ್ ಸದಸ್ಯರಾಗಿದ್ದ ಕುಮಾರಸ್ವಾಮಿಯವರ ಕಿವಿಗೆ ಎಲ್ಲಾ ಚರ್ಚೆಗಳು ಬೀಳಲಿಲ್ಲವೇ? ಅವರ ಕಿವಿಗೆ ಬಿದ್ದರೂ ಆ ಬಗ್ಗೆ ಅವರು ಆಳವಾಗಿ ತಿಳಿದುಕೊಳ್ಳಲಾಗಲಿ, ತಲೆಕೆಡಿಸಿಕೊಳ್ಳಲಾಗಲಿ ಹೋಗಲಿಲ್ಲ ಎಂಬುದು ಮುಂದೆ ಅನೇಕ ಸಂದರ್ಭಗಳಲ್ಲಿ ಅವರು ಆಡಿದ ಮಾತಿನಿಂದ ಸ್ಪಷ್ಟವಾಗುತ್ತದೆ. ದಕ್ಕಿದ ಅಧಿಕಾರವನ್ನು ಅನುಭವಿಸುವುದು, ಬಳಸಿಕೊಳ್ಳುವುದರಲ್ಲಿ ಕುಮಾರಸ್ವಾಮಿಯದ್ದು ಮುಖ್ಯಪಾತ್ರ ಎಂಬುದು ಕೂಡ ಸ್ಪಷ್ಟ. ದೇವೇಗೌಡರ ಸರ್ಕಾರಕ್ಕೆ ಕಾಂಗ್ರೆಸ್ ತನ್ನ ಬೆಂಬಲ ಹಿಂತೆಗೆದುಕೊಂಡಾಗ ವಾಜಪೇಯಿಯವರು ಬಿಜೆಪಿ ಬೆಂಬಲವನು ನೀಡಲು ಮುಂದಾಗಿದ್ದರಂತೆ. ಈ ಬೆಂಬಲವನ್ನು ತೆಗೆದುಕೊಂಡು ದೇವೇಗೌಡರೇ ಏಕೆ ಪ್ರಧಾನಿಯಾಗಿ ಮುಂದುವರಿಯಬಾರದು ಎಂಬುದು ಅವರನ್ನು ಬಹಳ ಚಿಂತೆಗೀಡು ಮಾಡಿದೆ. ಹೀಗೆ ಈ ಸೆಕ್ಯುಲರಿಸಂ, ಕಮ್ಯುನಿಸಂ ಎಂಬ ಮಾತುಗಳೆಲ್ಲಾ ಕೆಲಸಕ್ಕೆ ಬಾರದವು ಅಧಿಕಾರಕ್ಕೇರುವುದೊಂದೇ ನಮ್ಮ ಗುರಿ ಎಂಬುದು ಆಗಲೇ ಅವರಿಗೆ ಸ್ಪಷ್ಟವಾಗಿದ್ದಂತೆ ಕಾಣುತ್ತದೆ.

ಆದರೆ ಕರ್ನಾಟಕ ರಾಜ್ಯದಲ್ಲಿ ಜನತಾದಳ ಮತ್ತೆ ಇಬ್ಭಾಗವಾಯಿತು. ಜನತಾದಳದಿಂದ ಹೊರಕ್ಕೆ ಹಾಕಲ್ಪಟ್ಟಿದ್ದ ರಾಮಕೃಷ್ಣಹೆಗಡೆ, ಆಗ್ಗೆ ಪ್ರಧಾನಿಯಾಗಿದ್ದ ವಾಜಪೇಯಿ ಹಾಗೂ ಮಹಾ ಸಮಾಜವಾದಿ ಮತ್ತು ರಕ್ಷಣಾ ಮಂತ್ರಿ ಜಾರ್ಜ್ ಫರ್ನಾಂಡೀಸ್‌ರವರ ಎಡಬಿಡದ ಪ್ರಯತ್ನದಿಂದ ಇದು ಸಾಧ್ಯವಾಯಿತು. ಆಗ ಬಿಜೆಪಿಯ ಜೊತೆಯಲ್ಲಿ ಚುನಾವಣಾ ಮೈತ್ರಿಗೆ ಮುಂದಾದ ಜನತಾದಳದ ಗುಂಪಿನಲ್ಲಿ ಮಹಾ ಸಮಾಜವಾದಿಗಳ ಸಂಖ್ಯೆಯೇ ಹೆಚ್ಚಾಗಿತ್ತು ಎಂಬುದೊಂದು ವಿಶೇಷ. ಆಗ ಬಿಜೆಪಿಗೆ ಪರಿವಾರದ ಜೆಡಿ(ಯು)ಗೆ ವಿರುದ್ಧವಾಗಿ ದೇವೇಗೌಡರ ನೇತೃತ್ವದ ದಳ ಸೆಕ್ಯುಲರ್ ಅಥವಾ ಜಾತ್ಯಾತೀತ ಎಂಬ ಹೆಸರನ್ನು ಧರಿಸಿತು, ಇದು ಜನ ಸಂಘವೂ ಸೇರಿ ರೂಪುಗೊಂಡ ಜನತಾಪಕ್ಷ ಜನತಾದಳವಾಗಿ ನಂತರ, ಜಾತ್ಯಾತೀತ ಜನತಾದಳವಾಗಿ ಹೆಸರು ಧರಿಸಿದ ಕಥೆ.



ಪಿಸುಮಾತು ಬಹುದೂರ ಕೇಳುತ್ತೆ

- ಚೀನಿ ಗಾದೆ



ಈ ಊರಾಗಲ್ಲ. ಬೀದರಿಗೆ ಹೋಗಬೇಕಾಗಿತ್ತು ಓದ್ಲಾಕ. ಇಲ್ಲೇ ಆದ್ರ ಓದು ಇಲ್ಲಾಂದ್ರ ಬ್ಯಾಡ. ಮೊದಲೇ ಎಲ್ಲೆಂದರಲ್ಲಿ ದಂಗಾ ಆಗಲತಾವ. ನೀ ಹೆಣ್ಣು ಹುಡುಗಿ. ಆಗಬಾರದ್ದು ಆದರೆ ಏನ್ ಮಾಡಬೇಕು..... ಅಂತ ಅಪ್ಪ ಕಳಿಸಲಿಲ್ಲ. ಬಂದಿದ್ದ ಸರ್ಕಾರಿ ಸೀಟ್ ಬಿಟ್ಟ ಕುಂತೀನಿ' ರಿಜ್ವಾನಾ ಹೇಳುತ್ತಲೇ ಇದ್ದಳು.....

ಹೃದಯ ಬೆಸುಗೆಯ ಬೆಳಕರಸಿ.....

ಪ್ರಜಾಸತ್ತಾತ್ಮಕ ಚಳುವಳಿ ಪ್ರಿಯರೆಲ್ಲ ಸಂಭ್ರಮ ಮತ್ತು ಹೆಮ್ಮೆಪಡುವ ದಿಕ್ಕಿನಲ್ಲಿ ಜನವಾದಿಯು ಹೆಜ್ಜೆ ಹಾಕುತ್ತಿದೆ. ನವೆಂಬರ್ 1 ರಿಂದ 4 ರವರೆಗೆ ಅಖಿಲ ಭಾರತ ಸಮ್ಮೇಳನವು ಕಲ್ಕತ್ತಾದಲ್ಲಿ ನಡೆಯಲಿದೆ. ಒಂದು ಕೋಟಿಗೂ ಹೆಚ್ಚು ಮಹಿಳೆಯರು ಜನವಾದಿ ಗೆಳತಿಯರ ಬಳಗದಲ್ಲಿ ತಾವೂ ಒಬ್ಬರಾಗಿದ್ದಾರೆ. ಸ್ವಾಭಿಮಾನದ ಬಾವುಟದೊಳಗಿನ ಕೆಂಪು ನಕ್ಷತ್ರಕ್ಕೆ ಹೊಳಪು ತಂದಿದ್ದಾರೆ. ಎಲ್ಲ ವರ್ಗ, ವರ್ಣ, ಜಾತಿ, ಧರ್ಮದ ಮಹಿಳೆಯರು ಸಮತೆಯ ಬೆಳಕರಿಸಿ ಒಗ್ಗೂಡಿದ್ದಾರೆ. ಹಿಂದಿನ 7ನೇ ರಾಷ್ಟ್ರೀಯ ಸಮ್ಮೇಳನದ ನಿರ್ಣಯಗಳನ್ನು ಕಳೆದ ಮೂರು ವರ್ಷ ಜಾರಿ ಮಾಡಲು ದಣಿವರಿಯದೆ ಶ್ರಮಿಸಿದ ಜನವಾದಿ ಗೆಳತಿಯರಿಗೆ ಸೆಲ್ಯೂಟ್ ಹೇಳಲೇಬೇಕು. ಹೆಜ್ಜೆ ಹೆಜ್ಜೆಗೂ ನುಗ್ಗುವ, ಅಡ್ಡಿ ಆತಂಕಗಳನ್ನು ಎದುರಿಸುವ, ನಿವಾರಿಸುವ ಮುನ್ನಡೆವ ಮಹಿಳಾ ಚಳುವಳಿಯು ಇಪ್ಪತ್ತೈದು ವರ್ಷಗಳಲ್ಲಿ ಖಂಡಿತವಾಗಿಯೂ ಪ್ರಬುದ್ಧ ನಡೆ ದಾಖಲಿಸಿದೆ. ಎಡ ಮತ್ತು ಮಹಿಳಾ (ಜನವಾದಿ) ಚಳುವಳಿಯ ಕಾರಣವಾಗಿ ಅನೇಕ ತಿದ್ದುಪಡಿ ಮತ್ತು ಬದಲಾವಣೆಯೊಂದಿಗೆ ಹೊಸ ಕಾನೂನು ಕಾಯ್ದೆಗಳು ಬೆಳಕು ಕಂಡಿವೆ.

ಸ್ವತಂತ್ರ ಭಾರತದ 60 ವರ್ಷದವರೆಗೂ ಈ ದೇಶದ ದಲಿತ, ಅಲ್ಪಸಂಖ್ಯಾತರ ಜೀವನದ ಸ್ಥಿತಿಗತಿಯ ಕುರಿತು ಕಡೆ ಪಕ್ಷ ಅಧ್ಯಯನ ಮಾಡಲೂ ಸರ್ಕಾರಗಳೂ ಮುಂದೆ ಬಂದಿರಲಿಲ್ಲ. ಆದರೆ, ಕಳೆದ ಸಂಸತ್ ಚುನಾವಣೆಯಲ್ಲಿ ಎಡಪಕ್ಷಗಳ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಚುನಾಯಿತರಾದ ಕಾರಣವಾಗಿ ಮತ್ತು ಮಹಿಳಾ ಚಳುವಳಿಯ ಮುಖಂಡರೂ ಆಯ್ಕೆಯಾದ ಕಾರಣದಿಂದ ಈ ಬಾರಿ ಕೇಂದ್ರ ಸರ್ಕಾರವು ಪ್ರಮುಖ ತೀರ್ಮಾನ ಕೈಗೊಳ್ಳುವಂತಾಗಿದೆ. ಅಂತೆಯೇ ಅಲ್ಪಸಂಖ್ಯಾತರ ಒಟ್ಟು ಬದುಕಿನ ಪರಿಸ್ಥಿತಿ ಅಧ್ಯಯನ ಮಾಡಿ ಸಚಾರ್ ಕಮಿಟಿಯ ವರದಿಯು ಅನೇಕ ರೆಕಮಂಡೇಷನ್ಸ್ ಮಾಡಿದೆ. ಆದರೆ ವರದಿ ಜಾರಿಗೆ ಕೇಂದ್ರದ ಇಚ್ಛೆ ಇಲ್ಲ. ಸಚಾರ್ ಕಮಿಟಿಯಲ್ಲಿ ಮಹಿಳಾ ಪ್ರತಿನಿಧಿಯೂ ಇರುವ ಹಾಗಿದ್ದರೆ ಸಮಗ್ರ ಅಧ್ಯಯನವಾಗುತ್ತಿತ್ತು. ಆದಾಗ್ಯೂ ಮುಸ್ಲಿಂ ಮಹಿಳೆಯರ ಹಕ್ಕುಗಳ ಬಗ್ಗೆ ಜನವಾದಿಯು ಸಮರ್ಥವಾಗಿ ದನಿ ಎತ್ತಿದೆ.


ಅಸ್ಪೃಶ್ಯರಲ್ಲ ಆದರೆ....

ಹಾಗೆ ನೋಡಿದರೆ ಆರ್ಥಿಕವಾಗಿ ಅತ್ಯಂತ ಹಿಂದುಳಿದಿರುವ ಸಮುದಾಯ. ಇತ್ತೀಚೆಗೆ ಮಾತ್ರ ಶೈಕ್ಷಣಿಕ ಮಟ್ಟದ ಪ್ರಗತಿ ಕಾಣುತ್ತೇವೆ. ಸಾಮಾಜಿಕವಾಗಿ ಅಸ್ಪೃಶ್ಯರು ಅಲ್ಲದಿದ್ದರೂ ಕೋಮುವಾದಿಗಳು ಹರಡಿದ ವಿಷ ಗಾಳಿಯಲ್ಲಿ ಮನಸುಗಳ ನಡುವೆ ಗೋಡೆಗಳೇಳುತ್ತಿವೆ. ಅನುಮಾನಗಳು ಹುತ್ತಗಟ್ಟಿ ಜನಸಾಮಾನ್ಯರ ದಿನಚರಿಯು ಆತಂಕದ ಹೊರಳು ಹಾದಿ ಹಿಡಿದಿದೆ. ಸೌಹಾರ್ದ ಮತ್ತು ಸ್ನೇಹದ ಹೆಣಿಕೆಗೆ ಕತ್ತರಿ ಹಾಕಲಾಗುತ್ತದೆ.

ಅದರಲ್ಲೂ ಮಹಿಳೆಯರು ಈ ಎಲ್ಲಾ ಅಪಾಯದ ಸಂದರ್ಭದ ಬಲಿಪಶುಗಳು. ಒಳ ಹೊರಗಿನ ಒತ್ತಡಗಳಲ್ಲಿ ನುಜ್ಜು ಗುಜ್ಜಾಗುವ ಸ್ಥಿತಿ. ಹೊರ ಕೋಮುವಾದಿಗಳ ಕಾರಣವಾಗಿ ಅಲ್ಪಸಂಖ್ಯಾತ ಮೂಲಭೂತವಾದಿಗಳ ಅಪಾಯದ ಆಟ ಶುರುವಾದರೆ ಅದಕ್ಕೆ ನೇರ ಬಲಿ ಮಹಿಳೆಯೇ ಮೊದಲು.

ಕಪ್ಪು ಬುರ್ಖಾದೊಳಗೆ ಹೊಳೆವ ಕಾಡಿಗೆ ಕಂಗಳು

ಕಪ್ಪು ಬುರ್ಖಾದೊಳಗೆ ಹೊಳೆವ ಕಾಡಿಗೆ ಕಂಗಳು ನೋಡಿಯೇ ಗುರುತಿಸಿದೆ ಪುಟ್ಟ ಗೆಳತಿ ರಿಜ್ವಾನಾಳನ್ನು. ಪಿಯುಸಿ ಎರಡನೇಯ ವರ್ಷ ಪೂರ್ತಿ ಕಣ್ಣಲ್ಲಿ ಎಣ್ಣೆ ಹಾಕಿಕೊಂಡು ಹಗಲು ರಾತ್ರಿ ಓದಿ ಒಳ್ಳೆಯ



ಅಂಕಗಳು ಪಡೆದು ಟೀಚರ್ ಆಗುವ ಕನಸು ಹೊತ್ತು ಟಿಸಿಹೆಚ್‌ಗೆ ಅರ್ಜಿ ಹಾಕಿದ್ದಳು. ಆಮೇಲೇನಾಯ್ತು ನನಗೆ ಗೊತ್ತಿರಲಿಲ್ಲ. ಸರ್ಕಾರಿ ನೌಕರಿ ಪಡದೇ ತೀರುವ ಹಠವಿತ್ತು. ಏನಾಯ್ತು ಕೇಳಿದೆ. ಅವಳ ಕಣ್ಣುಗಳು ಥಟ್ಟನೆ ಕಳೆಗುಂದಿದವು. ನೀರ ಹನಿಯೊಂದು ತೇಲುವಾಗಿ ಹರಿದಾಡಿತು.

'ಟಿಸಿಹೆಚ್ ಗೆ ಆಯ್ಕೆ ಆಗಿತ್ತು ಏನ್ ಮಾಡಾದು ನಮ್ಮಪ್ಪ ಕಳಿಸಲಿಲ್ಲ' ಸಣ್ಣ ದನಿಯಲ್ಲಿ ನುಡಿದಳು. ಹೆಣ್ಣು ಮಕ್ಕಳನ್ನೂ ಕಾಲೇಜಿಗೆ ಕಳಿಸಿದ್ದ ರಿಜ್ವಾನಾಳ ಅಪ್ಪ ಅಂಥ ಕಟ್ಟರ್ ಸಂಪ್ರದಾಯಸ್ಥರಲ್ಲ ಎಂದು ನಾನು ನಂಬಿದ್ದೆ. ಸರ್ಕಾರಿ ಕೋಟಾದಲ್ಲೇ ಆಗಿತ್ತು. ಈ ಊರಾಗಲ್ಲ. ಬೀದರಿಗೆ ಹೋಗಬೇಕಾಗಿತ್ತು ಓದ್ಲಾಕ. ಇಲ್ಲೇ ಆದ್ರ ಓದು ಇಲ್ಲಾಂದ್ರ ಬ್ಯಾಡ. ಮೊದಲೇ ಎಲ್ಲೆಂದರಲ್ಲಿ ದಂಗಾ ಆಗಲತಾವ. ನೀ ಹೆಣ್ಣು ಹುಡುಗಿ. ಆಗಬಾರದ್ದು ಆದರೆ ಏನ್ ಮಾಡಬೇಕು..... ಅಂತ ಅಪ್ಪ ಕಳಿಸಲಿಲ್ಲ. ಬಂದಿದ್ದ ಸರ್ಕಾರಿ ಸೀಟ್ ಬಿಟ್ಟ ಕುಂತೀನಿ' ರಿಜ್ವಾನಾ ಹೇಳುತ್ತಲೇ ಇದ್ದಳು. ಅವಳ ದನಿಯಲ್ಲಿ ವಿಚಿತ್ರವಾದ ತಲ್ಲಣ ಇತ್ತು. ಭಯ ಇತ್ತು. ಹೊಯ್ದಾಟ ಇತ್ತು. ಜೀವನದ ಗುರಿಗಿಂತಲೂ ಜೀವದಿಂದುಳಿವ ಪ್ರಯತ್ನದ ಪ್ರಾರಂಭಿಕ ಹಂತದ ಭಾವನೆ ಢಾಳಾಗಿ ಕಾಣುತ್ತಿತ್ತು.

ಹೌದು ಈ ದೇಶದಲ್ಲಿ ಸಂಘ ಪರಿವಾರಗಳ ಷಡ್ಯಂತ್ರ ಶುರುವಾದಾಗಿಂದ ಪರಸ್ಪರ ಮಾನವೀಯ ನಂಬಿಕೆ ವಿಶ್ವಾಸ ಮಾಯವಾಗುತ್ತಿದೆ. ಸ್ವಯಂರಕ್ಷಣೆಗಾಗಿ ಮೊದಲುಗೊಂಡ ಅಲ್ಪಸಂಖ್ಯಾತರ ಒಕ್ಕಟ್ಟು ಬರು ಬರುತ್ತ ಅಪಾಯದ ಮೆಟ್ಟಿಲೇರುತ್ತಿದೆ. ಎರಡೂ ಕಡೆ ವಿಷದ ಹಾವು ಹೆಡೆಯಾಡುತ್ತಿವೆ. ನೋಡುವ ನೋಟದಲ್ಲೂ, ಆಡುವ ಮಾತಿನಲ್ಲೂ ಥಟ್ಟನೆ ನುಸುಳುವ ಪುಟ್ಟ ಅನುಮಾನ ಎದೆಯೊಳಗೆ ತಲ್ಲಣದ ಗೆರೆ ಕೊರೆಯುತ್ತದೆ.

ನಾವು ಆಟೇ ಬ್ಯಾರೇ ಅನಸ್ಲಾಕ ಸುರು ಆಯ್ತು

ಒಮ್ಮೆ ಟ್ರೇನಿನಲ್ಲಿ ಬರುವಾಗ ಬ್ಯಾಂಕ್ ಉದ್ಯೋಗಿಯೊಬ್ಬರು ಸಿಕ್ಕಿದ್ದರು. ಮಹ್ಮದ್ ಇಸ್ಮಾಯಿಲ್. ಚೆಂದದ ಕನ್ನಡದಲ್ಲಿ ಮಾತಾಡುತ, ನಡುವೆ ಒಂದು ಬಿಸಿ ಚಹಾ ಕುಡಿಯುತ ರಾಯಚೂರಿನಿಂದ ಗುಲಬರ್ಗಾದತ್ತ ಬರುತ್ತಿದ್ದೇವು, ಸ್ನಾತಕೋತ್ತರ ಪದವೀಧರೆ ಹೆಂಡತಿ ನೌಕರಸ್ಥೆಯೂ ಹೌದು. ಮೂರು ಮಕ್ಕಳು. ಬಹಳ ಖಾಯೇಷ್‌ನಿಂದ ಬ್ಯಾಂಕ್ ಸಾಲ ಪಡೆದು ದೊಡ್ಡದಾದ ಸುಂದರ ಮನೆ ಕಟ್ಟಿದ್ದರು. ತಮ್ಮದೇ ಮನೆಯಲ್ಲಿ ವಾಸ ಮಾಡುವ ಬಯಕೆಯಿಂದ ಗೃಹ ಪ್ರವೇಶವೂ ಮಾಡಿದ್ದರು. ಆದರೆ ವರ್ಷೊಪ್ಪತ್ತಿನಲ್ಲಿಯೇ ಸ್ವಂತ ಮನೆ ಬಿಟ್ಟು ಬಾಡಿಗೆ ಮನೆಗೆ ವಾಪಾಸಾದರು. ಹೀಗೆ ಹೇಳುವಾಗ ದಂಪತಿಗಳ ಮುಖದ ಮೇಲೆ ನೋವು, ಸಿಟ್ಟು, ವ್ಯಕ್ತಿಸಲಾಗದ್ದ ಅಸಹಾಯಕತೆ ಹಣಿಕಿತು. 'ಸ್ವಂತ ಮನಿ ಯಾಕ ಬಿಟ್ರೀ?' ನಾನು ಕೇಳಿದ ಪ್ರಶ್ನೆಗೆ ಇಸ್ಮಾಯಿಲ್ ಒಮ್ಮೆ ನನ್ನ ಕಣ್ಣೊಳಗೆ ದಿಟ್ಟಿಸಿದರು. ಮನದೊಳಗಿನ ಮಾತು ಹಂಚಿಕೊಳ್ಳಲು ಲಾಯಖ್ಖಾದ ಜಾಗವೇ ಎಂದು ಪರೀಕ್ಷಿಸಲು ಇರಬೇಕೇನೋ....ಅವರ ಹೆಂಡತಿ ದಟ್ಟ ಮೌನದ ಪರದೆ ಹೊದ್ದು ಕಿಟಕಿ ಹೊರಗೆ ಹತಾಶ ದಿಟ್ಟಿ ನೆಟ್ಟಿದ್ದರು. ಇಸ್ಮಾಯಿಲ್ ದನಿ ಮಾತ್ರ ಕೇಳುತ್ತಿತ್ತು. 'ನಮ್ ಸಂಗಾಟ ಕೆಲ್ಸಾ ಮಾಡವ್ರು ಹಿಂದೂ ಮಂದ್ಯಾಗೇ ದೊಡ್ಡ ಜಾತಿಯವರು. ಬ್ಯಾಂಕ್ ಸಿಬ್ಬಂದಿಯೆಲ್ಲ ಅಲ್ಲೇ ಮನಿ ಕಟ್ಟಿಸಿದ್ರು. ನಮ್ಮ ಮನಿ ಒಂದೇ ಮುಸಲ್ಮಾನರದ್ದು. ಪೈಲಾ ಸ್ವಂತ ಮನಿ ಅಂತ ಖುಷಿದಾಗೇ ಇದ್ದೇವು. ಆದ್ರ ಬರ್ತಾ ಬರ್ತಾ ನಾವು ಆಟೇ ಬ್ಯಾರೇ ಅನಸ್ಲಾಕ ಸುರು ಆಯ್ತು. ಮನುಷ್ಯ ಅಂದ್ರ ಸಂಘ ಜೀವಿ.

ಆದ್ರ ನಮ್ಮ ಮನಿಗೆ ಯಾರು ಬರಾದಿಲ್ಲ. ಯಾರೂ ನಮಗ ಕರ್‍ಯಾದಿಲ್ಲ. ಹಿಂದೂ ಸಂಘದವರು ಆರ್‌ತಿಂಗಳಿಗರೇ ಒಮ್ಮೆ ನಮ್ಮ ಮನಿ ಮುಂದಿನಾ ಗಣೇಶನ ಗುಡ್ಯಾಗ ಕಾರ್ಯಕ್ರಮ ಮಾಡಿ ಇಸ್ಲಾಮಿ ಮಂದಿಗೆ ಬಯ್ದೇ ಬಯ್ದಿದ್ದರು. ನಮಗ ಮುಜುಗರದಿಂದ ಮೂಲಿ ಹಿಡ್ಯಾಂಗಾಗ್ತಿತ್ತು. ಭಾಳ ಸಲ ನಮ್ಮ ಮುಂದೇ ಟೀಕಾ ಮಾಡ್ತಿದ್ದರು. ಕಾಲೋನಿದಾಗ ಇದ್ದವ್ರೆಲ್ಲ ಹಿಂಗೇ ಇದ್ರು ಅಂತ ಅಲ್ಲ. ಆದ್ರ ನೆರಿ-ಹೊರಿ ಅಂತ ಪ್ರೀತಿಲಿಂದ ಅಪ್ಕೊಮಾವ್ರು ಇರಲಿಲ್ಲ. ಮನಸು ಮನಸಿನ ನಡುವಿಗಿ ಬೇಲಿ ಇತ್ತು. ಯಾಕೋ ನಮ್ಮ ಕಾಲ ನಿಂದರ್‍ಲೇ ಇಲ್ಲ. ಮನಿ ಮನಸು ಬಿಕೋ ಅಂತಿತ್ತು. ಏಟ್ ಪ್ರೀತಿಲಿಂದ ಮನಿ ಕಟ್ಟಿಸಿದ್ದೇವೋ ಆಟೇ ಬ್ಯಾಸ್ರಾಗಿ ಮನಿ ಮಾರಿ ಈಗ ನಮ್ಮ ಹಳಿ ಗಲ್ಲಿ ದರ್ಗಾ ಏರಿಯಾಕ ಬಂದೀವಿ...' ಇಸ್ಮಾಯಿಲ್ ಮುಖದ ಮೇಲಿನ ಗಡ್ಡ ಸಣ್ಣದಾಗಿತ್ತು. ಬಹುಶಃ ಇತ್ತೀಚೆಗೆ ಬೆಳೆದ ಇಸ್ಲಾಂ ಐಡೆಂಟಿಟಿ ಉಳಿಸಿಕೊಳ್ಳಲಿರಬೇಕು.

ಹೌದು ರಾಯಚೂರಿಂದ ಗುಲ್ಬರ್ಗಾ ತಲುಪ ಬೇಕಾದ ಈ ಮೂರು ಗಂಟೆ ಅವಧಿಯಲ್ಲಿಯೇ ಮಾತಾಡಲು, ತನ್ಮೂಲಕ ನೆಮ್ಮದಿಯ ಗಳಿಗೆ ಕಳೆಯಲು ಹೃದಯವುಳ್ಳ ಮನುಷ್ಯರು ಬೇಕು. ಕೋಮುವಾದಿ ಮೂಲಭೂತವಾದಿಗಳ ನಡುವಲ್ಲಿ ಮನುಷ್ಯರೇ ಮಾಯವಾಗುತ್ತಿರುವಾಗ ಬದುಕು ಸಾಗಿಸುವುದು ಹೇಗೆ?

ಕಳೆದ ತಿಂಗಳು ಹಳೆಯ ಗೆಳತಿ ನುಸ್ರತ್ ಬೇಗಂ ಮನೆಗೆ ಹೋಗಿದ್ದೆ. ನಮ್ಮೊಂದಿಗೆ ಚಳುವಳಿ ಮಾಡಿ ಪೋಲೀಸ್ ಸ್ಟೇಷನ್‌ಗೆ ಬಂದಾಗ ಅವಳ ಗಂಡ ರೊಟ್ಟಿ ಪಲ್ಯದ ತೋಷಾ ತಂದು ನಮಗೆ ಉಣಬಡಿಸಿದ್ದರು. ಬೂರ್ಖಾ ಹಾಕದ ಮೂರನೇ ಮಗಳು ಪಿಯು ಸೈನ್ಸ್ ಓದುತ್ತಿದ್ದಳು. ಅಂದು ನಾನು ಮನೆಗೆ ಹೋದಾಗ ಕಂಡದ್ದೇನು....!? ಮುಖ ಪೂರ್ತಿ ಬೂರ್ಖಾದಿಂದ ಮುಚ್ಚಿಕೊಂಡ ಮಗಳು 'ಆವ್ರೋ ಅಂಟಿ' ಅಂತ ಕರೆದು ಥಟ್ಟನೇ ಒಳ ಮನೆಗೆ ಹೋಗಿ ಖುರಾನ್ ಪಠಣದತ್ತ ಮಗ್ನಳಾದಳು. ನನಗೆ ಅಚ್ಚರಿ. ನುಪ್ರತ್ ಹೇಳಿದಳು. 'ಮಗಳು ಈಗ ಮದರಸಾಗೆ ಹೋಗಿ ಅರೆಬ್ಬಿ ಮತ್ತು ಖುರಾನ್‌ದ ಪಾಠ ಕಲಿಯುತ್ತಿರುವಳು. ಕಾಲೇಜು ಬಿಟ್ಟಿರುವಳು. ದುಬೈಯಲ್ಲಿರುವ ಅವಳಣ್ಣ, ತಂಗಿಯು ಧಾರ್ಮಿಕ ಶಿಕ್ಷಕಿಯಾಗಲೆಂದು ಅಲ್ಲಿಂದ ದ್ರಾಕ್ಷಿ, ಗೋಡಂಬಿ ಕಳಿಸುವನು. ಅವಳಿಗೂ ಅದೇ ಇಷ್ಟ ಎಂದು ನುಸ್ರತ್ ನಗುತ ಹೇಳಿ ಚಹಾ ಕಪ್ಪು ಕೈಗಿತ್ತಳು.

ಇದು ಸರಿಯೇ...? ಖಂಡಿತ ಆರೋಗ್ಯಕರ ಬೆಳವಣಿಗೆಯಲ್ಲ. ಈ ಹೊತ್ತಲ್ಲಿ ಅಲ್ಪಸಂಖ್ಯಾತ ಜನಸಮುದಾಯದ ನಡುವೆ ಹೃದಯ ಬೆಸುಗೆಯ ಭರವಸೆ ತುಂಬುವ ಜರೂರಿ ಇದೆ. ಅಂತೆಯೇ ಅಲ್ಪಸಂಖ್ಯಾತ ಪ್ರಜ್ಞಾವಂತರು ಸಹ ಮೂಲಭೂತವಾದದ ಅಪಾಯದ ಅರಿವು ಮೂಡಿಸಲು ಶ್ರಮಿಸಬೇಕಿದೆ.

ನುಸ್ರತ್ ಮಗಳನ್ನು ಇಸ್ಮಾಯಿಲ್‌ನನ್ನು ನಮ್ಮೊಳಗಿನ ನಿರ್ಮಲ ಸಂಬಂಧದಿಂದ ಪ್ರೇಮದ ಎದೆಯಂಗಳದಿಂದ ತಳ್ಳಿ ಹಾಕುವ ದುಷ್ಟ ಶಕ್ತಿಯನ್ನು ಹಿಮ್ಮೆಟ್ಟಿಸಲು ಮನಸು ಚಿಂತಿಸುತ್ತಿತ್ತು. ನಾನು ಇಸ್ಮಾಯಿಲ್ ಅವರ ಹೆಂಡತಿ ಹೀಗೆ ಯೋಚಿಸುತ ಫ್ಲಾಟ್‌ಫಾರಂ ಮೇಲೆ ಹೆಜ್ಜೆ ಹಾಕುತ್ತಿದ್ದೇವು. ಬೈ ಹೇಳುವಾಗ ನಮ್ಮ ಕಣ್ಣಲ್ಲಿ ಬತ್ತದ ಸ್ನೇಹದ ಬೆಳಕಿತ್ತು.

ಹ್ಹ...ಹ್ಹಾ...ಹ್ಹಾ...

ಅಳು ನಿಂತಿತು

ಸರಿ ರಾತ್ರಿ, ತಾಯಿ ಎಷ್ಟು ಸಮಾಧಾನ ಮಾಡಿದರೂ ಆ ಮಗು ಅಳು ನಿಲ್ಲಿಸಲಿಲ್ಲ. ಮುದ್ದು ಮಾಡಿದಳು, ಜೋ ಜೋ ಲಾಲಿ ಹಾಡಿದಳು, ರಮಿಸಿದಳು, ಗದರಿದಳು, ಊಹೂಂ.

ಸರಿ ಬೇರೆ ದಾರಿಯಿಲ್ಲದೆ, ಗೊಗ್ಗಯ್ಯ ಗುಮ್ಮ ಮುಂತಾದವರನ್ನು ಕರೆಯುವುದಾಗಿ ಬೆದರಿಸಿದಳು. ಊಹುಂ ಮಗು ಜಪ್ಪಯ್ಯ ಎನ್ನಲಿಲ್ಲ. ಅಳು ಮುಂದುವರೆಯಿತು.

ಅಷ್ಟಿಷ್ಟು ರಾಜಕೀಯ ತಿಳುವಳಿಕೆ ಇದ್ದ ಆ ತಾಯಿ ಯಾವುದಕ್ಕೂ ನೋಡೋಣ ಅಂತಾ 'ಸುಮ್ನೆ ನೀನು ಹೀಗೆ ಅಳ್ತಾ ಇದ್ರೆ ನರೇಂದ್ರ ಮೋದಿಯನ್ನು ಕರಿತೇನೆ' ಅಂದಳು. ಅಲ್ಲಿಗೆ ಅಳು ನಿಲ್ಲಿಸಿ ನಿದ್ರಿಸಲು ಶುರು ಮಾಡಿತು! ತಾಯಿಗೆ ಆಶ್ಚರ್ಯ! ಎಂದಿನಂತೆ ಮಗುವಿನ ಅಳು ಸಾವಕಾಶವಾಗಿ ಸಣ್ಣದಾಗುತ್ತಾ ನಿಲ್ಲದೆ ತತ್‌ಕ್ಷಣ ನಿಂತು ಹೋಗಿತ್ತು. ಏಕೆಂದು ಪರಿಶೀಲಿಸಿದ ಮೇಲೆ ತಾಯಿಗೆ ತಿಳಿಯಿತು. ಮಗು ಮಲಗಿರಲಿಲ್ಲ, ಮೂರ್ಛೆ ಹೋಗಿತ್ತು.

ಜನಶಕ್ತಿ ಕನ್ನಡ ವಾರಪತ್ರಿಕೆ

ಪಟ್ಟಭದ್ರರ ಕಪಿಮುಷ್ಠಿಯಲ್ಲಿ ನಡೆದ ಉನ್ನತ ಶಿಕ್ಷಣದ ವಿಚಾರಸಂಕಿರಣ

ಸಾಮಾಜಿಕ ಮೀಸಲಾತಿ ನೀತಿಯನ್ನೇ ವಿರೋಧಿಸಿದ ವಿಜ್ಞಾನಿಯೊಬ್ಬರು ಇಂದು ಜ್ಞಾನ ಆಯೋಗದ ಮುಖ್ಯಸ್ಥರಾಗಿದ್ದಾರೆ. ಕೆಲವೇ ಅನುಕೂಲಸ್ಥ, ಶ್ರೀಮಂತ ವಿಭಾಗದಲ್ಲಿರುವ ಪ್ರತಿಭಾನ್ವಿತರನ್ನು, ಜ್ಞಾನಿಗಳನ್ನು ಹುಡುಕಿ ಅವರಿಗೆ ಇನ್ನಷ್ಟು ತರಬೇತಿ ನೀಡುವ ನೀತಿಬೇಕು ಎನ್ನುತ್ತಿದೆ ಜ್ಞಾನ ಆಯೋಗ. ಶಿಕ್ಷಣದ ಸಾರ್ವತ್ರೀಕರಣ ಅದರ ಅಜೆಂಡಾದಲ್ಲೇ ಇಲ್ಲ. ಈ ವಿಚಾರ 'ತಮ್ಮದೇ' ಆಗಿರುವುದರಿಂದ ಆರ್‌ಎಸ್‌ಎಸ್‌ಗೆ ಈ ನೀತಿ ಬಗ್ಗೆ ವಿರೋಧವಿಲ್ಲ. ಬದಲಿಗೆ ಇದರ ಜಾರಿಗೆ ಟೊಂಕ ಕಟ್ಟಿ ನಿಂತಿದ್ದಾರೆ. ಈ ವಿವರ ನೋಡಿ.

ಹೆಸರಿಗೆ ಮಾತ್ರ "ರಾಷ್ಟ್ರೀಯ ಜ್ಞಾನ ಆಯೋಗ"ದ ಶಿಫಾರಸ್ಸುಗಳನ್ನು ಕುರಿತು ರಾಷ್ಟ್ರೀಯ ವಿಚಾರ ಸಂಕಿರಣ. ಆದರೆ ಸಂಘಟಕರು ಉನ್ನತ ಶಿಕ್ಷಣ ಇಲಾಖೆ. ಕರ್ನಾಟಕ ರಾಜ್ಯ ಸರ್ಕಾರ, ಬೆಂಗಳೂರು ವಿಶ್ವವಿದ್ಯಾಲಯ, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವ ವಿದ್ಯಾಲಯ ಹಾಗೂ ಆರ್.ಎಸ್.ಎಸ್.ನ ಸೆಂಟರ್ ಫಾರ್ ಎಜುಕೇಷನಲ್ ಅಂಡ್ ಸೋಷಿಯಲ್ ಸ್ಟಡೀಸ್ ಆಶ್ರಯದಲ್ಲಿ ಕಳೆದ ಸೆಪ್ಟೆಂಬರ್ 19, 20, 2007ರಂದು ಬೆಂಗಳೂರಿನಲ್ಲಿ ನಡೆದ ಈ ವಿಚಾರ ಸಂಕಿರಣ ಸಂಪೂರ್ಣವಾಗಿ ಮೂಲಭೂತವಾದಿಗಳ ಶಿಫಾರಸ್ಸುಗಳನ್ನು ಜಾರಿ ಮಾಡಿಸಲೆಂದು ಪೂರ್ವಯೋಜಿತ ಕಾರ್ಯಕ್ರಮ ಇದಾಗಿತ್ತು.

ರಾಜ್ಯದಲ್ಲಿ ಜೆಡಿ(ಎಸ್) ಮತ್ತು ಬಿಜೆಪಿ ಅಧಿಕಾರಕ್ಕೇರಿದ ತಕ್ಷಣದಲ್ಲೇ ಆರ್.ಎಸ್.ಎಸ್ ತನ್ನ ಎಲ್ಲಾ ಬಳಗದಲ್ಲಿರುವ (ಆರ್‌ಎಸ್‌ಎಸ್ ಮೂಲಕ ಅಧ್ಯಾಪಕ, ಉಪನ್ಯಾಸಕರು) ಶಿಕ್ಷಣದಲ್ಲಿ ಕೆಲಸ ನಿರ್ವಹಿಸುತ್ತಿರುವ ವಿಶ್ವ ವಿದ್ಯಾಲಯಗಳ ವಿ.ಸಿ.ಗಳು ಅಧ್ಯಾಪಕರು, ಪ್ರಾಧ್ಯಾಪಕರ ಸಭೆಯನ್ನು ಎಬಿವಿಪಿಯ ರಾಜ್ಯ ಕಛೇರಿಯಲ್ಲಿ ಸಭೆ ನಡೆಸಿ ಸಮಾಜವಿಜ್ಞಾನಕ್ಕೆ ಸಂಬಂಧಪಟ್ಟಂತೆ ಅದರಲ್ಲೂ ಇತಿಹಾಸದ ವಿಷಯಕ್ಕೆ ಸಂಬಂಧಿಸಿದಂತೆ ನಮ್ಮ ಮೂಲಭೂತವಾದಕ್ಕೆ ಧಕ್ಕೆಯಾಗದಂತೆ ರಕ್ಷಿಸುವುದು ಹೇಗೆ ಹಾಗೂ ಹೇರಲ್ಪಡುವುದು ಹೇಗೆಂಬ ಸಭೆಯನ್ನು ನಡೆಸಿ ಅಲ್ಲಿ ಹುಟ್ಟಿಕೊಂಡಿದ್ದೇ ಈ ಸೆಂಟರ್ ಫಾರ್ ಎಜುಕೇಷನಲ್ ಅಂಡ್ ಸೋಸಿಯಲ್ ಸ್ಟಡೀಸ್. ಈ ಸಂಘಟನೆಯ ಮುಖಾಂತರವೇ ಮೊನ್ನೆ ನಡೆದ ರಾಷ್ಟ್ರೀಯ ವಿಚಾರ ಸಂಕಿರಣ. ಸಂಘಪರಿವಾರದ ಹಿರಿಯ ತಲೆ ಉನ್ನತ ಶಿಕ್ಷಣ ಸಚಿವರಾಗಿದ್ದವರ ಬೆಂಬಲದಿಂದ ಕಾಲೇಜು ಉನ್ನತ ಶಿಕ್ಷಣ ಇಲಾಖೆ ಹಾಗೂ ಬೆಂಗಳೂರು ವಿಶ್ವವಿದ್ಯಾಲಯ ಹಾಗೂ ವಿಶ್ವೇಶ್ವರಯ್ಯ ತಾಂತ್ರಿಕ ವಿ.ವಿ.ಗಳಿಂದ ವರ್ಷಗಟ್ಟಲೆ ಹಣ ಹರಿದು ಸಂಘ ಪರಿವಾರಕ್ಕೆ ಬಂತು. ಪುಡಾರಿ ಎಬಿವಿಪಿ ಹುಡುಗರೇ ಈ ಕಾರ್ಯಕ್ರಮದ ಕಾರ್ಯಕರ್ತರಾಗಿ ನಡೆಸಿದ ಈ ವಿಚಾರ ಸಂಕಿರಣದಲ್ಲಿ ಕೇವಲ ಆರ್.ಎಸ್.ಎಸ್ ಬಳಗದವರಿಗೆ ಮಾತ್ರ ಪ್ರವೇಶ ಎಂಬಂತೆ ವಿಚಾರ ಸಂಕಿರಣ ನಡೆದೇಹೋಯಿತು.

ವಿಚಾರ ಸಂಕಿರಣದಲ್ಲಿ ಹೆಸರಾಂತ ಘಟಾನುಘಟಿಗಳೇ ಭಾಗವಹಿಸಿದ್ದರೂ ಪ್ರಸಕ್ತವಾಗಿ ಉನ್ನತ ಶಿಕ್ಷಣದ ಬಿಕ್ಕಟ್ಟಿನ ಬಗ್ಗೆ ಯಾರು ಪ್ರಸ್ತಾಪ ಮಾಡದೆ ಮರೆಮಾಚಿದ್ದೇ ಹೆಚ್ಚು. ರಾಜ್ಯ ಸರ್ಕಾರಗಳ ನಿರ್ಲಕ್ಷ್ಯದಿಂದ ಹಾಗೂ ಡಬ್ಲ್ಯುಟಿಒ, ಡಬ್ಲ್ಯು.ಬಿ, ಐಎಂಎಫ್ ಹಾಗೂ ಜಾಗತೀಕರಣ ನೀತಿಗಳಿಂದ ಸರ್ಕಾರಿ ವಿಶ್ವವಿದ್ಯಾಲಯಗಳು ಸೊರಗುತ್ತಿವೆ. ಖಾಸಗೀ ಕಾಲೇಜುಗಳು, ವಿ.ವಿ.ಗಳ ಆಗಮನದಿಂದ ಆಗುತ್ತಿರುವ ದುಷ್ಪ ಪರಿಣಾಮಗಳ ಬಗ್ಗೆಯೇ ಅರಿವಿಲ್ಲದಂತೆ ತಮ್ಮ ತಲೆಯಲ್ಲಿರುವ ಅವಾಸ್ತವ ಪರಿಸ್ಥಿತಿಯಲ್ಲೇ ತಮ್ಮ ತಮ್ಮ ಹುದ್ದೆಗಳ ಅಲಂಕಾರಗಳನ್ನು ಮಾತ್ರ ವ್ಯಕ್ತಪಡಿಸುತ್ತಿದ್ದರು. ಶಿಕ್ಷಕ, ಉಪನ್ಯಾಸಕರ ಕೊರತೆ ಅವರ ಪ್ರಜಾಸತ್ತಾತ್ಮಕ ಹಕ್ಕುಗಳ ಬಗ್ಗೆ ಚಕಾರವೆತ್ತದ ಪ್ರೊಫೆಸರುಗಳನ್ನು ಪ್ರಶ್ನೆ ಮಾಡಲು ಅವಕಾಶವನ್ನು ನಿರಾಕರಿಸಿ ಕೇವಲ ಆರ್.ಎಸ್.ಎಸ್.ನ ನೆಲೆಗಟ್ಟಿನಲ್ಲಿ ಮಾತ್ರ ವಿಚಾರ ಸಂಕಿರಣ ನಡೆಯುವಂತೆ ನೋಡಿಕೊಳ್ಳಲಾಗಿತ್ತು.

ಸರ್ಕಾರ ಹಾಗೂ ವಿಶ್ವವಿದ್ಯಾಲಯಗಳ ಹಣ, ಸಂಘ ಪರಿವಾರದ ಕಛೇರಿ ವಿಳಾಸಗಳಲ್ಲಿ ಆಹ್ವಾನ. ನಾವು ಜಾತ್ಯಾತೀತರು, ಬುದ್ಧಿಜೀವಿಗಳು, ಪ್ರಗತಿಪರರು ಎಂದೆಲ್ಲಾ ಟಿ.ವಿ, ಪತ್ರಿಕೆಗಳಲ್ಲಿ ಪೋಸು ಕೊಡುವ ಜೀವಿಗಳಿಗೆ ಇದು ನಡೆದದ್ದೇ ಗೊತ್ತಿಲ್ಲವೋ ಅಥವಾ ಮೌನ ಬೆಂಬಲವೋ ಗೊತ್ತಿಲ್ಲ. ಆದರೆ ಅವಕಾಶವಾದಿ ಪ್ರಗತಿಪರರೆಂದು ಗುರುತಿಸಿಕೊಂಡಿರುವ ಉಪನ್ಯಾಸಕರು ಕೂಡ ಆರ್.ಎಸ್.ಎಸ್ ವೇದಿಕೆಗಳಲ್ಲಿ ಆಸೀನರಾಗಿದ್ದು ನಾವು ಕೂಡ ಈ ಕಾರ್ಯಕ್ರಮದ 'ಯಶಸ್ಸಿಗೆ ಸಾಕ್ಷಿ' ಎಂದಾದರು.

ರಾಷ್ಟ್ರೀಯ ಜ್ಞಾನ ಆಯೋಗದ ಶಿಫಾರಸ್ಸುಗಳು ಆರ್‌ಎಸ್‌ಎಸ್‌ನ ತಲೆಯ ಐಡಿಯಾಗಳು

ಬಡತನದ ಬೇಗೆಯಲ್ಲೇ ಬೆಳೆದೆ ಎನ್ನುವ ರಾಷ್ಟ್ರೀಯ ಜ್ಞಾನ ಆಯೋಗದ ಅಧ್ಯಕ್ಷರಾದ ಸ್ಯಾಮ್ ಫಿಟ್ರೋಡಾ (sampitroda) ರವರ ಶಿಫಾರಸ್ಸುಗಳ ಪ್ರಮುಖ ತಿರುಳು, ಜಾಗತೀಕರಣದ ಹಿನ್ನೆಲೆಯಲ್ಲಿ ಬಹುರಾಷ್ಟ್ರೀಯ ಕಂಪನಿಗಳಿಗೆ ಯೋಗ್ಯರಾಗುವಂತಹ ಉದ್ಯೋಗಿಗಳನ್ನು ಸೃಷ್ಟಿಸುವುದು ಇದಕ್ಕೆ ಪೂರಕವಾಗಿ ಶಿಕ್ಷಣ ಪದ್ಧತಿಯನ್ನು ಬದಲಾಯಿಸುವುದು. ಅಂದರೆ ದೇಶೀಯ ಗ್ರಾಮೀಣ ಜನತೆಯ ಹಾಗೂ ನಮ್ಮ ಜನತೆಯ ನಿಜವಾದ ಅಗತ್ಯಗಳೇನೆಂಬುದನ್ನು ಸಂಪೂರ್ಣ ಮರೆತು ಪರದೇಶಿ ಬಹುರಾಷ್ಟ್ರೀಯ ಕಂಪನಿಗಳ ಲಾಭಕ್ಕೆ ಪೂರಕವಾಗಿ ಅತ್ಯುನ್ನತ ವಿಜ್ಞಾನ, ತಂತ್ರಜ್ಞಾನದ ಜಾಗತಿಕ ಮಟ್ಟಕ್ಕೆ ಪೂರಕವಾಗಿ ತರಬೇತುದಾರರನ್ನು ಸೃಷ್ಟಿಸುವುದು. ಇದಕ್ಕೆ ಜ್ಞಾನವನ್ನು 'ಅತಿಹೆಚ್ಚು'ಯಾರು ಹೊಂದಿದ್ದಾರೋ ಅವರು ಅರ್ಹರು. ಅದು ಹುಟ್ಟಿನಿಂದಲೇ ಬರುತ್ತದೆ. ಆ ಜ್ಞಾನ ಇರುವವರಿಗೆ ಇನ್ನಷ್ಟು ಸಕಲ ಸೌಕರ್ಯ ನೀಡಿ ಅಭಿವೃದ್ಧಿಪಡಿಸಿದರೆ ದೇಶ ಇನ್ನಷ್ಟು ಉನ್ನತಿ ಕಾಣುತ್ತದೆಂಬ ಉವಾಚ ಇಲ್ಲಿ ಪರೋಕ್ಷವಾಗಿ ಕೇಳಿ ಬಂತು. ಇದೇ ತಾನೆ ಆರ್.ಎಸ್.ಎಸ್‌ನ ಹಿಡನ್ ಅಜೆಂಡಾ (ರಹಸ್ಯ ಕಾರ್ಯ ಸೂಚಿ)

"ರಾಷ್ಟ್ರೀಯ ಜ್ಞಾನ ಆಯೋಗದ ಹಗಲ ಕನಸು"

ದೇಶದಲ್ಲಿ ಉನ್ನತ ಶಿಕ್ಷಣಕ್ಕೆ ಈಗ ಕೇವಲ ಶೇ.7 ಮಾತ್ರ ಯುವಜರು ಹೋಗುತ್ತಿದ್ದಾರೆ. ಈಗ ದೇಶದಲ್ಲಿ ಕೇವಲ 360 ವಿ.ವಿ.ಗಳು ಮಾತ್ರ ಇವೆ. ಮುಂದಿನ 2015ರಷ್ಟರಲ್ಲಿ ಉನ್ನತ ಶಿಕ್ಷಣದಲ್ಲಿ ಶೇ.15 ಹೆಚ್ಚಿಸಲು 1500 ವಿ.ವಿ.ಗಳನ್ನು ತೆರೆಯಬೇಕು. ಕನಿಷ್ಠ 50 ರಾಷ್ಟ್ರೀಯ ವಿ.ವಿ.ಗಳನ್ನು ತೆರೆಯಬೇಕು. ಇದಕ್ಕಾಗಿ ಖಾಸಗಿ ಸಹಬಾಗಿತ್ವಕ್ಕೆ ಅವಕಾಶ ಕಲ್ಪಿಸಬೇಕೆಂದು (ಶಿಕ್ಷಣ, ಖಾಸಗೀಕರಣ ಮಾಡಬೇಕು) ವಿಚಾರ ಸಂಕಿರಣದ ಸಂದರ್ಭದಲ್ಲಿ ಟೆಲಿಕಾನ್ಫರೆನ್ಸ್ ಮುಖಾಂತರ ಯು.ಎಸ್.ಎ. ಯಿಂದ ತನ್ನ ಅಧ್ಯಕ್ಷತೆಯಲ್ಲಿ ಶಿಫಾರಸ್ಸು ಮಾಡಿರುವ ರಾಷ್ಟ್ರೀಯ ಜ್ಞಾನ ಆಯೋಗದ ಶಿಫಾರಸ್ಸುಗಳ ಹಗಲಗನಸುಗಳನ್ನು ಮೆಲುಕು ಹಾಕುತ್ತಿದ್ದ ಶ್ಯಾಮ್ ಪಿತ್ರೋಡರವರಿಗೆ ದೇಶದಲ್ಲಿನ ಪ್ರಾಥಮಿಕ ಶಿಕ್ಷಣದಲ್ಲಿ ಉನ್ನತಿ ಕಾಣದೆ ಉನ್ನತ ಶಿಕ್ಷಣದಲ್ಲಿ ಉನ್ನತಿ ಹೇಗೆ ಸಾಧ್ಯ ಎಂಬ ಅರಿವು ಇರಲಿಲ್ಲ. ಶಿಕ್ಷಣ ಕಾಯಿದೆ 2005ನ್ನು ಮೂಲೆಗುಂಪು ಮಾಡಿರುವ ಯುಪಿಎ ಸರ್ಕಾರ, ಇವರ ಪರಮ ಆತ್ಮೀಯರೂ ಆದ ಸೋನಿಯಾ ಗಾಂಧಿಯವರ ಒಳಗುಟ್ಟು ಏನು? ಎಂದು ಇದರಿಂದಲೇ ತಿಳಿಯುತ್ತದೆ. ಉಳ್ಳವರಿಗೆ ಮಾತ್ರ ಶಿಕ್ಷಣ ಉನ್ನತ ಶಿಕ್ಷಣ ಮೀಸಲಾಗಿರುವುದರಿಂದ ಉಳ್ಳವರಿಗೆ ಮಾತ್ರ ತಾನೆ ಜ್ಞಾನ ಬರುವುದು. ಹೀಗಾಗಿಯೇ ಆರ್.ಎಸ್.ಎಸ್.ನವರು ರಾಷ್ಟ್ರೀಯ ಜ್ಞಾನ ಆಯೋಗ ಶಿಫಾರಸ್ಸುಗಳನ್ನು ಒಪ್ಪಿಕೊಳ್ಳುವುದು.


- ಬಿ.ರಾಜಶೇಖರಮೂರ್ತಿ

ಕರ್ನಾಟಕ ಪ್ರಾಂತ ರೈತ ಸಂಘಕ್ಕೆ 50 ರ ಸಂಭ್ರಮ

ಕರ್ನಾಟಕ ಪ್ರಾಂತ ರೈತ ಸಂಘವು ಕರ್ನಾಟಕದ ಮೊಟ್ಟ ಮೊದಲ ರೈತ ಸಂಘಟನೆಯಾಗಿದೆ. ಕರ್ನಾಟಕದ ರೈತರನ್ನು ಮತ್ತು ಕೃಷಿ ಕಾರ್ಮಿಕರನ್ನು ಮೊಟ್ಟ ಮೊದಲ ಬಾರಿಗೆ ಸಂಘಟಿಸಲು ಆರಂಭಿಸಿದ ಕೀರ್ತಿ ಕರ್ನಾಟಕ ಪ್ರಾಂತ ರೈತ ಸಂಘಕ್ಕೆ ಸಲ್ಲುತ್ತದೆ. ರಾಜ್ಯದ ಏಕೀಕರಣ ಆದ ಬಳಿಕ ನಮ್ಮ ರಾಜ್ಯವನ್ನು ಮೈಸೂರು ರಾಜ್ಯ ಎಂದೇ ಕರೆಯುತ್ತಿದ್ದಾಗ ನಮ್ಮ ರೈತ ಸಂಘಕ್ಕೆ ಕರ್ನಾಟಕ ಪ್ರಾಂತ ರೈತ ಸಂಘ ಎಂದು ನಾಮಕರಣ ಮಾಡಿದ ಹೆಗ್ಗಳಿಕೆಯೂ ಪ್ರಾಂತ ರೈತ ಸಂಘಕ್ಕೆ ಪ್ರಾಪ್ತವಾಯಿತು.


1936ರಲ್ಲಿ ಸ್ಥಾಪನೆಯಾಗಿದ್ದ ಅಖಿಲ ಭಾರತ ಕಿಸಾನ್ ಸಭಾದ ರಾಜ್ಯ ಘಟಕವಾಗಿರುವ ಕರ್ನಾಟಕ ಪ್ರಾಂತ ರೈತ ಸಂಘದ ಮೊದಲ ರಾಜ್ಯ ಮಟ್ಟದ ಸಮ್ಮೇಳನವು 1957ನೇ ಇಸವಿ ನವೆಂಬರ್ 16 ಮತ್ತು 17 ರಂದು ಬೆಂಗಳೂರಿನ ದೇವಾಂಗ ಸಂಘ ಛತ್ರದಲ್ಲಿ ನಡೆಯಿತು. ಈ ಮೊದಲು ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ನಡೆಯುತ್ತಿದ್ದ ರೈತ ಚಳುವಳಿಗಳಿಗೆ ಅಖಿಲ ಭಾರತ ಕಿಸಾನ್ ಸಭಾದ ಚಳುವಳಿಯೇ ಸ್ಫೂರ್ತಿಯಾಗಿತ್ತು.

ರಾಜ್ಯದ ಪ್ರಥಮ ರೈತ ಚಳುವಳಿಯ ಸುವರ್ಣ ಮಹೋತ್ಸವದ ವಿವಿಧ ಕಾರ್ಯಕ್ರಮಗಳ ಉದ್ಘಾಟನೆಯನ್ನು ಸೆಪ್ಟೆಂಬರ್ 19 ರಂದು ಬೆಂಗಳೂರಿನಲ್ಲಿ ನೆರವೇರಿಸಲಾಯಿತು. ದೇಶದ 2 ಕೋಟಿ 20 ಲಕ್ಷಕ್ಕೂ ಹೆಚ್ಚು ರೈತರ ಸದಸ್ಯತ್ವ ಹೊಂದಿರುವ ಅಖಿಲ ಭಾರತ ಕಿಸಾನ್ ಸಭಾದ ಅಧ್ಯಕ್ಷರಾದ ಎಸ್.ಆರ್.ಪಿಳ್ಳೈ ಅವರು ಸಮಾರಂಭವನ್ನು ಉದ್ಘಾಟಿಸಿದರು. ಕರ್ನಾಟಕ ಪ್ರಾಂತ ರೈತ ಸಂಘದ ಅಧ್ಯಕ್ಷರಾದ ಮಾರುತಿ ಮಾನ್ಪಡೆ ಅವರು ಅಧ್ಯಕ್ಷತೆ ವಹಿಸಿದ್ದರು.



ಗತಿಸಿದ ರೈತ ಮುಖಂಡರುಗಳ ಭಾವಚಿತ್ರ ಬಿಡುಗಡೆ

ಆರಂಭದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ಮುಖಂಡರಾದ ಕೆ.ಎನ್. ವೆಂಕಟಾಚಲಯ್ಯ ಸ್ವಾಗತಿಸಿದರು. ಪ್ರಧಾನ ಕಾರ್ಯದರ್ಶಿ ಜಿ.ಸಿ.ಬಯ್ಯಾರೆಡ್ಡಿ ಅವರು ಪ್ರಾಸ್ತಾವಿಕವಾಗಿ ಮಾತನಾಡಿ ಸಂಘದ ಸುವರ್ಣ ಮಹೋತ್ಸವದ ಅಂಗವಾಗಿ ರಾಜ್ಯದ ವಿವಿಧೆಡೆ ಹಮ್ಮಿಕೊಳ್ಳಲಾಗುವ ಕಾರ್ಯಕ್ರಮಗಳ ವಿವರಗಳನ್ನು ನೀಡಿದರು. ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಬಾಗೇಪಲ್ಲಿ ಕ್ಷೇತ್ರದ ಸಿಪಿಐ(ಎಂ) ಶಾಸಕರೂ ಆಗಿರುವ ಜಿ.ವಿ. ಶ್ರೀರಾಮರೆಡ್ಡಿ ಅವರು ಸಭೆಯನ್ನು ಉದ್ದೇಶಿಸಿ ಮಾತನಾಡಿದರು.



ಇದೇ ಸಂದರ್ಭದಲ್ಲಿ ಸಂಘದ ಮಾಜಿ ಅಧ್ಯಕ್ಷರಾದ ಹೆಚ್.ಮುಗುವಾಳಪ್ಪ, ಸ್ವಾತಂತ್ರ್ಯ ಹೋರಾಟಗಾರರೂ, ಮಲಪ್ರಭಾ ರೈತ ಹೋರಾಟದ ಮುಂದಾಳುಗಳಲ್ಲಿ ಒಬ್ಬರಾದ ಎಸ್.ಎಚ್.ಕಪ್ಪಣ್ಣನವರ ಹಾಗೂ ಸನ್ಯಾಸಿಯಾಗಿದ್ದು ರೈತ ಚಳುವಳಿಗೆ ಆಕರ್ಷಿತರಾಗಿ ಬಂದು ಈಗ, ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಅಧ್ಯಕ್ಷರಾದ ನಿತ್ಯಾನಂದಸ್ವಾಮಿ ಅವರನ್ನು ಸನ್ಮಾನಿಸಲಾಯಿತು. ಸನ್ಮಾನಿತರ ಪರವಾಗಿ ನಿತ್ಯಾನಂದಸ್ವಾಮಿ ಅವರು ಮಾತನಾಡಿದರು. ಕರ್ನಾಟಕ ಪ್ರಾಂತ ರೈತ ಸಂಘದ ಅಧ್ಯಕ್ಷರಾಗಿ ದುಡಿದು ನಿಧನರಾಗಿರುವ ಎ.ಕೃಷ್ಣಶೆಟ್ಟರು ಮತ್ತು ಎಂ.ಎನ್. ಉಗ್ರಪ್ಪ ಅವರ ಭಾವ ಚಿತ್ರಗಳನ್ನು ಬಿಡುಗಡೆ ಮಾಡಲಾಯಿತು.

ವರದಿ : ಎಂ.ಶ್ರೀನಿವಾಸ

ಲಜ್ಜೆಗೆಟ್ಟ ಬಿಜೆಪಿಯ ಎಡಬಿಡಂಗಿತನ ಮತ್ತು ಹಳಿ ತಪ್ಪುತ್ತಿರುವ ಯುಪಿಎ ಸರ್ಕಾರ

ಬಿಜೆಪಿ ಮತ್ತು ಸಂಘ ಪರಿವಾರವು ಸೇತುಸಮುದ್ರಂ ಯೋಜನೆಯನ್ನು ಧಾರ್ಮಿಕತೆಯ ಆಧಾರದಲ್ಲಿ ವಿರೋಧಿಸುತ್ತಿರುವುದು ಖಂಡನೀಯ. ತಾನು ಅಧಿಕಾರದಲ್ಲಿದ್ದಾಗ ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಕ್ರಮಜರುಗಿಸಿದ ಬಿಜೆಪಿ, ಕೋಮುವಾದಿ ರಾಜಕೀಯದ ಲಾಭಕ್ಕಾಗಿ ಈಗ ಯೋಜನೆಯನ್ನು ವಿರೋಧಿಸುತ್ತಿದೆ. ಜನತೆಯ ಗಂಭೀರ ಸಮಸ್ಯೆಗಳ ಬಗ್ಗೆ ಚಕಾರ ಎತ್ತದ ಬಿಜೆಪಿ, ಕೋಮು ವಿಭಜನೆಯ ಮೂಲಕ ರಾಜಕೀಯ ಲಾಭಗಳಿಸಲು ಲಜ್ಜೆಯಿಲ್ಲದೆ ಯತ್ನಿಸುತ್ತಿದ್ದು, ಧಾರ್ಮಿಕ ವಿಷಬೀಜ ಬಿತ್ತನೆಯ ಮೂಲಕ ಪ್ರತಿ ಸಲವೂ ದುರ್ಲಾಭಗಳಿಸಬಹುದೆಂದು ಎಣಿಸಿರುವುದು ಅದರ ಮೂರ್ಖತನವಷ್ಟೆ. ಯುಪಿಎ ಸರ್ಕಾರ ಇನ್ನಷ್ಟು ವಿಳಂಬವಿಲ್ಲದ ಯೋಜನೆಯನ್ನು ಅನುಷ್ಠಾನಗೊಳಿಸಬೇಕಾಗಿದೆ.

ಚಿಲ್ಲರೆ ವ್ಯಾಪಾರದಲ್ಲಿ ಎಫ್‌ಡಿಎ

ಈ ದೇಶದ ದುಡಿಯುವ ಜನತೆಯ ಆಶೋತ್ತರಗಳನ್ನು ಈಡೇರಿಸುವ ಸಾಮಾನ್ಯ ಕನಿಷ್ಠ ಕಾರ್ಯಕ್ರಮವನ್ನು ಸಂಪೂರ್ಣವಾಗಿ ಜಾರಿಗೊಳಿಸದ ಯುಪಿಎ ಸರ್ಕಾರ, ಚಿಲ್ಲರೆ ವ್ಯಾಪಾರ ಕ್ಷೇತ್ರಕ್ಕೆ ವಿದೇಶಿ ನೇರ ಬಂಡವಾಳ ಹೂಡಲು ಅನುಮತಿ ನೀಡುವುದಾಗಿ ಮತ್ತು ಭಾರತ-ಅಮೇರಿಕಾ ಜಂಟಿ ವಾಣಿಜ್ಯೋದ್ಯಮಿಗಳ ವೇದಿಕೆಯಲ್ಲಿ ಭರವಸೆ ನೀಡಿರುವಂತೆ ಹಣಕಾಸು ಕ್ಷೇತ್ರದಲ್ಲಿಯೂ ವಿದೇಶಿ ಬಂಡವಾಳ ಹೂಡಲು ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡುವುದನ್ನು ಮುಂದುವರೆಸಿದೆ.

ಹಣದುಬ್ಬರ

ಕಳೆದ ಎರಡು ವರ್ಷಗಳಲ್ಲೇ ಅತಿ ಕಡಿಮೆ ಹಣದುಬ್ಬರ ಇದೆಯೆಂದು ಸರ್ಕಾರ ಹೇಳಿಕೊಂಡರೂ ತರಕಾರಿ, ಖಾದ್ಯ ತೈಲ, ಗೋಧಿ, ಬೇಳೆ, ಇತ್ಯಾದಿಗಳ ಬೆಲೆಯೇರಿಕೆಯಲ್ಲಿ ಯಾವುದೇ ಇಳಿತ ಕಂಡುಬಂದಿಲ್ಲ. ಅತ್ಯವಶ್ಯ ಸರಕುಗಳನ್ನು ಅಪಾರಮಟ್ಟದಲ್ಲಿ ಸಂಗ್ರಹಣೆ ಮಾಡಿಕೊಳ್ಳುವುದನ್ನು ತಡೆಗಟ್ಟಲು ದೃಢ ಕ್ರಮಗಳನ್ನು ಕೈಗೊಳ್ಳುವಲ್ಲಿ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ. ಸಾರ್ವಜನಿಕ ಪಡಿತರ ವ್ಯವಸ್ಥೆಯನ್ನು ಬಲಗೊಳಿಸಲು ನಿರಾಕರಿಸುತ್ತಿರುವ ಸರ್ಕಾರದ ಕ್ರಮದಿಂದಾಗಿ ಬೆಲೆಯೇರಿಕೆಯಿಂದ ಜನತೆ ಸಂಕಷ್ಟಕ್ಕೆ ಸಿಲುಕಿದೆ.

ಗೋಧಿ ಆಮದು ಪ್ರಶ್ನೆ

ಗೋಧಿ ದಾಸ್ತಾನು ಮತ್ತು ಅದರ ಆಮದು ನಿರ್ವಹಣೆ ಕುರಿತಂತೆ ಉನ್ನತ ಮಟ್ಟದ ತನಿಖೆ ನಡೆಸಬೇಕಾಗಿದೆ. ಭಾರತದ ರೈತರ ಗೋಧಿಗೆ ಕ್ವಿಂಟಾಲ್‌ಗೆ ರೂ. 850/- ನೀಡುತ್ತಿರುವಾಗ ವಿದೇಶಿ ವ್ಯಾಪಾರಿಗಳಿಗೆ ರೂ. 1600/- ನೀಡುತ್ತಿರುವುದು ರೈತ-ವಿರೋಧಿ ನೀತಿಯಾಗಿದೆ. ಇದೇ ವೇಳೆಯಲ್ಲಿ, ಆರಂಭಿಕ ಟೆಂಡರ್‌ನಲ್ಲಿ ಕ್ವಿಂಟಾಲ್‌ಗೆ ರೂ. 10,520/- ಕ್ಕೆ ನಿಗಧಿಯಾಗಿದ್ದ ಗೋಧಿಯನ್ನು ರೂ. 15,578/- ನ್ನು ನೀಡಿ 13 ಲಕ್ಷ ಟನ್ ಗೋಧಿ ಆಮದು ಮಾಡಿಕೊಂಡಿರುವುದರಿಂದ ಸರ್ಕಾರದ ಬೊಕ್ಕಸಕ್ಕೆ ರೂ. 540 ಕೋಟಿ ನಷ್ಟವಾಗಿದೆ. ದೇಶದೊಳಗೆ ರೈತರಿಂದ ಗೋಧಿಯನ್ನು ಸರ್ಕಾರ ತಾನೇ ಖರೀದಿ ಮಾಡದೆ ವಿದೇಶಿ ಮತ್ತು ದೇಶೀಯ ಖಾಸಗಿ ಕಂಪನಿಗಳಿಗೆ ಬಿಟ್ಟಿರುವುದರಿಂದ ಸರ್ಕಾರ ಗೋಧಿಯನ್ನು ಆಮದು ಮಾಡಿಕೊಳ್ಳಬೇಕಾಗಿದೆ. ಗೋಧಿಯನ್ನು ಸರ್ಕಾರ ಆಮದು ಮಾಡಿಕೊಳ್ಳುತ್ತಿರುವುದು ಇದು ಸತತವಾಗಿ ಎರಡನೇ ವರ್ಷ. ಕೃಷಿ ಪರಿಕರಗಳ ಬೆಲೆಯೇರಿಕೆಯಿಂದ ಸಂಕಷ್ಟದಲ್ಲಿರುವ ಸಣ್ಣ ಮತ್ತು ಬಡ ರೈತರನ್ನು ರಕ್ಷಿಸಲು ಅವರಿಗೆ ಉತ್ತಮ ಬೆಲೆಯನ್ನು ನೀಡಬೇಕಾದದ್ದು ಸರ್ಕಾರದ ಕರ್ತವ್ಯ.

ಮತ್ತೆ ಹೆಚ್ಚುತ್ತಿರುವ ರೈತರ ಆತ್ಮಹತ್ಯೆಗಳು

ಹೆಚ್ಚುತ್ತಿರುವ ರೈತರ ಆತ್ಮಹತ್ಯೆಗಳ ಸಂಖ್ಯೆಯ ವಿಷಯ ಸರ್ಕಾರಕ್ಕೆ ಆದ್ಯತೆಯ ವಿಷಯವಾಗಬೇಕು. ಶೇ. 70ಕ್ಕೂ ರೈತಾಪಿಯು ಸಣ್ಣ ಮತ್ತು ಅತಿ ಸಣ್ಣ ರೈತರಾಗಿದ್ದು ಪ್ರಸಕ್ತ ಆರ್ಥಿಕ ನೀತಿಗಳ ದುಷ್ಪರಿಣಾಮಗಳಿಗೆ ಘಾಸಿಗೊಂಡಿದ್ದಾರೆ. ಸಾಲ ನೀಡಿಕೆ ಕುರಿತಂತೆ ಸರ್ಕಾರ ನೀಡುತ್ತಿರುವ ಅಂಕಿಅಂಶಗಳು ಮರೆಮಾಚುತ್ತಿದ್ದು, ಬಹುತೇಕ ರೈತರು ಅತೀವ ಬಡ್ಡಿ ಹಾಕುವ ಲೇವಾದೇವಿಗಾರರ ಮೇಲೆ ಇನ್ನೂ ಅವಲಂಬಿತರಾಗಿದ್ದಾರೆ. ರೈತರು ಹಾಳಾಗುತ್ತಿದ್ದು ಸರ್ಕಾರದ ಅವರನ್ನು ಅಚಿತರಾಷ್ಟ್ರೀಯ ಬೆಲೆಗಳ ಏರಿಳಿತಗಳಿಂದ ರಕ್ಷಿಸಿಲ್ಲದ ಕಾರಣ ಹಲವಾರು ಬೆಳೆಗಳಿಗೆ ಸರ್ಕಾರ ತುರ್ತಾಗಿ ಕನಿಷ್ಠ ಬೆಂಬಲ ಬೆಲೆ ನೀತಿ ಜಾರಿಗೆ ತರಬೇಕಿದೆ.

ಪಡಿತರ ಪಡಿಪಾಟಲು

ವಿಶಾಲ ಜನಸಮೂಹವನ್ನು ತನ್ನ ವ್ಯಾಪ್ತಿಯಿಂದ ಹೊರದಬ್ಬಿರುವ ಸಾರ್ವಜನಿಕ ಪಡಿತರ ವ್ಯವಸ್ಥೆಯು ಸಂಪೂರ್ಣವಾಗಿ ಕುಸಿದುಬಿದ್ದಿದೆ. ಅರ್ಜುನ್ ಸೆನ್‌ಗುಪ್ತ ಸಮಿತಿ ವರದಿಯ ಪ್ರಕಾರ ಭಾರತದ ಜನಸಂಖ್ಯೆಯ ಶೇ. 77ರಷ್ಟು ಮಂದಿ ದಿನಕ್ಕೆ ರೂ. 20ಕ್ಕಿಂತಲೂ ಕಡಿಮೆ ಆದಾಯ ಗಳಿಸುತ್ತಿದ್ದರೂ, ಸರ್ಕಾರ ತನ್ನ ತಪ್ಪು ವಿಧಾನದಿಂದ ಬಡತನವನ್ನು ತಿಂಗಳಿಗೆ 327ರೂ. ನ ಮಟ್ಟದಲ್ಲಿ ನಿಗಧಿಪಡಿಸಿದೆ. ಇದಕ್ಕಿಂತಲೂ ಹೆಚ್ಚು ಆದಾಯಗಳಿಸುವವರನ್ನು ಬಡತನ ರೇಖೆಗಿಂತ ಮೇಲಿರುವವರು (ಎಪಿಎಲ್) ಎಂದು ಪರಿಗಣಿಸಿದೆ. ಇಂಥಹ ಕ್ರೂರ ಕ್ರಮಗಳಿಂದಾಗಿ ಭಾರತ ವಿಶ್ವದಲ್ಲೇ ಅತಿ ಹೆಚ್ಚು ಪೌಷ್ಟಿಕತೆಯಿಂದ ನರಳುತ್ತಿರುವ ಜನಸಂಖ್ಯೆಯನ್ನು ಹೊಂದಿದೆ.

ಸಾಚಾರ್ ವರದಿಗೆ ತಾತ್ಸಾರ

ಸರ್ಕಾರ ಸಾಚಾರ್ ವರದಿಯನ್ನು ತುಂಬಾ ನಿಧಾನವಾಗಿ ಅನುಷ್ಠಾನಗೊಳಿಸುತ್ತಿದೆ. ಸಾಚಾರ್ ಗಿರಿಜನ ಉಪಯೋಜನೆಯಂತೆಯೇ ಅಲ್ಪಸಂಖ್ಯಾತ ಸಮುದಾಯಗಳಿಗಾಗಿ ಪ್ರತ್ಯೇಕ ಉಪಯೋಜನೆಯನ್ನು ಸರ್ಕಾರ ರೂಪಿಸಬೇಕಾಗಿದೆ. ಸಾಲ ನೀಡಿಕೆಯಲ್ಲಿ ಶೇ. 15ರಷ್ಟನ್ನು ಅಲ್ಪಸಂಖ್ಯಾತ ಸಮುದಾಯಗಳಿಗೆ ಮೀಸಲಿಡುವ ವಿಷಯದಲ್ಲಿ ಹಣಕಾಸು ಸಚಿವಾಲಯವು ಇನ್ನೂ ಮೀನ ಮೇಷ ಎಣಿಸುತ್ತಿದೆ.

ಅರಣ್ಯ ಕಾಯ್ದೆ ಜಾರಿಗೆ ಮೀನಮೇಷ

2006ರಲ್ಲಿ ಲೋಕಸಭೆಯಲ್ಲಿ ಅವಿರೋಧವಾಗಿ ಅನುಮೋದನೆಗೊಂಡ ಆದಿವಾಸಿಜನರ ಅರಣ್ಯ ಕಾಯಿದೆಯ ಅಧಿನಿಯಮಗಳನ್ನು ಸರ್ಕಾರ ಇನ್ನೂ ಜಾರಿಗೆ ತರದೆ ವಿಳಂಬ ಮಾಡುತ್ತಿರುವುದರಿಂದ ಸಾವಿರಾರು ಆದಿವಾಸಿ ಜನರನ್ನು ತಮ್ಮ ಭೂಮಿಯಿಂದ ಹೊರ ಹಾಕಲಾಗುತ್ತಿದೆ.

ಉದ್ಯೋಗ ಖಾತ್ರಿ

2008, ಏಪ್ರಿಲ್‌ವರೆಗೂ ಕಾಯದೆ ಯುಪಿಎ ಸರ್ಕಾರ ತಕ್ಷಣದಿಂದಲೇ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ರಾಷ್ಟ್ರಾದ್ಯಂತ ವಿಸ್ತರಿಸಬೇಕು. ಕಳೆದ ಬಜೆಟ್ಟಿನಿಂದ ಈ ಯೋಜನೆಯನ್ನು 130 ಜಿಲ್ಲೆಗಳಿಗೆ ವಿಸ್ತರಿಸಿದ್ದು ಅಂದರೆ ಶೇ. 65ರಷ್ಟು ಹೆಚ್ಚಿಸಿದ್ದರೂ ಅನುದಾನವನ್ನು ಮಾತ್ರ ಕೇವಲ ಶೇ. 6.19ರಷ್ಟು ಹೆಚ್ಚಿಸಲಾಗಿದೆ.

ಮಹಿಳಾ ಮೀಸಲಾತಿ ಮಸೂದೆಯನ್ನು ಲೋಕಸಭೆಯಲ್ಲಿ ಯುಪಿಎ ಸರ್ಕಾರ ಮಂಡಿಸಲು ಹಿಂಜರಿಯುತ್ತಿದ್ದರೆ, ಬಿಜೆಪಿ ಈಗಾಗಲೇ ತಾನು ಈ ಮಸೂದೆಯನ್ನು ಬೆಂಬಲಿಸುವುದಿಲ್ಲವೆಂದು ಘೋಷಿಸಿದೆ.

ಉದ್ಯಮಿಗಳೊಂದಿಗೆ ಶಾಮೀಲು

ಅಸಂಘಟಿತ ಕ್ಷೇತ್ರದ ಕಾರ್ಮಿಕರಿಗಾಗಿ ಲೋಕಸಭೆಯಲ್ಲಿ ಸರ್ಕಾರ ಮಂಡಿಸಿರುವ ಕರಡು ಮಸೂದೆಯಲ್ಲಿ ಕಾರ್ಮಿಕರಿಗೆ ಅತ್ಯವಶ್ಯವಾದ ಮೂಲಭೂತ ಬೇಡಿಕೆಗಳನ್ನು ಕೈಬಿಡಲಾಗಿದೆ. ಕೃಷಿ ಕಾರ್ಮಿಕರಿಗೆ ಪ್ರತ್ಯೇಕವಾದ ಮಸೂದೆಯನ್ನು ಮಂಡಿಸಬೇಕು. ಅರ್ಜುನ್ ಸೇನ್‌ಗುಪ್ತ ಸಮಿತಿ ವರದಿ, ಕಾರ್ಮಿಕ ಸಂಘಟನೆಗಳು, ಕೃಷಿ ಕಾರ್ಮಿಕರು

→



ರಾಷ್ಟ್ರೀಯ ನಿರುದ್ಯೋಗ ಭರವಸೆ ಯೋಜನೆ !!

ಜಿ.ಎಸ್.ಮಣಿ


ಕೇಂದ್ರದ ಯುಪಿಎ ಸರ್ಕಾರ ಒಂದು ಕನಿಷ್ಠ ಸಾಮಾನ್ಯ ಕಾರ್ಯಕ್ರಮದ ಮೇಲೆ ಅಧಿಕಾರಕ್ಕೆ ಬಂತು. ಅದರಲ್ಲಿ ರಾಷ್ಟ್ರೀಯ ಉದ್ಯೋಗ ಭರವಸೆ ಯೋಜನೆಯು ಬಂದಾಗ ಉದ್ಯೋಗವಿಲ್ಲದ ಕುಟುಂಬಗಳಲ್ಲಿ ಕನಿಷ್ಠ ಒಬ್ಬರಿಗಾದರೂ ವರ್ಷದಲ್ಲಿ ನೂರು ದಿನಗ ಉದ್ಯೋಗ ನೀಡುವ ಭರವಸೆಯನ್ನು ಒಂದು ಕಾನೂನಿನ ಮೂಲಕ ಯುಪಿಎ ಸರ್ಕಾರ ಸಂಸತ್ತಿನಲ್ಲಿ ಪಾಸು ಮಾಡಿತು. ಇದನ್ನು ಯುಪಿಎ ಸರ್ಕಾರ ತಾನಾಗಿ ಮಾಡಲಿಲ್ಲ. ಯುಪಿಎ ಸರ್ಕಾರಕ್ಕೆ ಬೆಂಬಲ ನೀಡುತ್ತಿರುವ ಎಡಪಕ್ಷಗಳು ತೀವ್ರತರವಾದ ಒತ್ತಡ ನೀಡಿದ ಮೇಲೆ ಈ ಯೋಜನೆಯನ್ನು ಜಾರಿಗೆ ತಂದಿತು.

ಯೋಜನೆ ಯಾವ ರೀತಿ ಅನುಷ್ಠಾನಕ್ಕೆ ಬಂದಿದೆ ಎಂಬುದನ್ನು ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರಕ್ಕೆ ಎಂತಹ ಜನ ಕಾಳಜಿ ಇದೆ ಎಂಬುದನ್ನು ಎತ್ತಿ ತೋರಿಸುತ್ತದೆ. 11,300 ಕೋಟಿ ರೂಪಾಯಿಗಳ ಬಜೆಟ್ ಇರುವ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಭರವಸೆ ಯೋಜನೆ ಎಂಬ ಹೆಸರಿನ ಈ ಯೋಜನೆಯನ್ನು ಯುಪಿಎ ಸರ್ಕಾರ ಕಾಟಾಚಾರಕ್ಕೆ ಅನುಷ್ಠಾನಗೊಳಿಸುತ್ತಿದೆ ಎಂಬುದು ಯಾರಿಗಾದರೂ ಗೊತ್ತಾಗುತ್ತದೆ. ಚುನಾವಣೆ ಹತ್ತಿರದಲ್ಲೇ ಇರಬಹುದೆಂಬ ಗುಮಾನಿಯ ಮೇಲೆ ಈ ಯೋಜನೆಯನ್ನು ಇಡೀ ರಾಷ್ಟ್ರಕ್ಕೆ ವ್ಯಾಪಿಸುವ ಮಾತನ್ನು ಸರ್ಕಾರ ಆಡುತ್ತಿದೆ ಎಂಬುದು ಬೇರೆ ಮಾತು.

ಒಂದು ಅಧ್ಯಯನದ ಪ್ರಕಾರ ಈ ಯೋಜನೆಯಡಿ ಗುರುತಿಸಲ್ಪಟ್ಟಿರುವ ಬರೀ ಶೇ. 6 ರಷ್ಟು ಕುಟುಂಬಗಳಿಗೆ ಮಾತ್ರ ಉದ್ಯೋಗ ನೀಡುವುದು ಸಾಧ್ಯವಾಗಿದೆಯಂತೆ.

ದೇಶದ ಹದಿನಾಲ್ಕು ರಾಜ್ಯಗಳು 21 ಜಿಲ್ಲೆಗಳಲ್ಲಿ ಸಮೀಕ್ಷೆ ನಡೆಸಿದ ಈ ಸಂಸ್ಥೆಯ ಪ್ರಕಾರ 14 ರಾಜ್ಯಗಳ ಪೈಕಿ ನಾಲ್ಕರಲ್ಲಿ ಅಂದರೆ ಬಿಹಾರ, ಗುಜರಾತ್, ಹರ್‍ಯಾಣ ಮತ್ತು ಒರಿಸ್ಸಾಗಳಲ್ಲಿ 'ರಾಜ್ಯ ಉದ್ಯೋಗ ಭರವಸೆ ಮಂಡಳಿಗಳನ್ನೇ ಸ್ಥಾಪಿಸಿಲ್ಲ. ಅಂದರೆ ಈ ಯೋಜನೆಯ ಸುದ್ದಿಯಲ್ಲಿ ಈ ರಾಜ್ಯಗಳಿಲ್ಲ ಇಲ್ಲ.

ಉಳಿದ ಹತ್ತು ರಾಜ್ಯಗಳಲ್ಲಿ ಗ್ರಾಮ ಪಂಚಾಯಿತಿಗಳಿಗೆ ಅನುಷ್ಠಾನದ ಜವಾಬ್ದಾರಿ ನೀಡಿದರೂ ಕಾರ್ಯ ಮತ್ತು ಹಣಕಾಸಿನ ವಿಕೇಂದ್ರೀಕರಣ ಆಗಿಲ್ಲ.



ಸಮೀಕ್ಷೆ ನಡೆಸಿದ 530 ಹಳ್ಳಿಗಳಲ್ಲಿ ಶೇ.45ರಷ್ಟು ಹಳ್ಳಿಗಳಲ್ಲಿ ಎರಡು ಕುಟುಂಬಗಳು ಉದ್ಯೋಗಕ್ಕಾಗಿ ನೋಂದಣಿಯನ್ನು ಮಾಡಿಸಿದ್ದವು. ಉಳಿದ ಶೇ.55 ರಷ್ಟು ಹಳ್ಳಿಗಳಲ್ಲಿ ಈ ನೋಂದಣಿಯನ್ನೇ ಮಾಡಿರಲಿಲ್ಲ.

ಯೋಜನೆಯ ಪ್ರಕಾರ ಈ ಕುಟುಂಬಗಳು ಉದ್ಯೋಗ ಕೇಳಿದ 15 ದಿನಗಳಲ್ಲಿ ಉದ್ಯೋಗ ನೀಡಬೇಕು. ಸಮೀಕ್ಷೆಯ ಪ್ರಕಾರ ಬರೀ ಶೇ.44 ಪ್ರಕರಣಗಳಲ್ಲಿ ಮಾತ್ರ 15 ದಿನಗಳಲ್ಲಿ ಉದ್ಯೋಗ ನೀಡಲಾಗಿತ್ತು.

ಹಾಗೆಯೇ ಯೋಜನೆಯ ಪ್ರಕಾರ ಈ ಕುಟುಂಬಗಳ ಕನಿಷ್ಠ ಒಬ್ಬರಿಗೆ ವರ್ಷದಲ್ಲಿ 100 ದಿನಗಳ ಉದ್ಯೋಗ ನೀಡಬೇಕು. ಬರೀ ಶೇ.6 ರಷ್ಟು ಪ್ರಕರಣಗಳಲ್ಲಿ ಮಾತ್ರ 100 ದಿನಗಳ ಉದ್ಯೋಗ ನೀಡಲಾಗಿತ್ತು.

ಉಳಿದ ಶೇ.94 ರಷ್ಟು ಪ್ರಕರಣಗಳಲ್ಲಿ 100 ದಿನಗಳ ಉದ್ಯೋಗವೂ ದೊರೆತಿರಲಿಲ್ಲ.

ಇನ್ನು ಮಾಡಿದ ಕೆಲಸಕ್ಕೆ ಪ್ರತಿಫಲ ಯೋಜನೆಯ ಪ್ರಕಾರ 15 ದಿನಗಳೊಳಗಾಗಿ ಸಂಬಳ ನೀಡಬೇಕು. ಆದರೆ ಶೇ.54 ನೋಂದಾಯಿತ ಪ್ರಕರಣಗಳಲ್ಲಿ ಸಂಬಳವನ್ನು ಕೆಲಸ ಮಾಡಿದ 15 ದಿನಗಳೊಳಗೆ ನೀಡಿರಲಿಲ್ಲ.

ಇವೆಲ್ಲವನ್ನು ನೋಡಿರುವ ಜನ ಈ ಯೋಜನೆಯಡಿ ಕೆಲಸ ಕೇಳುವುದನ್ನೇ ಬಿಟ್ಟು ಬೇರೆ ಉದ್ಯೋಗಗಳನ್ನು ಹುಡುಕಿಕೊಂಡು ಹೋಗುತ್ತಿದ್ದಾರೆ.

ಇದಲ್ಲವೇ ರಾಷ್ಟ್ರೀಯ ನಿರುದ್ಯೋಗ ಭರವಸೆ ಯೋಜನೆ?

◇

→

ಮತ್ತು ರೈತಾಪಿ ಸಂಘಟನೆಗಳ ಅಭಿಪ್ರಾಯಗಳನ್ನು ಗಣನೆಗೆ ತೆಗೆದುಕೊಂಡು ಈ ಕರಡು ಮಸೂದೆಯನ್ನು ಅಂತಿಮಗೊಳಿಸಬೇಕು.

ಇರಾನ್ ಅನಿಲ ಯೋಜನೆ ವಿಳಂಬ

ಕೃಷ್ಣಾ-ಗೋದಾವರಿ ಪ್ರದೇಶದಿಂದ ರಿಲಯನ್ಸ್ ಕಂಪನಿ ಪೂರೈಸುವ ಅನಿಲಕ್ಕೆ ಪ್ರತಿ ಯೂನಿಟ್‌ಗೆ ಅಸಲಿ ದರವಾದ 2.34 ಡಾಲರ್ ಬದಲು 4.2 ಡಾಲರ್ ನೀಡಲು ಕೇಂದ್ರ ಸರ್ಕಾರ ಒಪ್ಪಿಕೊಂಡಿರುವುದು, ತಾನು ಖಾಸಗಿ ಉದ್ಯಮಿಗಳೊಂದಿಗೆ ಷಾಮೀಲಾಗುತ್ತಿರುವುದನ್ನು ಇದು ಸ್ಪಷ್ಟಪಡಿಸುತ್ತದೆ. ಇದರಿಂದ ಸರ್ಕಾರಕ್ಕೆ ನಷ್ಟವಾಗುತ್ತದಲ್ಲದೆ ರಿಲಯನ್ಸ್ ಕಂಪನಿಗೆ ಅಗಾಧ ಲಾಭ ಲಭಿಸುತ್ತದೆ.

ಇರಾನ್ ಅನಿಲ ಕೊಳವೆ ಯೋಜನೆಗೆ ಸಂಬಂಧಿಸಿದಂತೆ ಭಾರತ ಸರ್ಕಾರ ಇರಾನ್ ಮತ್ತು ಪಾಕಿಸ್ತಾನಗಳೊಂದಿಗೆ ಮಾತುಕತೆಗೆ ಹಿಂಜರಿಯುತ್ತಿದ್ದು, ಭಾರತ-ಅಮೇರಿಕಾ ಪರಮಾಣು ಸಹಕಾರ ಒಪ್ಪಂದದ ನೆರಳು ಇದರ ಮೇಲೆ ಬಿದ್ದಂತೆ ಕಾಣುತ್ತಿದೆ. ಈ ಯೋಜನೆಯ ವಿಳಂಬಕ್ಕೆ ಸರ್ಕಾರ ಸ್ಪಷ್ಟನೆ ನೀಡಬೇಕು.

ಪರಮಾಣು ಒಪ್ಪಂದಕ್ಕೆ ಸಂಬಂಧಿಸಿದಂತೆ, ಯುಪಿಎ-ಎಡಪಕ್ಷಗಳ ಸಮಿತಿಯು ಹೈಡ್ ಕಾಯಿದೆ ಮತ್ತು ವಿದೇಶಾಂಗ ನೀತಿ ಮತ್ತು ಭದ್ರತೆ ಸಂಬಂಧಿಸಿದಂತೆ ಅದರ ಮೇಲುಂಟಾಗುವ ದುಷ್ಪರಿಣಾಮಗಳ ಕುರಿತು ಪರಿಶೀಲಿಸುತ್ತಿದೆ. ಈ ಹಿನ್ನೆಲೆಯಲ್ಲಿ ಯುಪಿಎ ಸರ್ಕಾರವು ಪರಮಾಣು ಒಪ್ಪಂದದ ಕುರಿತು ಚಳಿಗಾಲದ ಅಧಿವೇಶನದಲ್ಲಿ ಚರ್ಚೆ ನಡೆಸುವವರೆಗೂ ಜಾರಿಗೊಳಿಸಬಾರದೆಂದು ಸರ್ಕಾರಕ್ಕೆ ಎಚ್ಚರಿಸಲಾಗಿದೆ.

ಈ ಎಲ್ಲಾ ವಿಚಾರಗಳ ಕುರಿತು ಕೊಲ್ಕತ್ತಾದಲ್ಲಿ ಸೆಪ್ಟೆಂಬರ್ 29 ರಿಂದ ಅಕ್ಟೋಬರ್ 1 ರವರೆಗೆ ನಡೆದ ಸಿಪಿಐ(ಎಂ) ಕೇಂದ್ರ ಸಮಿತಿಯು ಗಂಭೀರವಾಗಿ ಚರ್ಚಿಸಿದ್ದು, ಕೇಂದ್ರ ಸರ್ಕಾರದ ಸೂಕ್ತ ಸ್ಪಂದನೆಗೆ ಒತ್ತಾಯಿಸಿದೆ.

ಜನವಿರೋಧಿ ನೀತಿಗಳ ವಿರುದ್ಧ ದೇಶವ್ಯಾಪಿ ಆಂದೋಲನಕ್ಕೆ 'ಸಿಐಟಿಯು' ನಿರ್ಧಾರ

ಕೇಂದ್ರದ ಯುಪಿಎ ಸರ್ಕಾರ ಅನುಸರಿಸುತ್ತಿರುವ ಜನವಿರೋಧಿ ದೇಶ ವಿರೋಧಿ ನೀತಿಗಳ ವಿರುದ್ಧ ದೇಶವ್ಯಾಪಿ ಆಂದೋಲನ ನಡೆಸಲು ಸೆಂಟರ್ ಆಫ್ ಟ್ರೇಡ್ ಯೂನಿಯನ್(ಸಿಐಟಿಯು) ತೀರ್ಮಾನಿಸಿದೆ.

ಅಕ್ಟೋಬರ್ 6 ರಿಂದ 8 ರವರೆಗೆ ನವದೆಹಲಿಯಲ್ಲಿ ನಡೆದ ಮೂರು ದಿನಗಳ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಹಲವಾರು ಪ್ರಮುಖ ಹೋರಾಟದ ಕಾರ್ಯಕ್ರಮಗಳನ್ನು ಕೈಗೊಂಡಿದೆ.

ಪ್ರಮುಖವಾಗಿ, ಕೇಂದ್ರ ಸರ್ಕಾರ ಅಮೇರಿಕಾದೊಂದಿಗೆ ಮಾಡಿಕೊಳ್ಳಲು ಹೊರಟಿರುವ ಅಣು ಒಪ್ಪಂದ ಕುರಿತು ಬೆಲೆ ಏರಿಕೆ ವಿರುದ್ಧ ಸೇತುಸಮುದ್ರಂ ಯೋಜನೆ ಜಾರಿಗಾಗಿ ಹಾಗೂ ಹರಿಯಾಣದ ಪಾಣಿಪತ್‌ನಲ್ಲಿ ಸಂಭವಿಸಿದ ಜವಳಿ ಕಾರ್ಖಾನೆ ಕಾರ್ಮಿಕರ ದುರಂತ ಸಾವಿಗೆ ಸಂಬಂಧಿಸಿದಂತೆ ನಿರ್ಣಯಗಳನ್ನು ಕೈಗೊಂಡಿದೆ.

ಹೋರಾಟ ಕಾರ್ಯಕ್ರಮ : ಈ ಕೆಳಕಂಡ ಬೇಡಿಕೆಗಳ ಆಧಾರದಲ್ಲಿ 2007 ಅಕ್ಟೋಬರ್ 22 ರಿಂದ 29 ರವರೆಗೆ 'ಪ್ರತಿಭಟನಾ ವಾರಾಚರಣೆ'

ಬೇಡಿಕೆಗಳು :

- ಭಾರತ ಅಮೇರಿಕಾ ಅಣು ಒಪ್ಪಂದವನ್ನು ಜಾರಿಗೊಳಿಸುವುದರ ವಿರುದ್ಧ.
- ಬೆಲೆ ಏರಿಕೆ ವಿರೋಧಿಸಿ ಮತ್ತು ಸಾರ್ವಜನಿಕ ವಿತರಣಾ ವ್ಯವಸ್ಥೆವನ್ನು ಬಲಪಡಿಸಲು ಒತ್ತಾಯಿಸಿ.
- ಚಿಲ್ಲರೆ ಮಾರಾಟದಲ್ಲಿ ವಿದೇಶಿ ನೇರ ಬಂಡವಾಳ ಹೂಡಿಕೆ ವಿರುದ್ಧ
- ವಿಶೇಷ ಆರ್ಥಿಕ ವಲಯ ಕಾನೂನು ಮತ್ತು ನಿಯಮಗಳ ಪರಾಮರ್ಶಿಸಲು ಒತ್ತಾಯಿಸಿ

ಅಕ್ಟೋಬರ್ 31 ಬೇಡಿಕೆ ದಿನಾಚರಣೆ, ಆಚರಿಸುವುದು ಅಲ್ಲದೆ ಸೇತು ಸಮುದ್ರಂ ಯೋಜನೆಯನ್ನು ಪೂರ್ಣಗೊಳಿಸಬೇಕೆಂದು ಒತ್ತಾಯಿಸಿ, ಪ್ರಧಾನಿ ಮನಮೋಹನ್‌ಸಿಂಗ್‌ಗೆ ಎಲ್ಲಾ ಯೂನಿಯನ್‌ಗಳಿಂದ ತಂತಿ ಸಂದೇಶ(ಟೆಲಿಗ್ರಾಫ್) ಕಳಿಸಲು ನಿರ್ಧಾರ


'ಎಲ್ಲರಿಗೂ ಶಿಕ್ಷಣಕ್ಕಾಗಿ' ಒಂದು ಕೋಟಿ ಸಹಿ ಸಂಗ್ರಹ

ಶಿಕ್ಷಣವನ್ನು ಸಾರ್ವತ್ರಿಕರಣ ಗೊಳಿಸಬೇಕು ಎಂಬ ಪ್ರಮುಖ ಬೇಡಿಕೆಯ ನಿಟ್ಟು 1 ಕೋಟಿ ಸಹಿ ಸಂಗ್ರಹವುಳ್ಳ ಮನವಿಯನ್ನು ರಾಷ್ಟ್ರಪತಿಗೆ ಇತ್ತೀಚೆಗೆ ಸಲ್ಲಿಸಲಾಗಿದೆ.

ದೇಶದ ಶಿಕ್ಷಕ ಸಮುದಾಯದ ಮಧ್ಯ ಅತ್ಯಂತ ಸಕ್ರಿಯವಾಗಿರುವ ಶಾಲಾ ಶಿಕ್ಷಕರ ಒಕ್ಕೂಟ (STFI) ಶಿಕ್ಷಣ ಕ್ಷೇತ್ರದ ಹತ್ತು ಪ್ರಮುಖ ಬೇಡಿಕೆಗಳನ್ನು ಈಡೇರಿಸಲು ಮಧ್ಯ ಪ್ರವೇಶಿಸಬೇಕೆಂದು ಕೋರಿ ರಾಷ್ಟ್ರಪತಿ ಪ್ರತಿಭಾ ಪಾಟೀಲ್ ಅವರಿಗೆ ಈ ಮನವಿ ನೀಡಿತು. ಅದಕ್ಕಾಗಿ ಸ್ಟೆಫಿ, 21 ರಾಜ್ಯಗಳಲ್ಲಿರುವ ಸುಮಾರು 20 ಲಕ್ಷ ತನ್ನ ಸದಸ್ಯರಿಂದ ಮತ್ತು ಸಾರ್ವಜನಿಕರಿಂದ 1 ಕೋಟಿ ಸಹಿ ಸಂಗ್ರಹ ಆಂದೋಲನವನ್ನು ವ್ಯವಸ್ಥೆ ಮಾಡಿತ್ತು.

ಒಟ್ಟು ರಾಷ್ಟ್ರೀಯ ಆದಾಯ (ಜಿಪಿಪಿ)ದಲ್ಲಿ ಶೇ.6 ರಷ್ಟು ಹಣವನ್ನು ಶಿಕ್ಷಣಕ್ಕೆ ಮೀಸಲಿಡಬೇಕು. ಶಿಕ್ಷಣ ಕ್ಷೇತ್ರದಲ್ಲಿ ವಿದೇಶಿ ನೇರ ಬಂಡವಾಳ ಹೂಡಿಕೆ ಅವಕಾಶ ನೀಡುವ ಪ್ರಯತ್ನ ಕೈ ಬಿಡಬೇಕು. ಗುತ್ತಿಗೆ ನೇಮಕಾತಿ ನಿಷೇಧ ಮಾಡಬೇಕು. ಶಿಕ್ಷಣದ ವ್ಯಾಪಾರೀಕರಣ, ಖಾಸಗೀಕರಣಕ್ಕೆ ನಿಯಂತ್ರಣ ಹೇರಬೇಕು. ನಿವೃತ್ತಿ ಯೋಜನೆಯ ಖಾಸಗೀಕರಣವನ್ನು ಕೈಬಿಡಬೇಕು ಮತ್ತು ಎಲ್ಲಾ ಸರ್ಕಾರಿ ನೌಕರರಿಗೆ ಮುಷ್ಕರದ ಹಕ್ಕನ್ನು ಖಾತ್ರಿಗೊಳಿಸಬೇಕು ಎಂಬ ಒತ್ತಾಯವನ್ನು ಈ ಸಂದರ್ಭದಲ್ಲಿ ಮಾಡಿ, ಮಾನ್ಯ ರಾಷ್ಟ್ರಾಧ್ಯಕ್ಷರು ಈ ವಿಷಯದಲ್ಲಿ ಮಧ್ಯ ಪ್ರವೇಶಿಸಬೇಕು ಎಂದು ವಿನಂತಿಸಿಕೊಂಡಿದೆ.

ರಾಷ್ಟ್ರಪತಿಗಳನ್ನು ಭೇಟಿ ಮಾಡಿದ ಈ ನಿಯೋಗದಲ್ಲಿ ಸಿಪಿಐ(ಎಂ) ಪಾಲಿಟ್‌ಬ್ಯೂರೋ ಸದಸ್ಯರು ಹಾಗೂ ರಾಜ್ಯ ಸಭಾ ಸದಸ್ಯರಾದ ಕಾಂ:ಸೀತಾರಾಂ ಯೆಚೂರಿ, ಶಾಲಾ ಶಿಕ್ಷಕರ ಒಕ್ಕೂಟದ ಅಧ್ಯಕ್ಷರಾದ ಕಾಂ: ಕಾರ್ತಿಕ್ ಮಂಡಲ್, ಪ್ರಧಾನ ಕಾರ್ಯದರ್ಶಿ ಕೆ.ರಾಜೇಂದ್ರನ್, ಸೇರಿದಂತೆ ವಿವಿಧ ರಾಜ್ಯಗಳ ಮುಖಂಡರು ಇದ್ದರು.




ಪರಮಾಣು ಇಂಧನ ಮತ್ತು ಅದರ ರೂಪಗಳು

ಪರಮಾಣು ಸ್ಥಾವರ ಮತ್ತು ಪರಮಾಣು ಬಾಂಬುಗಳ ಸ್ಫೋಟನೆಯಲ್ಲಿ ಜರುಗುವ ಕ್ರಿಯೆಗಳ ನಡುವೆ ಇರುವ ವ್ಯತ್ಯಾಸವೆಂದರೆ ಪರಮಾಣು ಸ್ಥಾವರಗಳಲ್ಲಿ ಪರಮಾಣು ಸರಣಿ ಕ್ರಿಯೆಗಳು ಮಾನವ ನಿಯಂತ್ರಣದಲ್ಲಿ, ಒಂದು ನಿರ್ದಿಷ್ಟ ಗತಿಯಲ್ಲಿ ಜರುಗುವಂತೆ ಮಾಡಲಾಗುತ್ತದೆ. ಆದರೆ ಪರಮಾಣುಬಾಂಬು ಸ್ಫೋಟನೆಯಲ್ಲಿ ಇಂಥಹುದೇ ಸರಣಿ ಕ್ರಿಯೆಗಳು ಯಾವುದೇ ನಿಯಂತ್ರಣವಿಲ್ಲದೆ ಜರುಗುತ್ತವೆ.

ಯಾವ ವಸ್ತುವಿನಿಂದ ಪರಮಾಣು ಶಕ್ತಿಯನ್ನು ಪಡೆಯಬಹುದೋ ಅಂಥಹುದಕ್ಕೆ ಪರಮಾಣು ಇಂಧನ ಎಂದು ಕರೆಯುತ್ತಾರೆ. ಸ್ವಭಾವತ: ಭಾರವಾದ ವಿದಳನ ವಸ್ತುಗಳು ಪರಮಾಣು ಸ್ಥಾವರಗಳಲ್ಲಿ ಸರಣಿ ಪರಮಾಣು ಕ್ರಿಯೆಗೆ ಒಳಗಾಗುವ ಅಂದರೆ ವಿದಳನ ಸಾಮರ್ಥ್ಯವನ್ನು ಹೊಂದಿರುತ್ತವೆ. ಸಾಮಾನ್ಯವಾಗಿ ಇಂಥಹ ಭಾರವಾದ ವಿದಳನ ವಸ್ತುಗಳನ್ನು ಪರಮಾಣು ಇಂಧನವನ್ನಾಗಿ ಬಳಸಲಾಗುತ್ತದೆ. ಸಾಮಾನ್ಯವಾಗಿ ಬಳಸುವ ಪರಮಾಣ ಇಂಧನಗಳೆಂದರೆ ಯುರೇನಿಯಂ-235, ಯುರೇನಿಯಂ-233 ಮತ್ತು ಪ್ಲುಟೋನಿಯಂ-239. ಇಂಥಹ ಇಂಧನಗಳ ಗಣಿಗಾರಿಕೆ, ಸಂಸ್ಕರಣೆ, ಶುದ್ಧೀಕರಣ, ಬಳಕೆ ಮತ್ತು ಅಂತಿಮವಾಗಿ ಅದನ್ನು ಬಳಸಿದ ನಂತರ ಅದರ ಪುನರ್-ಸಂಸ್ಕರಣೆ ಮಾಡುವುದು, ತ್ಯಾಜ್ಯ ವಸ್ತುವನ್ನಾಗಿ ಬಿಸಾಡುವುದು - ಈ ಎಲ್ಲ ಹಂತಗಳನ್ನು ಪರಮಾಣು ಇಂಧನ ಆವರ್ತ (ನ್ಯೂಕ್ಲಿಯರ್ ಫ್ಯುಯಲ್ ಸೈಕಲ್) ಎಂದು ಕರೆಯಲಾಗುತ್ತದೆ.

ತಾವೇ ಸ್ವತ: ವಿದಳನ ಸಾಮರ್ಥ್ಯ



ಹೊಂದಿಲ್ಲದಿರುವ, ಆದರೆ ನ್ಯೂಟ್ರಾನನ್ನು ಹೀರಿಕೊಂಡ ನಂತರ ವಿದಳನ ಸಾಮರ್ಥ್ಯ ಹೊಂದಿರುವ ವಸ್ತುವಾಗಿ ಪರಿವರ್ತನೆಗೊಳ್ಳುವ ವಿಕಿರಣ ವಸ್ತುಗಳನ್ನು ಫಲಭರಿತ (ಫರ್ಟೈಲ್) ವಸ್ತುವೆಂದು ಕರೆಯಲಾಗುತ್ತದೆ. ನಿಸರ್ಗದಲ್ಲಿ ದೊರೆಯುವ, ವಿದಳನ ವಸ್ತುವಾಗಿ ಪರಿವರ್ತನೆಯಾಗಬಲ್ಲ ಇಂಥಹ ಫಲಭರಿತ ವಸ್ತುಗಳೆಂದರೆ: ಥೋರಿಯಂ-232 - ಇದು ಫಲಭರಿತ ವಸ್ತುವಾಗಿದ್ದು, ಇದನ್ನು ವಿದಳನ ಸಾಮರ್ಥ್ಯವುಳ್ಳ ಯುರೇನಿಯಂ-233 ಆಗಿ ಪರಿವರ್ತಿಸಬಹುದು. ಫಲಭರಿತ ಯುರೇನಿಯಂ-234ನ್ನು ಯುರೇನಿಯಂ-235 ಆಗಿ ಪರಿವರ್ತಿಸಬಹುದು. ಯುರೇನಿಯಂ-238ನ್ನು ವಿದಳನ ಸಾಮರ್ಥ್ಯವುಳ್ಳ ಪ್ಲುಟೋನಿಯಂ-239 ಆಗಿ ಪರಿವರ್ತಿಸಬಹುದು. ಮಾನವ ನಿರ್ಮಿತ ಪರಮಾಣು ಸ್ಥಾವರಗಳ ಪ್ರಕ್ರಿಯೆಯಲ್ಲಿ ಉತ್ಪತ್ತಿಯಾಗುವ ಫಲಭರಿತ ವಸ್ತುಗಳೆಂದರೆ: ಪ್ಲುಟೋನಿಯಂ-238, ಇದನ್ನು ಪ್ಲುಟೋನಿಯಂ-239 ಆಗಿ ಪರಿವರ್ತಿಸಲಾಗುತ್ತದೆ. ಪ್ಲುಟೋನಿಯಂ -240 ನ್ನು ಪ್ಲುಟೋನಿಯಂ-241 ಆಗಿ ಪರಿವರ್ತಿಸುತ್ತಾರೆ.

ಉಷ್ಣ ಪರಮಾಣು ಸ್ಥಾವರಗಳಲ್ಲಿ ಸಂಸ್ಕರಿಸಿ ಹೆಚ್ಚಿನ ಸಾಂದ್ರತೆಯಿಂದ ಕೂಡಿರುವ ಯುರೇನಿಯಂನ್ನು ಇಂಧನವಾಗಿ ಬಳಸಲಾಗುತ್ತದೆ. ಕೆಲವು ಪರಮಾಣು ಸ್ಥಾವರಗಳಲ್ಲಿ ಪ್ಲುಟೋನಿಯಂ ಮತ್ತು ಯುರೇನಿಯಂ ಮಿಶ್ರಣವನ್ನು ಇಂಧನವಾಗಿ ಬಳಸಲಾಗುತ್ತದೆ. ನಿಸರ್ಗದಲ್ಲಿ ದೊರೆಯುವ ಯುರೇನಿಯಂ ನಿಕ್ಷೇಪದಲ್ಲಿ ಶೇ. 1ರಷ್ಟು ಮಾತ್ರವೇ



ಯುರೇನಿಯಂ-235 ಐಸೋಟೋಪು. ಉಳಿದದ್ದೆಲ್ಲ ವಿದಳನವಲ್ಲದ, ಆದರೆ ಫಲಭರಿತ ಯುರೇನಿಯಂ ರೂಪದ್ದು. ಆದ್ದರಿಂದ ಕಡಿಮೆ ಪ್ರಮಾಣದಲ್ಲಿರುವ ಯುರೇನಿಯಂ-235ನ್ನು ನಿಕ್ಷೇಪದಿಂದ ಬೇರ್ಪಡಿಸಿ, ಸಂಸ್ಕರಿಸಿ ಯುರೇನಿಯಂ ಆಕ್ಸೈಡ್ ರೂಪದಲ್ಲಿ ಪೆಲೆಟ್‌ಗಳನ್ನಾಗಿ ಪರಿವರ್ತಿಸಲಾಗುತ್ತದೆ. ಇಂಥಹ ಪೆಲೆಟ್‌ಗಳನ್ನು ಟ್ಯೂಬುಗಳ ಒಳತೂರಿಸಿ ಸೀಲ್ ಮಾಡಲಾಗುತ್ತದೆ. ಇದನ್ನು ಫ್ಯುಯಲ್ ರಾಡ್ ಎಂದು ಕರೆಯಲಾಗುತ್ತದೆ. ನಂತರ ಫ್ಯುಯಲ್ ರಾಡುಗಳನ್ನು ಪರಮಾಣು ಸ್ಥಾವರಗಳಲ್ಲಿ ಇಂಧನವಾಗಿ ಬಳಸಲಾಗುತ್ತದೆ.

ಜಗದಗಲ

ಬಾಲಕೃಷ್ಣ ಶೆಟ್ಟಿ

ಅಮೆರಿಕಾದ ಮಿತ್ರರು ಪರಾರಿ?

ಇರಾಕಿನಲ್ಲಿ ಅಮೇರಿಕಾ ಕೈ ಸುಟ್ಟು ಕೊಳ್ಳುತ್ತಿದೆ. ಇದು ಇನ್ನೊಂದು ವಿಯಟ್ನಾಂ ಆಗಲಿದೆ ಎಂದು ಮಿಲಿಟರಿ ತಜ್ಞರು ಅಂದಾಜಿಸಿದ್ದಾರೆ. ಅಂದರೆ ಅಮೇರಿಕಾ ಸೋಲಿನತ್ತ ಸಾಗುತ್ತಿದೆ. ಇರಾಕಿನಲ್ಲಿ ಅಮೇರಿಕಾದ ನಿಯಂತ್ರಣದಲ್ಲಿರುವ ಮಿಲಿಟರಿ ಪಡೆಗಳ ಪರಿಸ್ಥಿತಿ ದಿನೇ ದಿನೇ ಹದಗೆಡುತ್ತಿದೆ.

2003ರ ಮಾರ್ಚಿನಿಂದ ಈವರೆಗೆ ಅಮೇರಿಕಾದ 3823 ಸೈನಿಕರು ಸತ್ತಿದ್ದಾರೆ ಎಂದು ಪತ್ರಿಕೆಯೊಂದು ತಿಳಿಸಿದೆ. ಮಿತ್ರಪಡೆಗಳ ಸೈನಿಕರೂ ಸಾಯುತ್ತಿದ್ದಾರೆ. ಇಂಗ್ಲೆಂಡ್ 170, ಇಟಲಿ 33, ಪೋಲೆಂಡ್ 31 ....ಹೀಗೆ. ಈ ಉಸಾಬರಿ ಬೇಡವೆಂದು ಮಿತ್ರ ದೇಶಗಳು ತಮ್ಮ ಪಡೆಗಳನ್ನು ಹಿಂದಕ್ಕೆ ತೆಗೆದುಕೊಳ್ಳುತ್ತಿವೆ. (2003ರಲ್ಲಿ ವಾಜಪೇಯಿ ಸರ್ಕಾರ 17000 ಸೈನಿಕ ಪಡೆಗಳನ್ನು ಇರಾಕಿಗೆ ಕಳುಹಿಸಬೇಕೆಂದು ತುದಿಗಾಲಲ್ಲಿ ನಿಂತುಕೊಂಡಿತ್ತು ಎಂಬುದನ್ನು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳಬೇಕು.)

ಯುದ್ಧ ಆರಂಭವಾಗುವ ಹೊತ್ತಿಗೆ ಇರಾಕಿನಲ್ಲಿ 4 ದೇಶಗಳ 2,40,194 ಸೈನಿಕರು ಇದ್ದರು. ಅದರಲ್ಲಿ ಅಮೇರಿಕಾದ ಪಾಲು 1,92,000, ಇಂಗ್ಲೆಂಡ್ 46,000, ಆಸ್ಟ್ರೇಲಿಯಾ 2,000 ಮತ್ತು ಪೋಲೆಂಡ್ 194. ನಂತರ ಮೇ 2003 ರಷ್ಟರಲ್ಲಿ ಇತರೆ 36 ದೇಶಗಳ 10,000 ಸೈನಿಕರ ಪಡೆಗಳು ಸೇರಿಕೊಂಡವು. ನಂತರ ಇದು 16,560ಕ್ಕೆ ಏರಿತು. ಆ ಸಂದರ್ಭದಲ್ಲಿ ಅಮೇರಿಕಾ ತನ್ನ ಪಡೆಯನ್ನು 72,000 ದಷ್ಟು ಹಾಗೂ ಇಂಗ್ಲೀಷ್ 35000 ದಷ್ಟು ಕುಗ್ಗಿಸಿತು.

ಕಾಲ ಕಳೆದಂತೆ, ಆಯಾ ದೇಶಗಳಲ್ಲಿ ಜನರ



ಪ್ರತಿಭಟನೆ ತೀವ್ರ ಗೊಳ್ಳುತ್ತಿದ್ದಂತೆ. ಜಪಾನ್ ಸೇರಿದಂತೆ 16 ದೇಶಗಳು ಸಂಪೂರ್ಣವಾಗಿ ತಮ್ಮ ಪಡೆಗಳನ್ನು ಹಿಂತೆಗೆದುಕೊಂಡವು. ಇಂಗ್ಲೆಂಡಿನ ಸೈನಿಕರ ಪಡೆ ಕೂಡಾ ತೀವ್ರವಾಗಿ ಕಡಿತಗೊಂಡು 5000 ಸೈನಿಕರು ಮಾತ್ರ ಇಂದು ಇರಾಕಿನಲ್ಲಿದ್ದಾರೆ. ಇತರೆ 20 ದೇಶಗಳಿಗೆ ಸೇರಿದ 6450 ಸೈನಿಕರು ಮಾತ್ರ ಅಲ್ಲಿದ್ದಾರೆ. ಆದ್ದರಿಂದ ಅಮೇರಿಕಾ ತನ್ನ ಸೇನಾಬಲವನ್ನು ಹೆಚ್ಚಿಸಬೇಕಾಯಿತು. ಅಕ್ಟೋಬರ್ ತಿಂಗಳಲ್ಲಿ ಅಮೇರಿಕಾದ 1,68,000 ಸೈನಿಕರು ಇರಾಕಿನಲ್ಲಿದ್ದಾರೆ.

ಅಮೇರಿಕಾದ ಅತ್ಯಂತ ಆಪ್ತ ಮಿತ್ರ ನೆನಸಿಕೊಂಡ ಇಂಗ್ಲೆಂಡ್‌ನ ಪ್ರಧಾನಿ ಟೋನಿಬ್ಲೇರ್ ಯುದ್ಧ ವಿರೋಧಿ ಪ್ರತಿಭಟನೆ ತೀವ್ರಗೊಳ್ಳುತ್ತಿದ್ದಂತೆ ರಾಜೀನಾಮೆ ನೀಡಬೇಕಾಯಿತು. ಇಂದಿನ ಸರ್ಕಾರ ಇನ್ನೊಂದು ವರ್ಷದೊಳಗೆ ಸಂಪೂರ್ಣ ಮಿಲಿಟರಿಯನ್ನು ಹಿಂದಕ್ಕೆ ಪಡೆಯಬೇಕು ಎಂದು ಬಯಸಿದೆ.

ಆಪ್ತ ಮಿತ್ರರೆಲ್ಲ ಅಮೇರಿಕಾದ ಕೈ ಬಿಡುತ್ತಿರುವಾಗ ಅಣು ಒಪ್ಪಂದ ಕುರಿತಾಗಿ ಮನಮೋಹನ್ ಸಿಂಗ್‌ರವರು ಅಮೇರಿಕಾದ ಆಪ್ತನಾಗಬಯಸುವುದು ಎಷ್ಟು ಸರಿ?

ಸಾರ್ವಜನಿಕ ಕ್ಷೇತ್ರದ ಕಾರ್ಮಿಕರ ಚಳುವಳಿ ಬಲಪಡಿಸುವುದರತ್ತ ಒಂದು ಕಾರ್ಯಾಗಾರ

ಭಾರತದ ಆರ್ಥಿಕತೆಯ ಬೆನ್ನೆಲುಬು, ಕಾಮಧೇನು ಎಂದೆಲ್ಲಾ ಗುರುತಿಸಲ್ಪಡುತ್ತಿದ್ದ ಸಾರ್ವಜನಿಕ ವಲಯದ ಉದ್ದಿಮೆ ಉಳಿಸಿಕೊಳ್ಳಲು ಹೋರಾಟ ಅನಿವಾರ್ಯವಾಗಿದೆ. ದೇಶದ ಸ್ವಾವಲಂಬನೆ, ಸಾರ್ವಭೌಮತ್ವದ ಅಡಿಪಾಯವಾಗಿರುವ ಈ ಉದ್ದಿಮೆಗಳು ವಿಶೇಷವಾಗಿ ನೆಲೆಗೊಂಡಿರುವುದು ಬೆಂಗಳೂರಿನಲ್ಲಿ.

ಕರ್ನಾಟಕದ ಸಾರ್ವಜನಿಕ ಕ್ಷೇತ್ರದಲ್ಲಿ ಸಿಐಟಿಯುವನ್ನು ಬಲಪಡಿಸುವ ಭಾಗವಾಗಿ ಬೆಂಗಳೂರಿನಲ್ಲಿ ಸಂಘಟಿಸಲಾಗಿದ್ದ 'ಸಾರ್ವಜನಿಕ ಕ್ಷೇತ್ರದ ಕಾರ್ಮಿಕ ಸಂಘಗಳ' ಸಂಘಟನಾ ಕಾರ್ಯಾಗಾರ ಯಶಸ್ವಿಯಾಗಿ ಜರುಗಿತು. ಸೆಪ್ಟೆಂಬರ್ 30 ರಂದು ಬೆಂಗಳೂರಿನ ಭಾರತ್ ಎಲೆಕ್ಟ್ರಾನಿಕ್ಸ್ ವರ್ಕರ್ಸ್ ಯೂನಿಯನ್ ಕಛೇರಿಯಲ್ಲಿ ನಡೆದ ಈ ಕಾರ್ಯಾಗಾರದಲ್ಲಿ ಸಾರ್ವಜನಿಕ ವಲಯದ ಬಿ.ಇ.ಎಲ್. ಬಿಹೆಚ್‌ಇಎಲ್, ಬಿಇಎಂಎಲ್ (ಕೆಜಿಎಫ್, ಮೈಸೂರು) ವಿಐಎಸ್‌ಎಲ್(ಭದ್ರಾವತಿ) ಹಟ್ಟಿ ಚಿನ್ನದ ಗಣಿ (ರಾಯಚೂರು), ಹಿಂದೂಸ್ಥಾನ ಲೆಟೆಕ್ಸ್ (ಬೆಳಗಾವಿ) ಹಾಗೂ ಬಿಎಸ್‌ಎನ್‌ಎಲ್ ನೌಕರರ ಸಂಘಗಳು ಮತ್ತು ಗುತ್ತಿಗೆ ಕಾರ್ಮಿಕ ಸಂಘಗಳ 50 ಕ್ಕಿಂತ ಅಧಿಕ ಕಾರ್ಮಿಕ ಮುಖಂಡರು ಭಾಗವಹಿಸಿದ್ದರು.

ಕಾರ್ಯಾಗಾರವನ್ನು ಸಿಐಟಿಯು ಅಖಿಲ ಭಾರತ ಕಾರ್ಯದರ್ಶಿಗಳು ಹಾಗೂ ಸಂಸತ್ ಸದಸ್ಯರಾದ ಕಾಂ:ತಪನ್‌ಸೇನ್ ಉದ್ಘಾಟಿಸಿದರು. 1991 ರಂದು ಸಿಐಟಿಯು ಮುತುವರ್ಜಿ ವಹಿಸಿದ್ದರಿಂದಲೇ 'ಕಾರ್ಮಿಕ ಸಂಘಗಳ ಪ್ರಾಯೋಜಕ ಸಮಿತಿ' ರಚನೆ ಮಾಡಿದ್ದನ್ನು ಮತ್ತು 6 ಸಮಿತಿಯ ನೇತೃತ್ವದಲ್ಲೇ, ಕಳೆದ 15 ವರ್ಷಗಳಲ್ಲಿ 11 ದೇಶವ್ಯಾಪಿ ಸಾರ್ವತ್ರಿಕ ಮುಷ್ಕರಗಳು ನಡೆದಿದ್ದನ್ನು ನೆನಪಿಸಿದರು. ಈ ಎಲ್ಲ ಹೋರಾಟಗಳ ಹಿಂದೆ ಸಿಐಟಿಯು ಅಖಿಲ ಭಾರತ ಕೇಂದ್ರ ಸಾಕಷ್ಟು ಶ್ರಮ ಹಾಕಿದೆ. ಹಾಗಾಗಿ ಸಾರ್ವಜನಿಕ ಕ್ಷೇತ್ರದ ಉದ್ದಿಮೆಗಳಲ್ಲಿ ಮತ್ತು ಕಾರ್ಮಿಕ ಸಂಘಗಳಲ್ಲಿ ಸಿಐಟಿಯು ಧೋರಣೆಯನ್ನು ಕೊಂಡೊಯ್ಯುವ ಕೆಲಸ ಸಂಘಟನಾ ಕೆಲಸವನ್ನು ನಾವು ಮಾಡಬೇಕಿದೆ ಎಂದರು.

ಕೇಂದ್ರ ಸರ್ಕಾರ ಅನುಸರಿಸುತ್ತಿರುವ ಜಾಗತೀಕರಣ, ಉದಾರೀಕರಣ ಹಾಗೂ ಖಾಸಗೀಕರಣ ನೀತಿಗಳಿಂದಾಗಿ ಸಾರ್ವಜನಿಕ ಉದ್ದಿಮೆಗಳಲ್ಲಿ ಗುತ್ತಿಗೆ ಕಾರ್ಮಿಕರ ಸಂಖ್ಯೆ, ಖಾಯಂ ಕಾರ್ಮಿಕರನ್ನು ಮೀರಿ ಬೆಳೆಯುತ್ತಿದೆ. ಆ ಕಾರ್ಮಿಕರಿಗೆ ಕನಿಷ್ಠ ಕೂಲಿ, ಮತ್ತು ಕಾನೂನಾತ್ಮಕ ಸೌಲಭ್ಯಗಳನ್ನು ನೀಡದೆ ಶೋಷಣೆ ಮಾಡಲಾಗುತ್ತಿದೆ. ಹಾಗಾಗಿ ಈ ಗುತ್ತಿಗೆ ಕಾರ್ಮಿಕರ ಪ್ರಶ್ನೆಯನ್ನು ಖಾಯಂ ನೌಕರರ ಸಂಘಗಳು ಎತ್ತಿಕೊಂಡು ಹೋರಾಡಬೇಕಿದೆ. ಇಲ್ಲದಿದ್ದಲ್ಲಿ ಸಾರ್ವಜನಿಕ ವಲಯದ ಖಾಯಂ ಕಾರ್ಮಿಕ ಸಂಘಗಳಿಗೆ ಭವಿಷ್ಯವೇ ಇರುವುದಿಲ್ಲ. ಆದ್ದರಿಂದ ಪ್ರತಿ ಉದ್ದಿಮೆಯಲ್ಲಿ ಸಿಐಟಿಯು ನೇತೃತ್ವದ ಸಂಘಗಳು ಗುತ್ತಿಗೆ ಕಾರ್ಮಿಕರನ್ನು ಸಂಘಟಿಸುತ್ತಾ ವಿಶೇಷ ಗಮನ ನೀಡಬೇಕೆಂದು ಕಾಂ: ತಪನ್‌ಸೇನ್ ಕರೆ ನೀಡಿದರು.

ಅದರೊಂದಿಗೆ, ಸಾರ್ವಜನಿಕ ಕ್ಷೇತ್ರಗಳ ಕಾರ್ಮಿಕರ ಮಧ್ಯೆ ಸಿಐಟಿಯು ಧೋರಣೆಯನ್ನು ಪ್ರಚಾರ ಮಾಡಲು, ಆಯಾ ಕಾರ್ಮಿಕ ಸಂಘಗಳು ನಿರ್ದಿಷ್ಟ ಕಾರ್ಯಕ್ರಮ ಹಮ್ಮಿಕೊಳ್ಳಬೇಕು. ಮುಖ್ಯವಾಗಿ, ಸಿಐಟಿಯು ಮಾಸಿಕಗಳಾದ, ವರ್ಕಿಂಗ್ ಕ್ಲಾಸ್, ಸಿಐಟಿಯು ಸಂದೇಶ ಮತ್ತು ಜನಶಕ್ತಿ ಮುಂತಾದ ಕಾರ್ಮಿಕ ವರ್ಗದ ಪತ್ರಿಕೆಗಳನ್ನು ಕಾರ್ಮಿಕರು ಹೆಚ್ಚೆಚ್ಚು ಓದುವಂತೆ ಮಾಡಬೇಕು. ಆ ಮೂಲಕ ಕಾರ್ಮಿಕ ತಿಳುವಳಿಕೆಯನ್ನು ಹೆಚ್ಚಿಸುವ ಕೆಲಸ ಮಾಡಬೇಕು. ಅಲ್ಲದೆ ಪ್ರಚಲಿತ ರಾಜಕೀಯ ಆರ್ಥಿಕ ಬೆಳವಣಿಗೆಗಳನ್ನು, ಕಾರ್ಮಿಕರ ಪ್ರಶ್ನೆಗಳೊಂದಿಗೆ ಮಿಳಿತಗೊಳಿಸಿ, ಅದರಲ್ಲಿ ಜಾಗೃತಿಗೊಳಿಸುವ ಕೆಲಸವನ್ನು ಕರ್ನಾಟಕದಲ್ಲಿ ನಾವು ಪ್ರಜ್ಞಾಪೂರ್ವಕವಾಗಿ ಮಾಡಬೇಕು. ಈ ದಿಶೆಯಲ್ಲಿ ಸಾರ್ವಜನಿಕ ಕ್ಷೇತ್ರದ ಕಾರ್ಮಿಕ ನಾಯಕರಿಗೆ ನಡೆಸುತ್ತಿರುವ ಈ ಕಾರ್ಯಾಗಾರ ಚರ್ಚೆ ನಡೆಸಬೇಕು ಎಂದರು.

ನಂತರದಲ್ಲಿ ಸಿಐಟಿಯು ರಾಜ್ಯ ಕಾರ್ಯದರ್ಶಿ ಕಾಂ: ಪ್ರಸನ್ನಕುಮಾರ್, ರಾಜ್ಯದಲ್ಲಿ ಸಾರ್ವಜನಿಕ ಕ್ಷೇತ್ರಗಳಲ್ಲಿನ ಪರಿಸ್ಥಿತಿ, ಖಾಸಗೀಕರಣ ದಾಳಿ, ರಾಜ್ಯ ಸರ್ಕಾರದ ಅಧಿಕಾರದಲ್ಲಿರುವ ಉದ್ದಿಮೆಗಳ ಸ್ಥಿತಿ, ಮಿತಿ ಮೀರಿರುವ ಕಂಟ್ರಾಕ್ಟ್ ಪದ್ಧತಿ, ಸಾರ್ವಜನಿಕ ಕ್ಷೇತ್ರದ ಕಾರ್ಮಿಕರು .... ನಡೆಸಿದ ಹೋರಾಟಗಳು ಹಾಗೂ ಇತ್ತೀಚಿಗೆ ನಾಸಿಕ್‌ನಲ್ಲಿ ಜರುಗಿದ 'ಸಾರ್ವಜನಿಕ ಕ್ಷೇತ್ರಗಳ ಕಾರ್ಮಿಕರ ಅಖಿಲ ಭಾರತ ಸಮಾವೇಶ ಕೈಗೊಂಡ ತೀರ್ಮಾನಗಳ ಜಾರಿ ಕುರಿತಂತೆ ತಯಾರಿಸಲಾದ ವರದಿಯನ್ನು ಚರ್ಚೆಗಳಿಗೆ ಮಂಡಿಸಿದರು.

ನಂತರ ನೆರದ ಚರ್ಚೆಯಲ್ಲಿ ಕೆ.ಎನ್. ಉಮೇಶ್ (ಬೆಂಗಳೂರು), ಸುಕುಮಾರನ್ ಪಿಳ್ಳೆ (ಬಿಇಎಲ್), ಸಿ.ಕೆ. ಗುಂಡಣ್ಣ(ಬಿಎಸ್‌ಎನ್‌ಎಲ್), ಕೆ.ಮಹಾಂತೇಶ್ (ಬಿಎಸ್‌ಎನ್‌ಎಲ್ ಗುತ್ತಿಗೆ) ರಂಗೇಗೌಡ(ವಿಐಎಸ್‌ಎಲ್) ವಿನಾಯಕಂ (ಬಿಹೆಚ್‌ಇಎಲ್) ಶಿವಾನಂದ (ಹಟ್ಟಿ ಮೈನ್ಸ್) ಮುಲ್ಲಾ (ಹಿಂದೂಸ್ಥಾನ ಲೆಟೆಕ್ಸ್, ಶಿವಪ್ಪ (ಬಿಇಎಂಎಲ್), (ವಿಐಎಸ್‌ಎಲ್ ಗುತ್ತಿಗೆ) ಮಲ್ಲೇಶಪ್ಪ (ಬಿಇಎಂಎಲ್) ಹಾಗೂ ಪ್ರಕಾಶ್ (ಬಿಎಸ್‌ಎನ್‌ಎಲ್) ಮೊದಲಾದ ಸಂಗಾತಿಗಳು ಪಾಲ್ಗೊಂಡು ಮಾತನಾಡಿದ್ದರು.

ಕಾರ್ಯಾಗಾರ ಕೈಗೊಂಡ ಪ್ರಮುಖ ತೀರ್ಮಾನಗಳು

1. ವರ್ಕಿಂಗ್ ಕ್ಲಾಸ್, ಪೀಪಲ್ಸ್ ಡೆಮಾಕ್ರಿಸಿ, ಸಿಐಟಿಯು ಸಂದೇಶ ಮತ್ತು ಜನಶಕ್ತಿ ಪತ್ರಿಕೆಗಳನ್ನು ಕಾರ್ಮಿಕರ ಮಧ್ಯ ಓದುವಂತೆ ಪ್ರೇರೇಪಿಸುವುದು ಮತ್ತು ಮಾರಾಟ ಮಾಡುವುದು.

2. ಸಾರ್ವಜನಿಕ ಕ್ಷೇತ್ರದ ಕಾರ್ಮಿಕರಿಗೆ ಪ್ರತ್ಯೇಕ ದ್ವಿ ಮಾಸಿಕ ಪತ್ರಿಕೆಯನ್ನು ಕೂಡ ಇಂಗ್ಲೀಷ್‌ನಲ್ಲಿ ಪ್ರಕಟಿಸುವುದು.

3. ಎಲ್ಲಾ ಸಾರ್ವಜನಿಕ ಉದ್ದಿಮೆಗಳಲ್ಲಿ 'ಗುತ್ತಿಗೆ ಕಾರ್ಮಿಕರನ್ನು' ಸಂಘಟಿಸಿ ಅವರ ಹಕ್ಕುಗಳಿಗಾಗಿ ಹೋರಾಡುವುದು.

4. ಸಾರ್ವಜನಿಕ ವಲಯದ ಕಾರ್ಮಿಕರಲ್ಲಿ ರಾಜಕೀಯ ಸೈದ್ಧಾಂತಿಕ ತಿಳುವಳಿಕೆಯಲ್ಲಿ ಹೆಚ್ಚಿಸಲು ವಿಚಾರ ಸಂಕಿರಣ, ಉಪನ್ಯಾಸಗಳನ್ನು ನಿರಂತರವಾಗಿ ನಡೆಸುವುದು.

ನೂತನ ಸಮಿತಿ ಆಯ್ಕೆ

ಕರ್ನಾಟಕದ ಸಾರ್ವಜನಿಕ ರಂಗದಲ್ಲಿ ಸಿಐಟಿಯುವಿನ ಧೋರಣೆಗಳನ್ನು ಪ್ರಚಾರಪಡಿಸಲು ಮತ್ತು ಮೇಲ್ಕಂಡ ತೀರ್ಮಾನಗಳನ್ನು ಜಾರಿಗೊಳಿಸುವ ಭಾಗವಾಗಿ 'ಕರ್ನಾಟಕ ಸಾರ್ವಜನಿಕ ಉದ್ದಿಮೆಗಳ ಕಾರ್ಮಿಕ ಸಂಘಗಳ ಸಮನ್ವಯ ಸಮಿತಿ' ಎಂಬ ಸಮಿತಿಯನ್ನು ಈ ಕೆಳಕಂಡಂತೆ ರಚಿಸಲಾಯಿತು:

ಎಸ್.ಪ್ರಸನ್ನಕುಮಾರ್, ಸುಕುಮಾರನ್ ಪಿಳ್ಳೆ, ವಿ.ಎಸ್.ಕೃಷ್ಣಮೂರ್ತಿ, ಸಿ.ಕೆ.ಗುಂಡಣ್ಣ.

ಬುಲೆಟನ್ ಸಮಿತಿ ಆಯ್ಕೆ :

ಸಾರ್ವಜನಿಕ ಕ್ಷೇತ್ರದ ನೌಕರರ ನಡುವೆಯ ಪ್ರಸಾರ ಮಾಡಲು ನಿರ್ಧರಿಸಿರುವ 'ಬುಲಿಟನ್ ...' ಕಾರ್ಯಾಗಾರ ಈ ಕೆಳಕಂಡ ಸಮಿತಿ ಆಯ್ಕೆ ಮಾಡಿತು. ಎಸ್.ಪಿಳ್ಳೆ, ಶ್ರೀನಿವಾಸ್, ಗುಂಡಣ್ಣ, ಕೆ.ಮಹಾಂತೇಶ್, ಸುಬ್ರಮಣ್ಯ, ಈ ಕಾರ್ಯಾಗಾರ ವ್ಯವಸ್ಥೆಗಳ ಸಿಐಟಿಯು ರಾಜ್ಯ ಸಮಿತಿಗಳು ಭಾರತ್ ಎಲೆಕ್ಟ್ರಾನಿಕ್ಸ್ ವರ್ಕರ್ಸ್ ಯೂನಿಯನ್‌ಗಳು ಜಂಟಿಯಾಗಿ ವ್ಯವಸ್ಥೆಗೊಳಿಸಿದ್ದವು.

- ಕೆ.ಮಹಾಂತೇಶ್

ಇಲ್ಲೇನು ನಡೆಯುತ್ತಿದೆ?

ದುಡಿವ ಜನರ ಬೆತ್ತಲೆ ಬಾಳು
ಕರಗುತಲಿಹುದು ಕತ್ತಲೆಯೊಳು

ಕೆಲಸ ಕೇಳುವ ಕೈಗಳವು
ಆರೋಗ್ಯ ಬೇಡುವ ಮೈಗಳಿವು
ಮಣ್ಣಿಗೆ ಮುರಿದು ಬಿದ್ದಿಹವು

ಭೂಮಿಗೆ ಬೆವರ ಬಸಿದವನು
ಉದರಕೆ ಊಟವನಿಟ್ಟವನು
ನೇಣಿಗೆ ಗೋಣನು ಕೊಟ್ಟಿಹನು

ವರದಕ್ಷಿಣೆ ಅವಿರತ ಸಾವುಗಳು
ಅತ್ಯಾಚಾರ ಅನುಚಿತ ನೋವುಗಳು
ಮಹಿಳೆಯ ಭಾವನೆ ಹಿಂಡಿಹವು


ದೇವರು ಧರ್ಮದ ಹೆಸರಿನೊಂದಿಗೆ
ಜಾತಿ-ಭಾಷೆಯ ಉಸಿರಿನೊಂದಿಗೆ
'ರಾಜಕಾರಣ' ನಡೆದಿಹುದು.

ಜಾಗತೀಕರಣದ ಜಪದಲ್ಲಿ
ಉದಾರೀಕರಣದ ಉರಿಯಲ್ಲಿ
ಗುಡಿ ಕೈಗಾರಿಕೆ ಹುಡಿಯಾಗಿಹವು

ನೊಂದ ಮನಸು ಮನಸುಗಳು
ಬೆಂದ ಕನಸು-ಕನಸುಗಳು
ಬೆಳಕು ಹುಡುಕಿ ಹೊರಟಿಹವು.

ಡಿ.ಬಿ.ಬಡಿಗೇರ, ಹರಪನಹಳ್ಳಿ

...ಾರದ ಸಂದರ್ಶನ



ಕರ್ನಾಟಕ ಪ್ರಾಂತ ರೈತ ಸಂಘದ 50ನೇ ವರ್ಷಾಚರಣೆ ಸಂದರ್ಭದಲ್ಲಿ ಬೆಂಗಳೂರಿಗೆ ಬಂದಿದ್ದ ಎಐಕೆಎಸ್‌ನ ರಾಷ್ಟ್ರಾಧ್ಯಕ್ಷರಾದ ಕಾಂ. ಎಸ್‌.ಆರ್‌.ಪಿಳ್ಳೆ ಅವರ ಸಂದರ್ಶನ. ಗಂಭೀರ ಕೃಷಿ ಬಿಕ್ಕಟ್ಟು, ಪರಿಹಾರಗಳ ಕುರಿತು ಅವರು ಮಾತನಾಡಿದ್ದಾರೆ.

'ವ್ಯವಸಾಯ ಲಾಭದಾಯಕವಾಗಿಲ್ಲದಿರುವುದೇ ಕೃಷಿ ಬಿಕ್ಕಟ್ಟಿನ ಪ್ರಮುಖ ಲಕ್ಷಣವಾಗಿದೆ'

ಎಸ್‌.ರಾಮಚಂದ್ರನ್‌ಪಿಳ್ಳೆ
ಅಖಿಲ ಭಾರತ ಅಧ್ಯಕ್ಷರು,
ಅಖಿಲ ಭಾರತ ಕಿಸಾನ್‌ ಸಭಾ (ಎಐಕೆಎಸ್‌)

ಸಂದರ್ಶನ : **ಯು.ಬಸವರಾಜು**

...ಶದ ವ್ಯವಸಾಯದ ಪರಿಸ್ಥಿತಿಯೇನು?

ಎಸ್‌.ಆರ್‌.ಪಿ.: ನಮ್ಮ ದೇಶಕ್ಕೆ ಸ್ವಾತಂತ್ರ್ಯ ...ಂದು 60 ವರ್ಷ. ಸ್ವಾತಂತ್ರ್ಯದ 60ನೇ ...ರ್ಷಿಕೋತ್ಸವ ಹಾಗೂ ಪ್ರಥಮ ಸ್ವಾತಂತ್ರ್ಯ ...ಂಗ್ರಾಮದ 150ನೇ ವಾರ್ಷಿಕೋತ್ಸವ ...ಚರಿಸುತ್ತಿದ್ದೇವೆ. ದೇಶದಲ್ಲಿ ಈಗಲೂ ಶೇ.60ಕ್ಕೂ ...ಚ್ಚು ಜನ ವ್ಯವಸಾಯವನ್ನೇ ತಮ್ಮ ಕುಟುಂಬದ ...ಮುಖ ಆದಾಯ ಮೂಲವಾಗಿ ಪರಿಗಣಿಸಿದ ...ವರಿದ್ದಾರೆ.

ಆದರೆ ರೈತರಿಗೆ ವ್ಯವಸಾಯ ...ಭದಾಯಕವಾಗಿಲ್ಲ! ವ್ಯವಸಾಯವೀಗ ...ರ್ವಾಂಗೀಣ ಬಿಕ್ಕಟ್ಟಿಗೆ ಒಳಗಾಗಿದೆ! ...ೇಶದಾದ್ಯಂತ ಲಕ್ಷಾಂತರ ರೈತರು ಆತ್ಮಹತ್ಯೆ ...ಾಡಿಕೊಂಡಿದ್ದಾರೆ! ಈಗಲೂ ಆತ್ಮಹತ್ಯೆ ...ಾಡಿಕೊಳ್ಳುತ್ತಿದ್ದಾರೆ! ರೈತರ ಭೂಮಿ ಈಗ ಪುನಃ ...ಡವಾಳಶಾಹಿ ಭೂ ಮಾಲೀಕರ ಕೈಯಲ್ಲಿ ...ಾಪಕವಾಗಿ ಕೇಂದ್ರೀಕರಣಗೊಳ್ಳುತ್ತಿದೆ.

ರಾಷ್ಟ್ರೀಯ ಸ್ಯಾಂಪಲ್‌ ಸರ್ವೇ ಪ್ರಕಾರ ...92ರಲ್ಲಿ ಶೇ.22 ರಷ್ಟು ಗ್ರಾಮೀಣ ಭೂ ಹೀನ ...ಲಿಕಾರರಿದ್ದರೆ, 2002 ರಲ್ಲಿ ಅವರ ಸಂಖ್ಯೆ ಶೇ.32 ...ಬೆಳೆದಿರುವುದು ಕಂಡು ಬಂದಿದೆ. ಇದೂ ಬಹಳ ...ಷ್ಟವಾಗಿ ಕೇಂದ್ರ ಸರ್ಕಾರ ಅದು ಅನುಸರಿಸುತ್ತಿರುವ ...ಾಗತೀಕರಣ, ಉದಾರೀಕರಣ ಮತ್ತು ...ಾಸಗೀಕರಣ ವ್ಯವಸಾಯ ನೀತಿಯಿಂದಾಗಿ ರೈತರು ...ವಸಾಯದಲ್ಲಿ ತೀವ್ರ ನಷ್ಟಕ್ಕೀಡಾಗಿ ದೊಡ್ಡ ...ಮಾಣದಲ್ಲಿ ದಿವಾಳಿ ಎದ್ದು ಕೂಲಿಕಾರರ ಪಡೆ ...ರುತ್ತಿರುವುದನ್ನು ಎತ್ತಿ ತೋರಿಸುತ್ತಿದೆ.

ಜಾಗತೀಕರಣದ ನೀತಿಗಳು ...ರಂಭಗೊಂಡಾಗಿನಿಂದ ಅಂದರೆ 1990ರ ...ಶಕದಿಂದ ರೈತರು ಬೆಳೆದ ಬೆಂಬಲ ಬೆಲೆ ...ೊರಕುತ್ತಿಲ್ಲ. ಅದೇ ರೀತಿ ರೈರಿಗೆ ಈಗಲೂ ...ಶದಾದ್ಯಂತ ವ್ಯಾಪಕವಾಗಿ ಕಡಿಮೆ ಬಡ್ಡಿ ದರ ...ಾಂಕ್‌ ಮತ್ತಿತರೇ ಸಾಂಸ್ಥಿಕ ಸಾಲ ದೊರಕುತ್ತಿಲ್ಲ. ...60 ರಷ್ಟು ರೈತರು ಈಗಲೂ ಸಾಲಕ್ಕಾಗಿ ...ಮೀಣ ಪ್ರದೇಶದ ದುಬಾರಿ ಬಡ್ಡಿ ತೆರಬೇಕಾದ ...ತ್ತ ಸಾಹುಕಾರರನ್ನೇ, ಇಲ್ಲವೇ ದಲ್ಲಾಳಿಗಳನ್ನೇ ...ಲಕ್ಕಾಗಿ ಅವಲಂಬಿಸಬೇಕಾಗಿದೆ?

ಕೃಷಿ ಹೂಡಿಕೆಗಳಿಗೆ ಅಂದರೆ ಗೊಬ್ಬರ ಬೀಜ, ...ನಾಶಕ ಮತ್ತು ಕೃಷಿ ಉಪಕರಣಗಳಿಗೆ ಸಬ್ಸಿಡಿ ...ಲ್ಲದೆ ಇರುವುದರಿಂದ ತಲಾ ಎಕರೆವಾರು ಕೃಷಿಯ ...ಚ್ಚ ದೊಡ್ಡ ಪ್ರಮಾಣದಲ್ಲಿ ಬೆಳೆದಿದೆ. ಕಳಪೆ ಬೀಜ ...ನಾಶಕಗಳು ಗೊಬ್ಬರಗಳು ಇಳುವರಿಯನ್ನು ...ಯುವಂತೆ ಮಾಡಿದೆ. ಸರ್ಕಾರಗಳು ಈ ...ಾರದಲ್ಲಿ ಕಠಿಣವಾಗಿ ವ್ಯವಹರಿಸುತ್ತಿಲ್ಲ.

ಇಷ್ಟೆಲ್ಲಾ ಸಮಸ್ಯೆ ಎದುರಿಸಿ ಬೆಳೆ ಬೆಳೆದ ರೈತನಿಗೆ ...ಬಲ ಬೆಲೆ ಸಿಗದಾಗ ಅವನು ಸಾಲ ...ಸಲಾಗುವುದಿಲ್ಲ. ಬಡ್ಡಿ ಸೇರುತ್ತಾ ಹೋಗುತ್ತದೆ. ...ಗೆ ಸಾಲದ ವಿಷ ಚಕ್ರದ ಸುಳಿಯಲ್ಲಿ ಸಿಲುಕುತ್ತಾನೆ. ...ನು ಭೂಮಿ ಮಾರುವ ಅಥವಾ ಮಾರಿದರೂ ... ತೀರಿಸಲಾಗದ ವ್ಯವಸಾಯ ಮಾಡಲಾಗದ ... ತಲುಪಿ ಆತ್ಮಹತ್ಯೆ ಮಾಡಿಕೊಳ್ಳುವ ಒತ್ತಡಕ್ಕೆ ...ಕುತ್ತಿದ್ದಾನೆ.

ವ್ಯವಸಾಯ ಸಾಲಸಿಕ್ಕದೇ ಉತ್ಪಾದನೆಯಿಂದ ...ರದೂಡಲ್ಪಟ್ಟು ಭೂಮಿ ಬೀಳು ಬಿಡುವಂತಾಗಿ, ...ಷ್ಟು ಹೂಡಿಕೆ ಮಾಡಲಾಗದ್ದು, ಸೇರಿ ಉತ್ಪಾದನೆ ...ಿತಗೊಳ್ಳುತ್ತದೆ.

ಈಗ ದೇಶದ ಕೃಷಿ ಉತ್ಪಾದನೆ ಜನಸಂಖ್ಯೆ ...ವಣಿಗೆಗೆ ಹೋಲಿಸಿದರೆ ಹಿಂದೆ ಬಿದ್ದಿದೆ.

ಹೀಗಾಗಿ ನಾವು ಆಹಾರ ಉತ್ಪಾದನೆಯಲ್ಲಿ ...ವಲಂಬಿ ಗಳಾಗುವಂತಾಗಿದೆ.

...ಒಟ್ಟಾರೆ ಸರ್ಕಾರದ ವ್ಯವಸಾಯ ನೀತಿಯು ...ವಸಾಯವನ್ನು ರೈತರಿಗೆ ಲಾಭದಾಯವಾಗಿ ...ಯುವಂತೆ ಬಿಡುತ್ತಿಲ್ಲ.

...2003ರ ರಾಷ್ಟ್ರೀಯ ಸ್ಯಾಂಪಲ್‌ ಸರ್ವೆ ಹೇಳಿದ ಪ್ರಕಾರ, ಶೇ.96.2 ಹಿಡುವಳಿದಾದರರು ಸುಮಾರು 10 ಎಕರೆ ಭೂಮಿ ಹೊಂದಿಯೂ ಬೇಸಾಯದಿಂದ ಕನಿಷ್ಠ ತಮ್ಮ ಜೀವನವನ್ನು ಬದುಕನ್ನು ನಡೆಸಲಾಗದವರಾಗಿದ್ದಾರೆ. ಉಳಿದ ಶೇ.3.8ಜನ ಹಿಡುವಳಿದಾರರು ಮಾತ್ರ ಸ್ವಲ್ಪ ಉಳಿತಾಯ ಮಾಡುವವರಿದ್ದಾರೆನ್ನುತ್ತಿದ್ದಾರೆ.

ಇದು ಬಹಳ ಸ್ಪಷ್ಟವಾಗಿ ವ್ಯವಸಾಯ ಲಾಭದಾಯಕವಲ್ಲ ಎಂಬುದನ್ನು ತೋರಿಸುತ್ತದೆ.

ಕೃಷಿ ಬಿಕ್ಕಟ್ಟಿನ ನಿವಾರಣೆಗೆ ಕೇಂದ್ರದ ಯುಪಿಎ ಸರ್ಕಾರ ತಳೆದ ನಿಲುವೇನಾಗಿದೆ?

ಎಸ್‌.ಆರ್‌.ಪಿ.: ಕೇಂದ್ರ ಸರ್ಕಾರ, ಕೃಷಿ ರಂಗದಲ್ಲಿ ಉದ್ಭವಿಸಿರುವ ಸರ್ವಾಂಗೀಣ ಬಿಕ್ಕಟ್ಟನ್ನು ಸರಿಯಾಗಿ; ಆಳವಾಗಿ ಗುರುತಿಸಲು ಇಷ್ಟಪಡುತ್ತಿಲ್ಲ. ಇದನ್ನೂ ಕೇವಲ ಉತ್ಪಾದನೆ ಮತ್ತು ಉತ್ಪಾದಕತೆ ಹೆಚ್ಚಿಸುವ ಪ್ರಶ್ನೆಯೆಂದೇ ಅಥವಾ ಕೆಲವು ಬೆಳೆಗಳ ಬೆಲೆ ಕುಸಿತದ ಪ್ರಶ್ನೆಯೆಂದೋ ಗುರುತಿಸುತ್ತದೆ.

ಈಚೆಗೆ ಕೇಂದ್ರ ಸರ್ಕಾರವು ರಾಷ್ಟ್ರೀಯ ಅಭಿವೃದ್ಧಿ ಮಂಡಳಿ ಸಭೆಯನ್ನು ದಿನವಿಡೀ ಸಂಘಟಿಸಿತು. ಇದರ ಉದ್ದೇಶ ಕೃಷಿ ರಂಗದ ಸಮಸ್ಯೆಗಳನ್ನು ಗುರುತಿಸಿ ಚರ್ಚಿಸುವುದು ಪರಿಹಾರಗಳನ್ನು ಹುಡುಕುವುದಾಗಿತ್ತು. ಈ ಸಭೆಯ ಮುಂದೆ ರಾಷ್ಟ್ರೀಯ ಅಭಿವೃದ್ಧಿ ಮಂಡಳಿ ಹಾಗೂ ಯೋಜನಾ ಮಂಡಳಿಗಳು ಹಲವು ಗಂಭೀರ ದಾಖಲೆಗಳನ್ನಿಟ್ಟಿದ್ದವು. ಆದಾಗ್ಯೂ ಅಲ್ಲಿ ಒಂದು ವಾಕ್ಯದ ಪರಿಹಾರವನ್ನು ದೇಶದ ಮುಂದಿಡಲಾಗಿತ್ತು.

ರೈತ ಕೂಲಿಕಾರರ ತುಂಡು ವ್ಯವಸಾಯದ ಬದಲಿಗೆ ಅಥವಾ ಅದರ ಜೊತೆಗೇ ಕಾರ್ಪೊರೇಷನ್ ಕಂಪನಿ ಕೃಷಿಯನ್ನು ಜಾರಿಗೆ ತರುವ ಸೂಚನೆಯಿಡಲಾಗಿತ್ತು.

ಅಂದರೆ, ಸರ್ಕಾರ ಕಾರ್ಪೊರೇಟ್ ಕಂಪನಿಗಳಿಗೆ ಕೃಷಿರಂಗವನ್ನು ಸೆಳೆಯಲಾಗುತ್ತಿದೆ. ಭೂಮಿಯನ್ನು ದೊಡ್ಡ ಪ್ರಮಾಣದಲ್ಲಿ ಗುತ್ತಿಗೆ ಪಡೆಯಲು ಅವಕಾಶ ನೀಡಲಾಗುತ್ತಿದೆ. ಕೃಷಿರಂಗದಲ್ಲಿ ವಿದೇಶಿ ನೇರಬಂಡವಾಳ ಪ್ರವೇಶಿಸಲು ಅವಕಾಶ ಮಾಡಿಕೊಡುವುದು. ರಿಯಲ್ ಎಸ್ಟೇಟ್ ವ್ಯವಹಾರ ನಡೆಸಲು ಅವಕಾಶ ನೀಡುವುದು. ರೈತ ಸಮುದಾಯದ ಮೇಲಿನ ಹಕ್ಕನ್ನು ಕಳಚಿ ಹಾಕಿ ಬಹುರಾಷ್ಟ್ರೀಯ ದೈತ್ಯ ಕಂಪನಿಗಳ ವಶಕ್ಕೆ ಬಿಡುವುದು ಕಂಡುಬರುತ್ತಿದೆ.

ಈ ವಿಚಾರವಾಗಿ ಜಾರ್ಜ್ ಬುಷ್ ಅಮೇರಿಕಾದ ಅಧ್ಯಕ್ಷರು ಹಾಗೂ ನಮ್ಮ ಪ್ರಧಾನಮಂತ್ರಿ ಮನಮೋಹನ್ ಸಿಂಗ್‌ರು ಜುಲೈ 2005ರಲ್ಲೊಮ್ಮೆ ಮಾರ್ಚ್ 2006ರಲ್ಲೊಮ್ಮೆ ಹೇಳಿಕೆ ಇತ್ತಿದ್ದಾರೆ.

ಅದೇ ರೀತಿ ಅಮೇರಿಕಾ ಮತ್ತು ಭಾರತದ ನಡುವೆ ಕೃಷಿರಂಗದ ಸಂಶೋಧನೆಯ ಜ್ಞಾನ ಸಂಬಂಧಿ ಒಪ್ಪಂದವನ್ನು ಮಾಡಿಕೊಳ್ಳಲಾಗಿದೆ.

ಇದರಂತೆ ಮಂಡಳಿಯನ್ನು ರಚಿಸಲಾಗಿದೆ. ಇದರಲ್ಲಿ ದೈತ್ಯ ಬಹುರಾಷ್ಟ್ರೀಯ ಸಂಸ್ಥೆಗಳಾದ ಮಾನ್ಸೆಂಟೊ ಹಾಗೂ ವಾಲ್‌ಮಾರ್ಟ್ ಕಂಪನಿಗಳು ಪ್ರತಿನಿಧಿಗಳಾಗಿವೆ. ಈ ಮಂಡಳಿಯು ಯಾವ ಬೆಳೆಯ ಹಾಗೂ ಯಾವ ರಂಗ ಅಥವಾ ಪ್ರದೇಶದಲ್ಲಿ ಸಂಶೋಧನೆಯಾಗಬೇಕೆಂದು ಗುರುತಿಸುತ್ತದೆ.

ಇದೇ ರೀತಿಯಲ್ಲಿ ಅಮೇರಿಕಾ 3ನೇ ಜಗತ್ತಿನ ಇತರೆ ರಾಷ್ಟ್ರಗಳ ಜೊತೆ ಒಪ್ಪಂದ ಮಾಡಿಕೊಂಡಿದೆ. ಈ ಎಲ್ಲಾ ಒಪ್ಪಂದಗಳಲ್ಲಿ ಅಮೇರಿಕಾ ದೇಶದ ಉದ್ದೇಶ ಸ್ಪಷ್ಟವಿದೆ.

ನಮ್ಮ ಹಾಗೂ 3ನೇ ಜಗತ್ತಿನ ರಾಷ್ಟ್ರಗಳನ್ನು 2ನೇ ಜಾಗತಿಕ ಯುದ್ಧದ ಹಿಂದಿನ ಪರಿಸ್ಥಿತಿಗೆ ಕೊಂಡೊಯ್ಯುವುದೇ ಆಗಿದೆ.

ಸಾಮ್ರಾಜ್ಯವಾದಿಗಳ ಜಗತ್ತಿನ ವಸಾಹತುಶಾಹಿಗಳಾಗಿ ಹಂಚಿಹೋಗಿದ್ದ ಅಂದಿನ ಈ ದೇಶಗಳು ಅಲ್ಲಿನ ಕೃಷಿರಂಗ ಆ ದಿನದ ಕಂಪನಿಗಳ ಹಿತಾಸಕ್ತಿಯನ್ನು ಪೂರೈಸುತ್ತಿತ್ತು.

ಅಂತಹದ್ದೇ ಪರಿಸ್ಥಿತಿಗೆ, ಕಾರ್ಪೊರೇಟ್ ಕಂಪನಿಗಳ ಬಹುರಾಷ್ಟ್ರೀಯ ಸಂಸ್ಥೆಗಳ ಹಿತಾಸಕ್ತಿ ಪೂರೈಸುವೆಡೆಗೆ ಈ ಒಪ್ಪಂದಗಳು ಮುನ್ನಡೆಸಲಿವೆ ಎಂಬುದನ್ನು ಗಮನಿಸಬೇಕು. ಆದ್ದರಿಂದ ಯುಪಿಎ ಸರ್ಕಾರದ ಕೃಷಿ ನೀತಿಯು ರೈತರ ನೆರವಿಗೆ ಧಾವಿಸುವ ಬದಲು ಕಾರ್ಪೊರೇಟ್ ಕಂಪನಿಗಳ ನೆರವಿಗೆ ಧಾವಿಸುವ ಲಕ್ಷಣ ಹೊಂದಿದೆ.

ಅಖಿಲ ಭಾರತ ಕಿಸಾನ್ ಸಭಾವು ಯಾವ ರೀತಿಯ ಪರಿಹಾರವನ್ನು ಕೇಳುತ್ತಿದೆ.

ಎಸ್‌ಆರ್‌ಪಿ : ಕೇಂದ್ರ ಸರ್ಕಾರವು ಕೃಷಿರಂಗಕ್ಕೆ ಸಂಬಂಧಿಸಿ-ಸಾರ್ವಜನಿಕ ಬಂಡವಾಳದ ಹೂಡಿಕೆಯನ್ನು ಹೆಚ್ಚಿಸಬೇಕು. ಕೃಷಿರಂಗದ ರಕ್ಷಣೆಗೆ ಸರ್ಕಾರದ ಮಧ್ಯಪ್ರವೇಶ ಬೇಕೆಂದು ಎಐಕೆಎಸ್ ಒತ್ತಾಯಿಸುತ್ತಾ ಬಂದಿದೆ. ಆದರೆ ಸರ್ಕಾರ ಬಂಡವಾಳ ಹೂಡಿಕೆಗೆ/ ಮಧ್ಯ ಪ್ರವೇಶಿಸಿ ನೆರವಾಗಲು ಒಪ್ಪುತ್ತಿಲ್ಲ. ಆ ಕೆಲಸವನ್ನು ಬಹುರಾಷ್ಟ್ರೀಯ ಕಂಪನಿಗಳಿಗೆ ಬಿಡುತ್ತಿದೆ.

ವಿದ್ಯುತ್‌ರಂಗ, ನೀರಾವರಿ ಸಂಶೋಧನಾರಂಗ, ಸಾರಿಗೆ ಸಂಪರ್ಕ, ಬೀಜ, ಗೊಬ್ಬರ ತಯಾರಿಕೆ ಮುಂತಾದೆಡೆ ಸಾರ್ವಜನಿಕ ಬಂಡವಾಳ ಹೂಡಿಕೆ ವ್ಯಾಪಕವಾಗಿ ನಡೆಯಬೇಕಾಗಿದೆ. ಅದೇ ರೀತಿ ಕೃಷಿರಂಗಕ್ಕೆ ಸಬ್ಸಿಡಿ ವ್ಯಾಪಕವಾಗಿ ಒದಗಿಸಲು ಮುಂದಾಗಬೇಕು. ಮುಂದುವರೆದ ಅಮೇರಿಕಾ ಮುಂತಾದ ದೇಶಗಳು ದೊಡ್ಡ ಪ್ರಮಾಣದಲ್ಲಿ ಸಬ್ಸಿಡಿ ನೀಡುತ್ತಿವೆ. ಆದರೆ ನಮ್ಮ ದೇಶ ತಯಾರಿಲ್ಲ. ಸಬ್ಸಿಡಿ ಒದಗಿಸಬೇಕು ಮಾತ್ರವಲ್ಲ ರೈತರ ಬೆಳೆಗೆ ಬೆಂಬಲ ಬೆಲೆ ಖಾತ್ರಿಪಡಿಸಲು ಮಧ್ಯಪ್ರವೇಶ ಮಾಡಬೇಕು. ಆಗ ಮಾತ್ರವೇ ಕೃಷಿ ಲಾಭದಾಯಕವಾಗಲಿದೆ. ಉತ್ಪಾದನೆ/ ಉತ್ಪಾದಕತೆ ಹೆಚ್ಚಲಿದೆ.

ಇದಕ್ಕಾಗಿ ಎಐಕೆಎಸ್ ಹೋರಾಟ ಮಾಡುತ್ತಿದೆ. ಮುಂದೆಯೂ ಬಲವಾದ ಆಂದೋಲನವನ್ನು ಹರಿಬಿಡುತ್ತದೆ.

ಕೇಂದ್ರ ಸರ್ಕಾರವು ಕಳೆದ ಬಜೆಟ್‌ನಲ್ಲಿ ದೇಶದ ಎಲ್ಲಾ ರಂಗಗಳ ಅಭಿವೃದ್ಧಿಗೆ ನೀಡಿದ ಹಣ 1,70 ಸಾವಿರ ಕೋಟಿಯಾದರೆ ಪಕ್ಕದಲ್ಲಿರುವ ಚೈನಾ ದೇಶವು 1,90 ಲಕ್ಷ ಕೋಟಿ ಹಣವನ್ನು ಕೇವಲ ಕೃಷಿರಂಗಕ್ಕೆ ನೀಡಿದೆ. ಹೀಗಾಗಿ ಕೃಷಿರಂಗ ಚೀನಾದಲ್ಲಿ ದೊಡ್ಡ ಸಾಧನೆ ಮಾಡಿದೆ. ಇಲ್ಲಿ ಸರ್ಕಾರದ ನೆರವಿಲ್ಲದೇ ನಲುಗುತ್ತಿದೆ.

ಆದ್ದರಿಂದ ದೇಶದ ರೈತಾಪಿ ಜನತೆ ದೊಡ್ಡ ಪ್ರಮಾಣದಲ್ಲಿ ಜಾತಿ, ಧರ್ಮ, ಭಾಷೆ, ಗಡಿಯನ್ನು ಮೀರಿ, ಎಲ್ಲಾ ದುಡಿಯುವ ಜನರ ಜೊತೆ ನಿಂತು ಹೋರಾಡುತ್ತಿರುವ ಎಐಕೆಎಸ್ ಜೊತೆ ಹೋರಾಟದಲ್ಲಿ ತೊಡಗುವುದು ಜಂಟಿ ಹೋರಾಟದಲ್ಲಿ ಭಾಗಿಯಾಗುವುದು ಆಗಬೇಕಾಗಿದೆ. ●

ಕರ್ನಾಟಕ ಪ್ರಾಂತ ರೈತಸಂಘದ ಸುವರ್ಣ ಸಂಭ್ರಮದ ಕಾರ್ಯಕ್ರಮದಲ್ಲಿ ಅಭಿನಂದಿಸಲಾಗುತ್ತಿರುವ ಸ್ವಾತಂತ್ರ್ಯ ಯೋಧರಾದ ಸವದತ್ತಿಯ ಕಪ್ಪಣ್ಣನವರ್, ಮಾಜಿ ಅಧ್ಯಕ್ಷರೂ, ಸ್ವಾತಂತ್ರ್ಯ ಹೋರಾಟಗಾರರಾದ ದೊಡ್ಡಬಳ್ಳಾಪುರದ ಮುಗುವಾಳಪ್ಪನವರಿಗೆ ಎಸ್‌ಆರ್‌ಪಿಯವರಿಂದ ಅಭಿನಂದನೆಗಳು



ಮಕ್ಕಳ ಚಿತ್ರ : ಕನಸು - ಕಲ್ಪನೆಗೂ ಬರವೇ



■ ಕಿಟ್ಟಿ

ಒಂದು ಕೋತಿ, ಒಂದು ನಾಯಿ, ಒಬ್ಬ ಡುಮ್ಮ, ಒಬ್ಬ ಸೋಡಾ ಗಾಜಿನ ಕನ್ನಡಕದವ ಇದ್ದು ಬಿಟ್ಟರೆ ಅದು ಮಕ್ಕಳ ಸಿನಿಮಾ ಆಗಿಬಿಡುತ್ತದೆ ಅನ್ನುವ ಕಲ್ಪನೆ ಎಷ್ಟು ಹಾಸ್ಯಾಸ್ಪದ!!

ಹಳ್ಳಿಯಲ್ಲಿ ಇದ್ದ ಒಬ್ಬಳೇ ಅಜ್ಜಿಯನ್ನು ಕಳೆದುಕೊಂಡು ಬಾಲಕ ಮುತ್ತಾ ಊರ ಗೌಡನ ಶೋಷಣೆಯ ಜಾಲದಿಂದ ತಪ್ಪಿಸಿಕೊಂಡು ನಗರಕ್ಕೆ ಬರುತ್ತಾನೆ. ಹೊಟ್ಟೆಪಾಡು, ಚಪ್ಪಲಿ ಶೂಗಳನ್ನು ಕದ್ದು ಮಾರುವ ಬೀದಿ ಹುಡುಗರ ಜೊತೆಗೆ ಬಿದ್ದು ತಾನು ಅದೇ ತುಳಿಯುತ್ತಾನೆ

ಹೀಗೆ ಒಮ್ಮೆ ಶೂಕದ್ದು ಹೋಗುವಾಗ ಮಕ್ಕಳಿಗೆ ಓಟದ ತರಬೇತಿ ನೀಡುವ ಕ್ರೀಡಾ ಕೋಚ್ ಒಬ್ಬ ಬೆನ್ನಟ್ಟಿ ಬರುತ್ತಾನೆ. ಶಕ್ತಿ ಮೀರಿ ಬೆನ್ನಟ್ಟಿ ಓಡಿಸಿಕೊಂಡು ಹೋಗಿ ಅತ್ಯಂತ ಪ್ರಯಾಸದಿಂದ 'ಕಳ್ಳ' ನನ್ನು ಹಿಡಿದ ಆ ಕೋಚ್ ಇನ್ನೇನೂ ಕಳ್ಳನನ್ನು ಹಿಡಿದು ಬಡಿಯಬೇಕು.

ಆ ಕ್ಷಣ ತನ್ನ ಕೈಗೆ ಸಿಕ್ಕಿರುವುದು ಕಳ್ಳನಲ್ಲ ಒಬ್ಬ ಅದ್ಭುತ ಓಟಗಾರ ಎಂಬುದು ಹೊಳೆಯುತ್ತದೆ. ಕೋಚ್ ಖುಷಿಯಿಂದ ಕುಣಿದು ಕುಪ್ಪಳಿಸುತ್ತಾನೆ.

ಮುತ್ತಾ ಒಬ್ಬ ಅದ್ಭುತ ಓಟಗಾರನಾಗಿ ರೂಪುಗೊಳ್ಳುತ್ತಾನೆ. ನಾಗಾಭರಣ ನಿರ್ದೇಶನದ ಚಿನ್ನಾರಿ ಮುತ್ತಾದ ಕತೆ ಇದು. ಕಳ್ಳರ ತಂಡದ ಕುರಿತ 'ರಮ್ಯ' ಕಲ್ಪನೆ ಹೊರತುಪಡಿಸಿ ಸೃಜನಶೀಲತೆಯ ಒಂದು ಉತ್ತಮ ಉದಾಹರಣೆಯಾಗಿ ಈ ಚಿತ್ರ ನಮ್ಮ ಮುಂದಿದೆ.

ನಮ್ಮಲ್ಲಿ ಮಕ್ಕಳ ಚಿತ್ರಗಳೇ ಕಡಿಮೆ. ಅದರಲ್ಲೂ ಮಕ್ಕಳಿಗೆ ಉತ್ತಮ ಮನರಂಜನೆ ನೀಡುವ ಅವರ ವ್ಯಕ್ತಿತ್ವ, ಮನೋವಿಕಾಸಕ್ಕೆ ಪೂರಕವಾದ ಮಕ್ಕಳ ಸಿನಿಮಾಗಳಂತೂ ಇನ್ನೂ ಕಡಿಮೆ.

ಆದರೆ ಮಕ್ಕಳ ಸಿನಿಮಾ ಎಂದರೆ ನಮ್ಮ ಕೆಲವು ನಿರ್ಮಾಪಕರು, ನಿರ್ದೇಶಕರ ಕಲ್ಪನೆಗಳೇ ಬೇರೆ.

3 ಫೈಟು, 4 ಹಾಡು, ಒಂದೆರಡು ಬೆಡ್‌ರೂಂ ಅಥವಾ ಈಜು ಕೊಳದ ದೃಶ್ಯಗಳನ್ನು ತೋರಿಸದೇ ಹೇಗೆ ಇವರು ದೊಡ್ಡವರಿಗೆ ತೆಗೆಯುವ ಸಿನಿಮಾ ಪೂರ್ಣವಾಗುವುದಿಲ್ಲವೋ ಹಾಗೆ ಮಕ್ಕಳ ಸಿನಿಮಾಗಳವರೆಗೂ ಇವರ ಯೋಜನೆ.



ಉತ್ತಮ ಚಿತ್ರ ಚಿನ್ನಾರಿಮುತ್ತ

ಮಕ್ಕಳ ಚಿತ್ರ ಎಂದಾಕ್ಷಣ ಅದರಲ್ಲಿ ಒಂದು ಮಕ್ಕಳ ತಂಡ ಇರಬೇಕು. ಅದರಲ್ಲಿ ಒಬ್ಬ ಡುಮ್ಮ ಒಬ್ಬ ಸಣಕಲ, ಒಬ್ಬ 'ಸೋಡಾ ಬುಡ್ಡಿ', ಒಬ್ಬ ಕರಾಟೆ ಪಟು. ಇದರ ಜೊತೆಗೆ ಒಂದು ನಾಯಿ ಕೋತಿ ಇಲ್ಲದಿದ್ದರೆ ಸಾಧ್ಯವೇ ಇಲ್ಲ. ಇವರೆಲ್ಲಾ ದೊಡ್ಡವರಿಗೂ ಅಸಾಧ್ಯ ಎನಿಸುವ ದುಸ್ಸಾಹಸಗಳನ್ನು ಈ ಮಕ್ಕಳು ಮಾಡುತ್ತಾರೆ. ದೈತ್ಯ ಕಳ್ಳ ಸಾಗಾಣಿಕೆದಾರರು, ವಿಲನ್‌ಗಳ ತಂಡವನ್ನು ಸದೆಬಡಿಯುವ ಜವಾಬ್ದಾರಿ ಈ ಪುಟಾಣಿಗಳ ಹೆಗಲಿಗೆ !

ದೊಡ್ಡವರ ಸಿನಿಮಾಗಳಲ್ಲಿ ಒಬ್ಬ ಹೀರೋ ಮೆರೆಯುವ ಎಲ್ಲ ದುಸ್ಸಾಹಸ, ಪರಾಕ್ರಮಗಳನ್ನು ಅಂದರೆ ಫೈಟು ಜಗಿತ, ನೆಗೆತ ಎಲ್ಲವನ್ನೂ ಮಕ್ಕಳು ಮಾಡುತ್ತಾರೆ.

ಸಿಂಹದ ಮರಿ ಸೈನ್ಯ, ಪುಟಾಣಿ ಏಜೆಂಟ್ 123 ಇಂತಹ ಬ್ರಾಂಡ್‌ನ ಮಕ್ಕಳ ಸಿನಿಮಾಗಳ ಉದಾಹರಣೆಗಳು. ಮಕ್ಕಳ ಮನಸ್ಸಿಗೆ ಮುದ ನೀಡುವ ಮಕ್ಕಳ ಸಿನಿಮಾಗಳೇ ಇಲ್ಲದೆ ಬರ ಪೀಡಿತ ಪರಿಸ್ಥಿತಿಯಲ್ಲಿ ಇಂತಹ ಸಿನಿಮಾಗಳೇ ಯಶಸ್ಸನ್ನು ಕಂಡು ಮಕ್ಕಳ ಸಿನಿಮಾಗಳಿಗೆ ಮಾದರಿ ಎನಿಸಿಕೊಂಡು ಬಿಡುವುದು ಒಂದು ಬಗೆಯ ದುರಂತ.

ಕವಿತಾ ಲಂಕೇಶ್‌ರ 'ಬಿಂಬ' ವನ್ನು ಮಕ್ಕಳ ಸಿನಿಮಾ ಎಂದು ವರ್ಗೀಕರಿಸಬೇಕೇ ಎಂಬ ಪ್ರಶ್ನೆ ಇದ್ದರೂ ಮಕ್ಕಳೇ ಕೇಂದ್ರ ಪಾತ್ರಗಳಾದ ಸಿನಿಮಾ ಸಿನಿಮಾ ಲೋಕದ ಒಳ ವಾಸ್ತವಗಳು ಜನಪ್ರಿಯ ಬಾಲನಟಿಯೊಬ್ಬಳು ತಾನು ಸಿನಿಮಾ ನಟಿಯಾಗಿರುವ ಕಾರಣಕ್ಕೆ ಅನುಭವಿಸಬೇಕಾಗಿ ಬರುವ ಸನ್ನಿವೇಶ, ತೊಂದರೆಗಳು ಕೌಟುಂಬಿಕ ಸಂಬಂಧದಲ್ಲಿ ಅದು ಉಂಟು ಮಾಡುವ ಏರುಪೇರುಗಳನ್ನು ಚಿತ್ರ ಪರಿಣಾಮಕಾರಿಯಾಗಿ ತೆರೆದಿಡುತ್ತದೆ.

ಬಹುಬೇಗ ಮುಗ್ಧತೆ ಕಳೆದುಕೊಳ್ಳುವ ಅಪಾಯ

ತಮ್ಮ ವಯಸ್ಸಿಗೆ ಮೀರಿದ 'ವಯಸ್ಕರ' ವಿಚಾರಗಳನ್ನೆಲ್ಲಾ ತಿಳಿದುಕೊಳ್ಳುವಂತಾಗುವುದರಿಂದ ಬಾಲನಟ ನಟಿಯರು ತಮ್ಮ ವಯೋಸಹಜವಾದ ಮುಗ್ಧತೆಯನ್ನೇ ಕಳೆದುಕೊಂಡು ಬಿಡುತ್ತಾರೆ ಎಂದು ಬಿಂಬ ಚಿತ್ರದಲ್ಲಿ ಪ್ರತಿಪಾದಿಸಿರುವ ಅಂಶ ನಿಜವಾಗಿಯೂ ಯೋಚಿಸಬೇಕಾದದ್ದೇ.

ಮಕ್ಕಳ ಮನಸ್ಸು ಸೆಳೆಯ ಬಲ್ಲ ಅವರಲ್ಲಿ ಅದ್ಭುತ ಕಲ್ಪನಾಶಕ್ತಿಯನ್ನು ಚಿಮ್ಮಿಸಬಲ್ಲ, ಸಮಾಜದ ವಿವಿಧ ಆಯಾಮವನ್ನು ವಿಭಿನ್ನ ದೃಷ್ಟಿಕೋನದಿಂದ ನೋಡಲು, ಮಗುವಿನ ಮುಗ್ಧ ದೃಷ್ಟಿಕೋನವನ್ನು ಬಳಸಬಲ್ಲ ವಿಶಿಷ್ಟ ಸಾಧ್ಯತೆಗಳು ಮಕ್ಕಳ ಚಿತ್ರ ತೆಗೆಯುವವು ಎನ್ನುವವರಿಗೂ ಹೊಳೆಯುವುದೇ ಇಲ್ಲ.

ರಾಮಾಯಾಣ ಪುಸ್ತಕ ಕೊಂಡುಕೊಳ್ಳಬೇಕು. ಅದನ್ನು ಓದಬೇಕೆಂಬ ಹಂಬಲದ ಬಾಲಕನೊಬ್ಬನ ಕತೆಗಳು ಬೆಟ್ಟದ ಹೂವು. ಇಂತಹ ವೈವಿಧ್ಯಮಯವಾದ ವಿಶಿಷ್ಟವಾದ ಸಾಹಿತ್ಯ ಕೃತಿಗಳು, ನಿಜ ಜೀವನದ ಕತೆಗು ದಂಡಿಯಾಗಿ ನಮ್ಮ ಮುಂದಿರುವಾಗಲೂ ನಮ್ಮ ನಿರ್ಮಾಪಕ, ನಿರ್ದೇಶಕರಿಗೆ ಇವು ಕೈಗೆ ಸಿಗುವುದಿಲ್ಲವೆಂದರೆ ಕಾರಣ ಏನಿರಬಹುದು.

ಅದೊಂದು ಇಂಗ್ಲೀಷ್ ಸಿನಿಮಾ. ಮನುಷ್ಯರನ್ನು ಇರುವೆಗಳ ಗಾತ್ರಕ್ಕಿಂತಲೂ ಚಿಕ್ಕವರನ್ನಾಗಿ ಮಾಡುವ ತಂತ್ರಜ್ಞಾನ ಅದು. ಆಕಸ್ಮಿಕವಾಗಿಯೋ ಏನೋ ಕೆಲವರು ಈ ತಂತ್ರಜ್ಞಾನ ಪರಿಣಾಮಕ್ಕೆ ಗು
ತಮ್ಮ ಮನೆಯ ಮುಂದಿನ ಹೂ ತೋಟದ
ಹಾಸಿನಲ್ಲಿ ಕಳೆದು ಹೋಗುತ್ತಾರೆ.



ತೆರೆದುಕೊಳ್ಳುವುದು ಮನಸೂರೆಗೊಳ್ಳುವ
ಹೊಸ ಪ್ರಪಂಚ. ಇರುವೆ ಗೂಡಿನ ಒಳ
ನೊಡುವ ಓಡಾಡುವ ಇವರಿಗೆ ಇರುವೆಯೇ
ದೈತ್ಯ ಪ್ರಾಣಿ. ಕೊನೆಗೆ ತಮ್ಮವರು ತಿನ್ನು
ಚಮಚೆಯಲ್ಲಿ ಬಿದ್ದು ಒದ್ದಾಡುತ್ತಾ
ಆಹಾರವಾಗುವುದರಿಂದ ತಪ್ಪಿಸಿಕೊಂಡು
ಮಾಮೂಲಿ ಗಾತ್ರ ಪಡೆಯುವವರೆಗೆ ಸೃಜ
ಕಲ್ಪನೆ, ಸಮರ್ಥ ಬಳಕೆ.

ಇಂತಹ ತಂತ್ರಜ್ಞಾನ ಇದೆಯೋ ಇ
ಎಂಬುದು ಅಪ್ರಸ್ತುತ. ಆದರೆ ಈ ಕಲ್ಪನೆಯೇ
ಆನಂದ.

ಅಸ್ಪೃಶ್ಯತೆ, ಬಡತನವನ್ನು ಬೆನ್ನಿಗೆ ಕಟ್ಟಿ
ಕೊಟ್ರೇಶಿಯು ಶಿಕ್ಷಣ ಪಡೆಯಲು ಎದು
ಸಮಸ್ಯೆ ಚಿತ್ರಿಸುವ 'ಕೊಟ್ರೇಶೀಯ ಕನಸು
ಮತ್ತೊಂದು ಉತ್ತಮ ಮಕ್ಕಳ ಚಿತ್ರ.
ಚಿತ್ರಗಳು ಇನ್ನಾದರೂ ಹೆಚ್ಚು ಬರಬಹು
ನಿರೀಕ್ಷಿಸಬಹುದೇ?

ಭಾರತಕ್ಕೆ ವಿಶ್ವ ಚೆಸ್ ಕಿರೀಟ

ವಿಶ್ವ ಚೆಸ್ ಚಾಂಪಿಯನ್ ಪಟ್ಟ ಮತ್ತೊಮ್ಮೆ ಭಾರತದ ಪಾಲಾಗಿದೆ. ಭಾರತದ ಗ್ರ್ಯಾಂಡ್‌ಮಾಸ್ಟರ್ ವಿಶ್ವನಾಥನ್ ಆನಂದ್ ಮುಕುಟಕ್ಕೆ ಇದು ಮತ್ತೊಂದು ಗರಿ ಮೂಡಿಸಿದೆ.

ಚೆಸ್ ಈ ಹಿಂದೆ ನಮ್ಮ ದೇಶದ ಪುರಾಣ ಕಾಲಗಳಲ್ಲಿ ಚದುರಂಗ ಎಂಬ ಹೆಸರಿನಲ್ಲಿ ಆಡುತ್ತಿದ್ದ ಆಟವಾಗಿದೆ. ಈ ಬಗ್ಗೆ ಹಲವು ಉಲ್ಲೇಖಗಳಿವೆ. ಇಂದು ಈ ಆಟದಲ್ಲಿ ದೇಶದ ಪರವಾಗಿ ಅನೇಕ ಯುವ ಬಾಲಪ್ರತಿಭೆಗಳು ಮಿಂಚುತ್ತಿದ್ದಾರೆ. ಉದಾಹರಣೆಗೆ ಕೋನೇರುಹಂಪಿ, ಪೆಂಡ್ಯಾಲ ಹರಿಕೃಷ್ಣ, ಸೂರ್ಯಶೇಖರ್ ಗಂಗೂಲಿ, ಮಾಸ್ಟರ್ ಪರಿಮಾರ್ಜನ ನೇಗಿ, ತಾನ್ಯಾಸಚ್‌ದೇವ್‌ರಂತಹ ಚೆಸ್ ಆಟಗಾರರ ಹೆಸರುಗಳನ್ನು ಗುರ್ತಿಸಬಹುದು. ಇದು ನಮ್ಮ ಹಳ್ಳಿಗರು ಕೊರಳಪಟ್ಟಿಗಳಲ್ಲಿ ಹೊತ್ತುಕಳೆಯಲು ಹುಲಕಟ್ಟಿ ಎಂಬ ಹೆಸರಿನಲ್ಲಿ ಈ ಆಟ (ಚೆಸ್)ವನ್ನು ಆಡುವುದು ಗ್ರಾಮೀಣ ಹಿನ್ನೆಲೆಯುಳ್ಳವರಿಗೆ ತಿಳಿದೇ ಇರುತ್ತದೆ. ಈ ಆಟವೇ ಸ್ವಲ್ಪ ಆಧುನೀಕರಣಗೊಂಡಿದೆ ಅಷ್ಟೆ. ಇದರಲ್ಲಿ ಇದೀಗ ಭಾರತೀಯ ಚೆಸ್ ಧ್ರುವತಾರೆ ವಿಶ್ವನಾಥನ್ ಆನಂದ್ ಮೆಕ್ಸಿಕೋ ಸಿಟಿಯಲ್ಲಿ ನಡೆದ ಫೈನಲ್ ಪಂದ್ಯದಲ್ಲಿ ಹಂಗೇರಿಯ ಗ್ರ್ಯಾಂಡ್‌ಮಾಸ್ಟರ್ ಪೀಟರ್ ಲೆಖೊ ವಿರುದ್ಧ ಪಂದ್ಯವನ್ನು ಡ್ರಾ



ಮಾಡಿಕೊಳ್ಳುವ ಮೂಲಕ ವಿಶ್ವ ಚೆಸ್ ಪ್ರಶಸ್ತಿಯನ್ನು ತಮ್ಮದಾಗಿಸಿಕೊಂಡರು. ಈ ಹಿಂದೆ 2000ರಲ್ಲಿ (ಟೆಹರಾನ್‌ನಲ್ಲಿ) ಫಿಡೆ ವಿಶ್ವ ಚೆಸ್ ಚಾಂಪಿಯನ್ ಪ್ರಶಸ್ತಿಯನ್ನು ತನ್ನದಾಗಿಸಿಕೊಂಡಿದ್ದಾರೆ. ಆನಂದ್ ಅವರು ವಿಶ್ವದ ಎಂಟು ಮಂದಿ ಶ್ರೇಷ್ಠ ಆಟಗಾರರೊಂದಿಗೆ ಪೈಪೋಟಿ ನಡೆಸಿ 14 ಸುತ್ತುಗಳಲ್ಲಿ 9 ಪಾಯಿಂಟ್ ಗಳಿಸುವ ಮೂಲಕ ಪ್ರಶಸ್ತಿಯನ್ನು ಗಳಿಸಿದ್ದಾರೆ. ಇದರಿಂದ ಆನಂದ್ ಈ ಪ್ರಶಸ್ತಿಗಳಿಸಿದ ಪ್ರಥಮ ಭಾರತೀಯ ಹಾಗೂ ಮೊದಲ ಏಷ್ಯಾ ಆಟಗಾರ ಎಂಬ ದಾಖಲೆಯನ್ನು ತನ್ನದಾಗಿಸಿಕೊಂಡಿದ್ದಾರೆ.

ತಮಿಳುನಾಡಿನ ಚೆನ್ನೈ ಮೂಲದ 37ರ ಹರೆಯದ ಆನಂದ್ 1983ರಲ್ಲಿ ಮೊದಲ ಬಾರಿಗೆ ರಾಷ್ಟ್ರೀಯ ಸಬ್ ಜೂನಿಯರ್ ಪ್ರಶಸ್ತಿ ಪಡೆಯುವ ಮೂಲಕ ಚೆಸ್‌ನಲ್ಲಿ ತನ್ನದೇ ಆದ ಸ್ಥಾನ ಪಡೆದರು. ಇಲ್ಲಿ ಮುಂದುವರೆದ ಅವರ ಚೆಸ್ ಜೀವನದಲ್ಲಿ ಹಲವು ಏಳುಬೀಳನ್ನೂ ಕಂಡರು. ಆ ದೇಶದ ಚೆಸ್ ರಂಗಕ್ಕೆ ಹಲವು ಅಂತರರಾಷ್ಟ್ರೀಯ ಮಟ್ಟದ ಪ್ರಶಸ್ತಿಗಳನ್ನು ಗಳಿಸಿಕೊಟ್ಟಿದ್ದಾರೆ.

- ಪಿ.ಎನ್.ಶ್ರೀರಂಗ ನಾಯಕ್

ಕರ್ನಾಟಕ: ಈಜ
ಚಾಂಪಿಯನ್

61ನೇ ರಾಷ್ಟ್ರೀಯ ಈಜು ಚಾಂಪಿ
ಸ್ಪರ್ಧೆ ಇತ್ತೀಚೆಗೆ ಗೋವಾ ರಾಜ
ಪಣಜಿಯಲ್ಲಿ ನಡೆಯಿತು. ಈ ಸ್ಪರ್ಧೆ
ಕರ್ನಾಟಕ ಒಟ್ಟು 411 ಪಾಯಿಂಟ್
ಅಗ್ರಸ್ಥಾನ ಪಡೆದು ರಾಷ್ಟ್ರೀಯ ಚಾಂಪಿಯನ
ಹೊರ ಹೊಮ್ಮಿದೆ. ಕರ್ನಾಟಕ ಈಜು
24 ಚಿನ್ನದ ಪದಕ, 22 ಬೆಳ್ಳಿ ಹಾಗೂ
ಕಂಚಿನ ಪದಕಗಳನ್ನು ಗಳಿಸಿ ಪದಕ ಪಟ್ಟಿ
ಅಗ್ರಸ್ಥಾನ ಪಡೆಯಿತು.

ರಾಜ್ಯದ ಈಜು ಸ್ಪರ್ಧಿಗಳಾದ
ಟಂಡನ್, ಎನ್.ಎ. ಸಂದೀಪ್,
ತೇಜಸ್ವಿನಿ, ಪೂಜಾ ಆರ್.ಆಳ್ವ,
ಮಹಾಜನ್, ಅವರು ಪುರುಷ ಮತ್ತು ಮ
ವಿಭಾಗಗಳಲ್ಲಿ ಚಿನ್ನದ ಪದಕಗಳನ್ನು
ಈಜಿನಲ್ಲಿ ಹೊಸ ದಾಖಲೆ ಬರೆದಿದ್ದಾರೆ.



ರೀತಿ ಪುರುಷ ವಿಭಾಗದಲ್ಲಿ ರೆಹಾನ್
33 ಪದಕಗಳನ್ನು ಹಾಗೂ ಮಹಿಳಾ ವಿಭಾ
ಪೋಲೀಸ್ ತಂಡದ ರಿಚಾಮಿಶ್ರಾ
ಪದಕಗಳನ್ನು ಗಳಿಸಿ ವೈಯಕ್ತಿಕ ಚಾಂಪಿ
ಪಟ್ಟವನ್ನು ಪಡೆದರು. ರಾಜ್ಯದ
ಪಟುಗಳು ರಾಷ್ಟ್ರೀಯ ಚಾಂಪಿ
ಗಳಾಗಿರುವುದು ರಾಜ್ಯಕ್ಕೆ ಹೆಮ್
ಸಂಗತಿಯಾಗಿದೆ.

JANASHAKTHI KANNADA VARA PATRIKE : Printed by G.N.NAGARAJ, No 12. 18th Cross, S.R.Nagar, BANGALORE-560027 Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, 12. 18th Cross, S.R.Nagar, BANGALORE - 560 027 Karnataka (State) and Published at BANGALORE No 12. 18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor: S.Y.GURUSHANTH